ಅನೇಕ ಕಡೆ ಬೆಂಕಿ ಬಿದ್ದು ಸಾಕಷ್ಟು ಅನಾಹುತಗಳಾಗಿವೆ. ಇಂತಹ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಸೆಷನ್‌ನ್ನು ಬೇಕಾದರೆ ಈ ತಿಂಗಳ ೨೩–೨೪ರವರೆಗೆ ಮುಂದುವರೆಸೋಣ.

SRI QAMARUL ISLAM.—I fully agree that this issue is very important but more important is the situation in the State regarding law and order. We all request that in whatever form you want to take, you kindly assure this House that the Golibar that has taken place in Gulbarga and the deaths in Ballary, Shahabad and Aurad, should be taken up immediately. The session can be extended for one or two days more.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಮೀಸಲಾತಿ ಬಗ್ಗೆ ತಾವು ಆ ಪಾರ್ಟಿಗೆ ಇಷ್ಟು, ಈ ಪಾರ್ಟಿಗೆ ಇಷ್ಟು ಎಂದು ಎಷ್ಟು ಟೈಮ್ ಫಿಕ್ಸ್ ಮಾಡಿದ್ದೀರಿ. ಹೀಗೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು.—ನನ್ನ ಸೂಚನೆ ಏನು ಅಂದರೆ, ಈ ಮೀಸಲಾತಿ ನಿರ್ಣಯಕ್ಕೆ ನಮ್ಮ ಒಪ್ಪಿಗೆ ಕೊಡಬೇಕು ಎಂದು ಚರ್ಚೆಯನ್ನು ಈಗ ಪ್ರಾರಂಭ ಮಾಡಿದ್ದೇವೆ. ನಾನು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯುತ್ತೇನೆ. ಅಲ್ಲಿ ಕುಳಿತು ರೈತರ ಸಮಸ್ಯೆಗಳು ಮತ್ತು ಲಾ ಅಂಡ್ ಆರ್ಡರ್ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದನ್ನು ಇತ್ಯರ್ಥ ಮಾಡೋಣ.

೮. ಸರ್ಕಾರಿ ನಿರ್ಣಯ

"ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕೃತವಾದ ರೂಪದಲ್ಲಿರುವ ಸಂವಿಧಾನದ ೩೬೮ (೨)ನೇ (ಡಿ) ಅನುಚ್ಛೇದದ ಪರಿಚ್ಛೇದಕ್ಕೆ ಮಾಡಲು ಉದ್ದೇಶಿಸಿರುವ ೧೯೯೯ನೇ ಇಸವಿಯ ಸಂವಿಧಾನದ (೮೨ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುವುದು"

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ನಿರ್ಣಯ ಈ ರೀತಿ ಇದೆ :

"ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕೃತವಾದ ರೂಪದಲ್ಲಿರುವ ಸಂವಿಧಾನದ ೩೬೮ (೨)ನೇ (ಡಿ) ಅನುಚ್ಛೇದದ ಪರಿಚ್ಛೇದಕ್ಕೆ ಮಾಡಲು ಉದ್ದೇಶಿಸಿರುವ ೧೯೯೯ನೇ ಇಸವಿಯ ಸಂವಿಧಾನದ (೮೨ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುವುದು."

ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಅನುಚ್ಛೇದದ ತಿದ್ದುಪಡಿಯನ್ನು ಲೋಕಸಭೆ ಮತ್ತು ರಾಜ್ಯಸಭೆ ಮಂಜೂರಾತಿಮಾಡಿದ ಮೇಲೆ, ಇಡೀ ರಾಷ್ಟ್ರದ ಶೇಕಡ ೫೦ ರಾಜ್ಯಗಳೂ ಕೂಡ ಇದನ್ನು ಸ್ಥಿರೀಕರಿಸತಕ್ಕಂಥ ಅವಶ್ಯಕತೆಯಿರುವುದರಿಂದ ಇದು ಇವತ್ತು ಸದನದ ಮುಂದೆ ಬಂದಿದೆ. ಸನ್ಮಾನ್ಯ ಅಧ್ಯಕ್ಷರೆ, ತಮಗೆ ತಿಳಿದ ಪ್ರಕಾರ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜಾತಿಯವರಿಗೆ ಕೊಡತಕ್ಕಂಥ ಯಾವ ಮೀಸಲಾತಿ ಇದೆ, ಅದನ್ನು ಈಗ ನಾವು ನಾಲ್ಕನೇ ಬಾರಿ ಮುಂದುವರಿಸುತ್ತಿದ್ದೇವೆ. ಸಂವಿಧಾನದ ೧ನೇ ತಿದ್ದುಪಡಿ ೧೯೫೧ರಲ್ಲಿ ಒಮ್ಮೆ ಆಯಿತು. ನಂತರ ೧೯೭೦ರಲ್ಲಿ ಎರಡನೇ ಬಾರಿ ಆಯಿತು, ತದನಂತರ ಮೂರನೇ ಬಾರಿ ೧೯೮೦ರಲ್ಲಿ ಆಯಿತು. ಈಗ ೧೯೯೦ರಲ್ಲಿ ೪ನೇ ಬಾರಿ ಸಂವಿಧಾನದ ೩೩೫ನೇ ಪರಿಚ್ಛೇದಕ್ಕೆ ಮೀಸಲಾತಿಯ ಬಗ್ಗೆ ತಿದ್ದುಪಡಿಯನ್ನು ತಂದು ಅದಕ್ಕೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಜೂರಾತಿಯಾಗಿದೆ. ಅದನ್ನು ಇವತ್ತು ನಾವು ಸ್ಥಿರೀಕರಿಸಬೇಕಾಗಿದೆ. ಅದನ್ನು ಇವತ್ತೇ ಸ್ಥಿರೀಕರಿಸಬೇಕು ಎಂಬ ಒತ್ತಾಯ ಏಕೆಂದರೆ, ಜನವರಿ ೨೬ಕ್ಕೆ ರಾಷ್ಟ್ರಪತಿಗಳ ಅಂಕಿತ ಕೂಡ ಆಗಬೇಕಾಗಿದೆ. ಕರ್ನಾಟಕ ರಾಜ್ಯ ಮೀಸಲಾತಿ ನೀತಿಯಲ್ಲಿ ಅದರಲ್ಲೂ ಕೂಡ ದುರ್ಬಲವರ್ಗದವರ ಅಭ್ಯುದಯದಲ್ಲಿ ಯಾವಾಗಲೂ ಐತಿಹಾಸಿಕವಾದಂಥ ಪಾತ್ರವನ್ನು ವಹಿಸಿಕೊಂಡೇ ಬಂದಿದೆ. ಆದುದ

---

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಿಂದ ನಾವು ಇದನ್ನು ಇವತ್ತು ಸ್ಥಿರೀಕರಿಸದಿದ್ದರೆ ಒಂದು ವೇಳೆ ನಾವು ರಾಷ್ಟ್ರಪತಿಗಳ ಅಂಕಿತ ಆಗುವ ಮೊದಲು ಸ್ಥಿರೀಕರಣ ಮಾಡದೇ ಇದ್ದರೆ ಬಹುಶಃ ದೊಡ್ಡ ಅಪರಾಧ ನಮ್ಮ ಕರ್ನಾಟಕ ರಾಜ್ಯದವ ರಿಂದ ಆಗಬಹುದು, ಆದುದರಿಂದ ಸನ್ಮಾನ್ಯ ಅಧ್ಯಕ್ಷರಲ್ಲಿ ಮತ್ತು ಸನ್ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ. ಈ ಒಂದು ಸ್ಥಿರೀಕರಣದ ಯಾವ ಒಂದು ಐತಿಹಾಸಿಕವಾದಂಥ ತಿದ್ದುಪಡಿ ಮಸೂದೆ ಇದೆ, ಅದನ್ನು ಇವತ್ತೇ ಸ್ಥಿರೀಕರಣ ಮಾಡತಕ್ಕಂಥಾದ್ದಕ್ಕೆ ಎಲ್ಲರೂ ಸಹಕಾರ ಕೊಡಬೇಕು ಎಂದು ವಿನಂತಿಮಾಡಿಕೊಂಡು, ಈ ಬಗ್ಗೆ ಚರ್ಚೆ ಪ್ರಾರಂಭ ಮಾಡಲಿಕ್ಕೆ ತಾವು ಅನುಮತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮಂಡನೆ ಮಾಡಿದಂಥ ಈ ಒಂದು ಠರಾವನ್ನು ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲದೆ ಒಪ್ಪಿಕೊಳ್ಳುತ್ತೇನೆ. ಹಾಗೆ ಒಪ್ಪಿಕೊಳ್ಳುವಾಗ ಒಂದೆರಡು ವಿಚಾರ ಗಳನ್ನು ಪ್ರಸ್ತಾಪ ಮಾಡಬೇಕು ಎಂದು ಬಯಸಿದ್ದೇನೆ. ಮೀಸಲಾತಿಯ ಬಗ್ಗೆ ರಾಷ್ಟ್ರೀಯ ರಂಗದ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ರಾಷ್ಟ್ರೀಯ ರಂಗದ ಸರ್ಕಾರಕ್ಕೆ ಇರತಕ್ಕಂಥ ಕಳಕಳಿಯನ್ನು ಅಭಿವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ಹೊಸ ಸಂಸತ್ತನ್ನು ಮತ್ತು ಹೊಸ ಕೇಂದ್ರ ಸರ್ಕಾರವನ್ನು ತಮ್ಮ ಮೂಲಕ ಅಭಿನಂದಿಸುತ್ತೇನೆ. ಮೀಸಲಾತಿಯನ್ನು ವಿಸ್ತರಿಸುವಾಗ ನಿಮಗೆ ನಮ್ಮ ಸಹಕಾರ ಬೇಕಾಗಿಲ್ಲ, ಅಥವಾ ನಮಗೆ ನಿಮ್ಮ ಸಹಕಾರ ಬೇಕಾಗಿಲ್ಲ. ನಮ್ಮಿಬ್ಬರ ಸಹಕಾರವೂ ಸಮಾಜದಲ್ಲಿ ಶೋಷಣೆಗೆ ಸಿಕ್ಕಿರತಕ್ಕಂಥ ಈ ಜನರ ಬಗ್ಗೆ ಇದೆ. ಸ್ವಾತಂತ್ರ್ಯ ಬಂದು ೪೦–೪೫ ವರ್ಷಗಳ ನಂತರವೂ ಯಾವ ಒಂದು ಸದುದ್ದೇಶದಿಂದ ಈ ಕಾರ್ಯವನ್ನು ರಾಜ್ಯಾಂಗ ಪಿತೃಗಳು ಮಾಡಿದರು, ಆ ಒಂದು ಕಾರ್ಯ ಯಶಸ್ವಿಯಾಗಿ ನಡೆಯದೇ ಇರತಕ್ಕ ತಪ್ಪನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಇದನ್ನು ವಿಸ್ತರಣೆ ಮಾಡುವಾಗ ಆ ಒಂದು ಕಾರ್ಯ ಆಗಿಲ್ಲ ಎನ್ನುವ ಅಂಶವನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಇದಕ್ಕೆ ಕಾರಣರು ಯಾರು? ಪರಿಸ್ಥಿತಿ ಏನು? ಎನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. ದುರ್ದೈವದ ಸಂಗತಿ ಏನೆಂದರೆ, ಮೀಸಲಾತಿ ವ್ಯಾಪ್ತಿಗೆ ಬರುವುದಕ್ಕೆ ಹೆಚ್ಚು ಹೆಚ್ಚು ಸಂಖ್ಯೆಯ ಬೇರೆ ಬೇರೆ ಜಾತಿಯ ವರ್ಗಗಳು ಪ್ರಯತ್ನ ಮಾಡುತ್ತಿವೆ. ಇದರ ಮೂಲ ಉದ್ದೇಶ ಏನು? ನನಗೆ ಗೊತ್ತಿರುವ ಹಾಗೆ ಯಾರು "ಅಸ್ಪೃಶ್ಯರು" ಎಂದು ಇದ್ದಾರೆ. ಅಂಥವರಿಗೆ ವಿಶೇಷವಾದಂಥ ಮೀಸಲಾತಿ ಇರಬೇಕು. ಎಲ್ಲಿಯವರೆಗೆ ಅವರು ಸಮಾಜದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾನತೆಯನ್ನು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲವೋ, ಅಲ್ಲಿಯವರೆಗೆ ಈ ಒಂದು ಮೀಸಲಾತಿಯ ಅಗತ್ಯ ಇದೆ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದರು. ಇತ್ತೀಚಿನ ಒಂದು ಉದಾಹರಣೆಯನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ನಡೆದಂಥ ಚುನಾವಣೆಯಲ್ಲಿ ಬೀದರ್ ಮೀಸಲು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಪ್ರಸಂಗ ನಡೆಯಿತು. ಸನ್ಮಾನ್ಯ ಬಸವಲಿಂಗಪ್ಪ ನವರು ಇದನ್ನು ಗಮನಿಸಿರಬಹುದೆಂದು ಭಾವನೆ ಮಾಡುತ್ತೇನೆ. ಅಲ್ಲಿ ಬೇಡ ಜಂಗಮ ಜಾತಿ ಕೂಡ ಮೀಸಲಾತಿಯ ವ್ಯಾಪ್ತಿಗೆ ಬರುವುದರಿಂದ ನಮಗೆ ಈ ಸಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿದರು. ಚುನಾವಣೆಯ ಅಧಿಕಾರಿ ಅವರಿಗೆ ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಕೊಟ್ಟರು. ಚುನಾವಣೆ ಮುಗಿಯಿತು. ಈಗ ಇದರ ಒಂದು ತಕರಾರು ಅರ್ಜಿ ಶ್ರೇಷ್ಠ ನ್ಯಾಯಾಲಯದ ಮುಂದೆ ಬಂದಿದೆ. ಈ ತಕರಾರು ಅರ್ಜಿ ತೀರ್ಮಾನ ಆಗುವುದರಲ್ಲಿ ಮುಂದಿನ ಚುನಾವಣೆ ಬರಬಹುದು. ಯಾವ ಒಂದು ಕಾರ್ಯವನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ಹೊರಿಸಲಾಗಿತ್ತೋ ಅವರೇ ಇಂಥ ತಪ್ಪುಗಳನ್ನು ಮಾಡಿರುವುದರಿಂದ. ಅವರನ್ನು ತತ್‌ಕ್ಷಣ ಶಿಕ್ಷೆಗೆ ಗುರಿ ಪಡಿಸುವ ಕ್ರಮ ತೆಗೆದುಕೊಳ್ಳುತ್ತೀರಾ? ಇಂಥವರು ನನ್ನ ದೃಷ್ಟಿಯಲ್ಲಿ ಮೀಸ ಲಾತಿ ವಿರೋಧಿಗಳು. ಬೇಡ ಜಂಗಮ ಎಂದು ಹೇಳಿದ ಕೂಡಲೇ ಅವರನ್ನು ಮೀಸಲಾತಿಯ ವ್ಯಾಪ್ತಿಗೆ ತಂದು ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟರು. ಇನ್ನು ಮುಂದೆಯಾದರೂ ಮೀಸಲಾತಿಯ ಒಟ್ಟು ಅರ್ಥ, ವ್ಯಾಖ್ಯಾನ ಮತ್ತು ಅದರ ಹಿಂದೆ ಇರತಕ್ಕ ಭಾವನೆಗಳಿಗೆ ಕಳಂಕ ತರದ ಹಾಗೆ ಈ ಸರ್ಕಾರ ಪ್ರಯತ್ನ ಮಾಡಬೇಕು. ಎಲ್ಲಾಕ್ಕಿಂತಲು ಮಿಗಿಲಾಗಿ ಅಧಿಕಾರಿಗಳನ್ನು ಆಯ್ಕೆ ಮಾಡತಕ್ಕ ಸಂದರ್ಭದಲ್ಲಿ ಈ ಅಂಶವನ್ನು ವಿಶೇಷವಾಗಿ ಸರ್ಕಾರದ ಗಮನಕ್ಕೆ ಬರಬೇಕು. ಏಕೆಂದರೆ, ಈ ದೇಶದ ಸಹಸ್ರಾರು ವರ್ಷಗಳಿಂದ ಬಡತನ, ಅಸಮಾನತೆ ಹಾಗೂ ಅವಿದ್ಯೆ ಇವುಗಳಿಂದ ತುಂಬಿರುವಾಗ ನಮ್ಮನ್ನು ಎಷ್ಟು ದೂರ ಬೇಕಾದರೂ ಕೊಂಡೊಯ್ಯಬಹುದು. ಐದು ಸಹಸ್ರ ವರ್ಷಗಳಿಂದಲೂ ಶೋಷಣೆಗೆ ಸಿಕ್ಕಿದ ಈ ಒಂದು ವರ್ಗವನ್ನು ೪೦–೫೦ ವರ್ಷಗಳಲ್ಲಿ ಸಮಾನತೆಗೆ ತರುತ್ತೇವೆನ್ನುವ ವಿಶ್ವಾಸದ ಮಾತು ಬಹಳ ಕಷ್ಟಕ್ಕೆ ಬರುತ್ತದೆ. ಈ ಮಧ್ಯೆ ಹೊಸ ವೇಷ ಹಾಕಿಕೊಂಡು ಬೇರೆಯವರು

ಮೀಸಲಾತಿ ವ್ಯಾಪ್ತಿಗೆ ಬರತಕ್ಕಂಥ ಪ್ರಯತ್ನ ಕೂಡ ನಡೆಯುತ್ತಲೇ ಇದೆ. ವಸ್ತುಸ್ಥಿತಿ ಹೀಗಿರುವಾಗ ಈ ವಿಚಾರದಲ್ಲಿ ಜಾಗರೂಕತೆಯಿಂದ ಸರ್ಕಾರ ತನ್ನ ಕರ್ತವ್ಯವನ್ನು ಮಾಡಬೇಕಾಗಿದೆ.

ಜೊತೆಗೆ ನಮ್ಮ ಕರ್ನಾಟಕದಿಂದಲೂ ಅನೇಕ ಜಾತಿಗಳನು ಉಪಜಾತಿಗಳನ್ನು ಮೀಸಲಾತಿ ವ್ಯಾಪ್ತಿಗೆ ತರಬೇಕೆಂದು ಹೇಳಿ ಶಾಸನ ಸಭೆಯ ಮೂಲಕ ಕೂಡ ನಾವು ಕೇಂದ್ರಸರ್ಕಾರವನ್ನು ಕೇಳಿದ್ದೇವೆ. ಅವು ನಿರ್ಣಯ ಆಗದೇ ಹಾಗಯೇ ಉಳಿದಿವೆ. ಇವು ಯಾವುವು ಎಷ್ಟು ಇವೆ. ಇದಕ್ಕೆ ಕಾರಣ ಏನು ಎಂಬುದನ್ನೂ ಕೂಡ ಈ ಸಂದರ್ಭದಲ್ಲಿ ಗಮನಿಸಬೇಕೆಂದು ಹೇಳುತ್ತೇನೆ. ಜೊತೆಗೆ ೪೦ ವರ್ಷಗಳ ಕಾಲ ಮೀಸಲಾತಿಯ ಲಾಭ ಪಡೆದಂಥ ಮುಖಂಡರುಗಳು ಏನಿದ್ದಾರೆ. ಇವರು ಕೂಡ ಸ್ವಲ್ಪ ತ್ಯಾಗಕ್ಕೆ ತಯಾರಾಗಬೇಕು ಹಾಗೆ ತ್ಯಾಗಕ್ಕೆ ತಯಾರಾಗವಿದ್ದರೆ ಮತ್ತೆ ಅನೇಕ ರೀತಿಯ ಘರ್ಷಣೆಗಳು ಪ್ರಾರಂಭವಾಗಬಹುದು, ಈ ವಿಷಯಗಳು ಅಲ್ಲಲ್ಲಿ ಪ್ರಸ್ತಾಪವಾಗಿ...

ಶ್ರೀ ಬಿ. ಬಸವಲಿಂಗಪ್ಪ.—ತ್ಯಾಗ ಹೇಗೆ ಮಾಡಬೇಕು ಎಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ,—ತ್ಯಾಗ ಹೇಗೆ ಮಾಡಬೇಕೆಂಬುದನ್ನು ನೀವೆ ನಿರ್ಧಾರ ಮಾಡಬೇಕು. ಬಸವಲಿಂಗಪ್ಪನವರಿಗೆ ಮೀಸಲಾತಿ ಬೇಡ ಅಂತೆ ಅಷ್ಟೆ.

ಶ್ರೀ ಕರಿಯಣ್ಣ.—ಈಗ ತಾವು ಬಸವಲಿಂಗಪ್ಪನವರಿಗೆ ಮೀಸಲಾತಿ ಬೇಡ ಎಂದು ಹೇಳುತ್ತಿದ್ದೀರಿ ಆದರೆ ತಾವು ಬಸವಲಿಂಗಪ್ಪನವರ ಜಾತಿಯ ಬಗ್ಗೆ ಹೇಳುವುದನ್ನು ಬಿಡುವುದಿಲ್ಲವಲ್ಲ ಅವರು ಹರಿಜನರಾಗಿ ಹುಟ್ಟಿದ್ದಾರೆಂದು ಹೇಳುವುದನ್ನು ತಾವು ಬಿಡುವುದಿಲ್ಲ. ಈ ರೀತಿ ಹೇಳುವುದನ್ನು ತಾವು ಎಲ್ಲಿಯವರೆಗೆ ಬಿಡುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಮೀಸಲಾತಿ ಬೇಕೇ ಬೇಕು. ಅದನ್ನು ಕೊಡಲೇ ಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ನನ್ನ ಬಗ್ಗೆ ತಪ್ಪು ತಿಳಿದುಕೊಂಡಿರಿ ಬಸವಲಿಂಗಪ್ಪನವರನ್ನು ಸಣ್ಣವರನ್ನಾಗಿ ಮಾಡಬೇಡಿ, ಅವರು ದೊಡ್ಡವರು ಆಗಲಿ ಎಂದು ಹೇಳಿದೆ. ನಾವು ಅವರು ದೊಡ್ಡವರಾಗಿರುವುದನ್ನು ನೋಡಿ ಸಂತೋಷಪಡಬೇಕು. ಈಗ ಚಿತ್ರದುರ್ಗದಲ್ಲಿ ಒಂದು ಗಲಾಟೆ ನಡೆಯಿತು. ಇದು ಏತಕ್ಕೆ ನಡೆಯಿತು, ಯಾರು ಕಾರಣರು. ಶ್ರೀಮಾನ್ ರಂಗನಾಥ್ ವಿರುದ್ಧ ಮತ್ತು ಪರ ಇಂತಹ ಪ್ರಸಂಗಗಳು ಭವಿಷ್ಯದಲ್ಲಿ ಮೀಸಲಾತಿ ವ್ಯಾಪ್ತಿಗೆ ಬರತಕ್ಕಂಥ ಜನರ ಮಧ್ಯೆ ಸಂಘರ್ಷಣೆ ಮಾಡಬಹುದು, ಆ ಕಾರಣದಿಂದಲೇ ನೀವು ತ್ಯಾಗಕ್ಕೆ ಸಿದ್ಧರಾಗಿರಿ ಎಂದು ಹೇಳಿದ್ದು ಅಷ್ಟೆ. ಹೊರತು ಅದಕ್ಕಿಂತಲೂ ಮಿಗಿಲಾದ ಚರ್ಚೆ ನನ್ನದು ಅಲ್ಲ. ಒಟ್ಟಾರೆ ಈ ಒಂದು ಕಾರ್ಯಕ್ರಮ, ಈ ಒಂದು ಠರಾವು ಸರ್ವಸಮ್ಮತವಾಗಿ ಒಪ್ಪಲೇ ಬೇಕಾದಂಥ ಒಂದು ಠರಾವು. ಈ ಠರಾವನ್ನು ಸಂಸದೀಯ ಮಂತ್ರಿಗಳು ಮಂಡಿಸಿದ್ದಾರೆ. ನನ್ನ ಮತ್ತು ನನ್ನ ಪಕ್ಷದ ವತಿಯಿಂದ ಸಂಪೂರ್ಣವಾದಂಥ ಒಪ್ಪಿಗೆಯನ್ನು ಇದಕ್ಕೆ ಕೊಡುತ್ತೇನೆ. ಅದಕ್ಕಾಗಿಯೇ ನಾನು ಮೊದಲು ಹೇಳಿದೆ, ನನ್ನ ಒಪ್ಪಿಗೆ ಅಥವಾ ನಿಮ್ಮ ಒಪ್ಪಿಗೆ ಎರಡು ಒಪ್ಪಿಗೆಗಳು ಅನಾವಶ್ಯಕ ಇಬ್ಬರ ಒಪ್ಪಿಗೆಯೂ ಕೂಡ ಈ ಶೋಷಣೆಗೆ ಸಿಕ್ಕಿರತಕ್ಕ ಸಮಾಜದ ಒಳಿತಿನ ಕಡೆಗೆ ಇರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ತಂದಂಥ ಈ ಒಂದು ೬೨ನೇ ಅಮೆಂಡ್‌ಮೆಂಟನ್ನು ಈ ಸದನದಲ್ಲಿ ನಾವು ಒಮ್ಮತದಿಂದ ರ್‍ಯಾಟಿಫೈ ಮಾಡುತ್ತಿದ್ದೇವೆ. ಹಿಂದಿನ ಕಲಮು ಹಾಗೂ ಈ ೬೨ನೇ ಅಮೆಂಡಮೆಂಟ್‌ಗೆ ಒಪ್ಪಿಗೆ ಕೊಟ್ಟರೆ ಮುಂದಿನ ಹತ್ತು ವರ್ಷಗಳ ಕಾಲ ಈ ರಿಸರ್ವೇಷನನ್ನು ನಾವು ಈ ದೇಶದಲ್ಲಿರುವ ಹಿಂದುಳಿದಂಥವರಿಗೆ ಹರಿಜನ–ಗಿರಿಜನರಿಗೆ, ಮತ್ತು ಆಂಗ್ಲೋ ಇಂಡಿಯನ್ಸ್‌ಗೆ ಲೆಜಿಸ್ಲೇಚರ್ ಮತ್ತು ಪಾರ್ಲಿಮೆಂಟಿನಲ್ಲಿ ಕೆಲವು ಸ್ಥಾನಗಳನ್ನು ಮೀಸಲಿಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅನೇಕ ಜನ ಈ ರೀತಿ ಎಕ್ಸ್‌ಟೆನ್‌ಷನ್ ಕೊಡುವಾಗ, ಅಥವಾ ಈ ಎಕ್ಸ್‌ಟೆನ್‌ಷನ್ ಪುನಃ ಹತ್ತು ವರ್ಷ ಮುಂದುವರೆದಿದೆ ಎಂಬ ಕಾರಣಕ್ಕೆ ಬಹಳಷ್ಟು ಕಡೆ ಅಜಿಟೇಷನ್ ಕೂಡ ಮಾಡುತ್ತಿದ್ದಾರೆ. ಅದು ತಮ್ಮ ಗಮನಕ್ಕೂ, ಈ ಸದನದ ಗಮನಕ್ಕೂ ಕೂಡ ಬಂದಿದೆ.

೧೨–೦೦ ಮಧ್ಯಾಹ್ನ

ಮೀಸಲಾತಿಯ ಬಗ್ಗೆ ಕೆಲವರು ಅನೇಕ ರೀತಿಯ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಿದ್ದಾರೆ. ೪೦ ವರ್ಷವಾಯಿತು ಅವರಿಗೆ ಇನ್ನೂ ರಿಸರ್ವೇಷನ್ ಕೊಡುವುದು ಬೇಡ, ಇನ್ನೂ ಎಷ್ಟು ದಿವಸ ಮೀಸಲಾತಿಯನ್ನು ನೀಡುತ್ತೀರಿ ಅನ್ನತಕ್ಕಂಥದ್ದು ಪದೇ ಪದೇ ಕೇಳಿ ಬರುತ್ತಿದೆ. ಎಲ್ಲಿಯವರೆಗೆ ಈ ದೇಶದಲ್ಲಿ ಅನ್‌ಟಚ್‌ಬಲಿಟಿ ಇರುತ್ತದೋ ಅಲ್ಲಿಯವರೆಗೆ ಇದನ್ನು ಮುಂದುವರಿಸಿಕೊಂಡು ಹೋಗುವುದು ಅವಶ್ಯ ಇದೆ ಅನ್ನತಕ್ಕಂತಹ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಏನೂ ಹೇಳಿದರು, ಅದನ್ನು ನಾನೂ

ಕೂಡ ಒಪ್ಪುತ್ತೇನೆ. ಸಂವಿಧಾನದ ೧೬ (೪) ೧೫ (೪)ರ ಪ್ರಕಾರ ಕೆಲವು ಸವಲತ್ತುಗಳನು ಕೊಟ್ಟಿದ್ದಾರೆ. ಅದರಲ್ಲಿ ಟೈಮ್ ಲಿಮಿಟ್ ಇಲ್ಲ. ಹಿಂದೂ ಸಮಾಜದಲ್ಲಿ ಬೇರೆ ಜನ ಯಾರು ಇದ್ದಾರೆ ಅವರ ಸರಿ ಸಮಾನವಾಗಿ ಇವರು ಬರುವವರೆಗೆ ಇವರಿಗೆ ಕೆಲವೊಂದು ಸವಲತ್ತು ಕೊಡಬೇಕೆಂಬ ದೃಷ್ಟಿಯಿಂದ ಸಂವಿಧಾನದಲ್ಲಿ ಅವರಿಗೆ ಈ ಸವಲತ್ತುಗಳನ್ನು ಕೊಟ್ಟಿದ್ದಾರೆ. ಇದನ್ನು ಕೇವಲ ಹತ್ತು ವರ್ಷಗಳಲ್ಲಿ ಮಾಡುತ್ತೇವೆ ಅನ್ನತಕ್ಕಂತಹ ಒಂದು ಅಭಿಮಾನದಿಂದ ಜಾರಿಗೆ ತಂದರು. ಆದರೆ ಆ ಹತ್ತು ವರ್ಷ ಹೋಗಿ ೪೦ ವರ್ಷವಾದರೂ ಕೂಡ ನಾವು ಏನು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟು ಸಾಧನೆ ಮಾಡುವುದಕ್ಕೆ ಆಗಲಿಲ್ಲ. ಇದಕ್ಕೆ ಅನೇಕ ಕಾರಣಗಳು ಇರಬಹುದು. ಕಾಂಗ್ರೆಸ್ ಸರಕಾರ ಇತ್ತು. ಜನತಾ ಸರಕಾರ ಇತ್ತು ಅವರು ಮನಸ್ಸಿಟ್ಟು ಯಾವ ರೀತಿಯಾಗಿ ಎಷ್ಟರ ಮಟ್ಟಿಗೆ ಕೆಲಸ ಮಾಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಮಾಡಿಲ್ಲ ಎಂದು ಕೆಲವು ಜನ ಹೇಳಬಹುದು. ಎಲ್ಲಾ ಕಡೆ ಎಂಪ್ಲಾಯ್‌ಮೆಂಟ್ ಅಪೊರ್ಚ್ಯುನಿಟೀಸ್ ಅನ್ನು ಅವರಿಗೆ ಕೊಟ್ಟಿದ್ದೇವೆ, ಆದರೂ ಕೂಡ ಏಕೆ ಇವರು ಮುಂದೆ ಬರುವುದಕ್ಕೆ ಆಗಿಲ್ಲವೆಂದು ನಾವು ಕೇಳಬಹುದು. ನಮ್ಮ ಕರ್ನಾಟಕ ರಾಜ್ಯದಲ್ಲಿನ ಮುಂದುವರಿದಂತಹ ಸಮಾಜದವರೆಂದು ಹೇಳಿಕೊಳ್ಳತಕ್ಕಂತಹ ಐ.ಎ.ಎಸ್. ಐ ಪಿ.ಎಸ್. ಅಧಿಕಾರಿಗಳು ಯಾರು ಇದ್ದಾರೆ ಇವರ ಜೊತೆಯಲ್ಲಿ ಅವರು ಏಕೆ ಕಾಂಪೀಟ್ ಮಾಡುತ್ತಿಲ್ಲ ಎಂದು ನಾವು ಅವರನ್ನು ಕೇಳಬಹುದು. ಲೋಕ ಸಭಾ ಡಿಬೇಟ್‌ನಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಕೇಡರ್‌ನಲ್ಲಿ ಎಷ್ಟು ಪರ್ಸೆಂಟ್ ಇದ್ದಾರೆ ಎಂಬುದನ್ನು ಪುಟ–೪೨ರಲ್ಲಿ ಕೊಟ್ಟಿದ್ದಾರೆ. ಸೆಂಟ್ರಲ್ ಸರ್ವೀಸ್‌ನ ಎ.ಬಿ.ಸಿ.ಡಿ. ಕೆಟಗರಿಯಲ್ಲಿ ಎಷ್ಟೆಷ್ಟು ಪರ್ಸೆಂಟ್‌ನಷ್ಟು ಜನ ಕೆಲಸ ಮಾಡುತ್ತಿದ್ದಾರೆಂಬ ವಿವರಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ತಮ್ಮ ಮುಂದೆ ಇಡುತ್ತೇನೆ. 'ಎ' ಗ್ರೇಡ್‌ನಲ್ಲಿ ೮.೩೩ ಪರ್ಸೆಂಟ್ .ಬಿ–ಗ್ರೇಡ್‌ನಲ್ಲಿ–೧.೪೦ ಪರ್ಸೆಂಟ್ 'ಸಿ–ಗ್ರೇಡ್‌ನಲ್ಲಿ ೧೪.೪೬ ಪರ್ಸೆಂಟ್ 'ಡಿ' ಗ್ರೇಡ್‌ನಲ್ಲಿ ೨೧.೯ ಪರ್ಸೆಂಟ್. ಇದ್ದಾರೆ ಡಿ ಗ್ರೇಡ್ ಅಂದರೆ ಸ್ವೀಪರ್ ಸ್ಕ್ಯಾವೆಂಜರ್ ಫೋರ್ ಆಗಿ ಕೆಲಸ ಮಾಡುವವರು ಮಾತ್ರ, ಇದರಲ್ಲಿ ೨೦ ಪರ್ಸೆಂಟ್ ಇದ್ದಾರೆ. ಉಳಿದಂತಹ ಕೆಟಗರಿಯಲ್ಲಿ ಹೆಚ್ಚು ಪರ್ಸೆಂಟ್ ಇಲ್ಲ. ಸರಕಾರ ಇವರನ್ನು ಮುಂದೆ ತರುವುದಕ್ಕೆ ಎಷ್ಟೇ ಮನಸ್ಸು ಮಾಡಿದರೂ ಕೂಡ ಸಂವಿಧಾನದಲ್ಲಿ ಅನೇಕ ಸೌಲಭ್ಯಗಳು ಇದ್ದರೂ ಕೂಡ ಎಸ್ ಸಿ ಎಸ್.ಟಿ. ಕಮೀಷನ್ ಇದ್ದರೂ ಕೂಡ ಎಲ್ಲಾ ಕೇಡರ್‌ನಲ್ಲಿ ಅವರನ್ನು ಮುಂದಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಪೂರ್ತಿಯಾಗಿ ಇಂಪ್ಲಿಮೆಂಟ್ ಮಾಡಲು ಸರಿಯಾದಂತಹ ಅಭ್ಯರ್ಥಿಗಳು ಸಿಗಲಿಲ್ಲವೆಂದು ಸರಕಾರದವರು ಹೇಳುತ್ತಾರೆ. ಇದನ್ನು ಪೂರ್ತಿಯಾಗಿ ಜಾರಿಗೆ ತರುವುದಕ್ಕೋಸ್ಕರ ಮಾನ್ಯ ರಾಜೀವಗಾಂಧಿಯವರು ಸ್ಪೆಷಲ್ ರೆವ್ಯೂ ಮಾಡಿ ಎಲ್ಲೆಲ್ಲಿ ವೇಕೆನ್ಸೀಸ್ ಇದೆ ಬ್ಯಾಕಲಾಗ್ ಎಲ್ಲೆಲ್ಲಿ ಇದೆ ಅದನ್ನು ಪೂರ್ತಿ ಮಾಡಬೇಕೆಂದು ಆದೇಶ ಕೊಟ್ಟರು. ಇದರಿಂದಾಗಿ ೪–೫ ಸಾವಿರ ವೇಕೆನ್ಸೀಸ್ ಅನ್ನು ಹೊಸದಾಗಿ ಫಿಲಪ್ ಮಾಡಿದರು. ಎಲ್ಲಿಯವರೆಗೆ ನಾವು ಬ್ಯಾಕಲಾಗ್ ಅನ್ನು ಫಿಲಪ್ ಮಾಡುವುದಿಲ್ಲವೋ ಮತ್ತು ಎಲ್ಲಿಯವರೆಗೆ ಈ ಕಾನೂನನ್ನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರುವುದಿಲ್ಲವೋ ಅಲ್ಲಿಯವರೆಗೆ ಇದೇ ರೀತಿಯಾಗಿ ನಡೆಯುತ್ತದೆ. ನಾವು ಅವರಿಗೆ ೧೮–೨೨ ಪರ್ಸೆಂಟ್‌ನಷ್ಟು ಮೀಸಲಾತಿಯನ್ನು ಏನು ಇಟ್ಟಿದ್ದೇವೆ, ಅಷ್ಟು ಜನರು ಮಾತ್ರ ಅಧಿಕಾರದಲ್ಲಿ ಬರಬಹುದು. ಅವರಿಗೆ ಅವಕಾಶ ಸಿಕ್ಕಬಹುದು. ಆದರೆ ಮೂಲಭೂತವಾಗಿ ಇರತಕ್ಕಂತಹ ಪ್ರಶ್ನೆ ಏನೆಂದರೆ ಹಳ್ಳಿಗಳಲ್ಲಿ ಅಸ್ಪೃಶ್ಯತೆಯನ್ನು ತೆಗೆದು ಹಾಕಬೇಕು. ಅಸ್ಪೃಶ್ಯತೆಯನ್ನು ತೆಗೆದು ಹಾಕಿದ್ದೇವೆಂದು ನಾವು ಹೇಳಬಹುದು, ಆದರೆ ಅದನ್ನು ಸರಿಯಾದಂತಹ ರೀತಿಯಲ್ಲಿ ಜಾರಿಗೆ ತರಬೇಕು ಅನುಕೂಲಸ್ಥರು ಇದ್ದಾರೆ ಕೆಲವರು ಮಂತ್ರಿಗಳಾಗಿದ್ದಾರೆ. ಇನ್ನೂ ಕೆಲವರು ಶಾಸಕರಾಗಿದ್ದಾರೆ ಅಂತಹವರು ಈ ಮೀಸಲಾತಿಯನ್ನು ಪಡೆದುಕೊಳ್ಳಬಾರದೆಂದು ಮಾನ್ಯ ವಿರೋಧಿ ಪಕ್ಷದ ನಾಯಕರು ಏನು ಹೇಳಿದರು, ಅದು ಒಪ್ಪಿಕೊಳ್ಳತಕ್ಕಂತಹ ಮಾತು.

ಆದರೆ ಯಾರಿಗೆ ವಾರ್ಷಿಕ ವರಮಾನ ೧೦ ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇರುತ್ತದೆ ಅಂಥವರ ಮಕ್ಕಳಿಗೆ ಸ್ಕಾಲರ್‌ಷಿಪ್‌ನ್ನು ಕೊಡುವುದಾಗಲಿ, ರಿಸರ್ವೇಷನ್ ಸೀಟ್ಸ್‌ನ್ನು ಕೊಡುವುದಾಗಲಿ ಇಲ್ಲ. ಅನೇಕರಿಗೆ ಇದು ಗೊತ್ತಿಲ್ಲವೆಂದು ಕಾಣಿಸುತ್ತದೆ. ಉದಾಹರಣೆಗೆ ಹೇಳುವುದಾದರೆ. ನನ್ನ ಯಾವ ಮಕ್ಕಳಿಗೂ ಫೀಸ್‌ನ ಕನ್‌ಸೆಷನ್ ಇಲ್ಲ. ನನ್ನ ಮಕ್ಕಳಿಗೆ ಸ್ಕಾಲರ್‌ಷಿಪ್ ಇಲ್ಲ. ನಾನು ಫೀಸ್ ಕೊಟ್ಟು ನನ್ನ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದೇನೆ. ಆದರೆ ಇಲ್ಲಿ ಪೊಲಿಟಿಕಲ್ ರಿಸರ್ವೇಷನ್ ಏತಕ್ಕೆ ಇರಬೇಕೆಂಬುದನ್ನು ನಾನು ಹೇಳುತ್ತಿದ್ದೇನೆ. ಯಾರು ಹೆಚ್ಚು ಮಾತನಾಡುತ್ತಾರೆ, ಅವರ ಬಾಯನ್ನು ಮುಚ್ಚಿಸುವುದಕ್ಕೆ ಈ ಪೊಲಿಟಿಕಲ್ ರಿಸರ್ವೇಷನ್ ಇರಬೇಕು.

ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ, ಡಾ; ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ದೇಶದಲ್ಲಿ ಹುಟ್ಟದೇ ಇದ್ದಿದ್ದರೆ ನಿಜವಾಗಿಯೂ ಇವತ್ತು ಈ ಮೀಸಲಾತಿ ಏನು ಸಿಕ್ಕುತ್ತಿದೆ ಇದು ಸಿಕ್ಕುತ್ತಿರಲಿಲ್ಲ. ಅಂಬೇಡ್ಕರ್‌ರವರು ರೌಂಡ್ ಟೇಬಲ್ ಕಾನ್‌ಫರೆನ್ಸ್‌ನಲ್ಲಿ ಅಸ್ಪೃಶ್ಯತೆಯ ಬಗೆ ಯಾವಾಗ ತಮ್ಮ ಧ್ವನಿಯನ್ನು ಎತ್ತಿದರೋ ಆಗಿನಿಂದ ಇದು ಪ್ರಾರಂಭವಾಯಿತು. ೧೯೩೨ನೇ ಸೆಪ್ಟೆಂಬರ್ ೨೪ರಂದು ಮಹಾತ್ಮ ಗಾಂಧೀಜಿಯವರ ಪರವಾಗಿ ಪಂಡಿತ್ ಮದನಮೋಹನ ಮಾಲವೀಯ ಮತ್ತು ಡಾ॥ ಅಂಬೇಡ್ಕರ್‌ರವರ ಮಧ್ಯೆ ಒಂದು ಅಗ್ರಿಮೆಂಟ್ ಆಯಿತು. ಅದೇನೆಂದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಪ್ರತ್ಯೇಕವಾದ ಎಲೆಕ್ಟೊರೇಟ್ ಬೇಡ ಅವರಿಗೂ ನಾವು ಕೆಲವು ರಿಸರ್ವೇಷನ್ಸ್ ಕೊಡುತ್ತೇವೆ. ಅವರು ಹಿಂದೂ ಸಮಾಜದಿಂದ ಛಿದ್ರವಾಗಿ ಸಿಡಿದು ಹೋಗುವುದು ಬೇಡ ಎಂದು. ಈ ರೀತಿಯನ್ನು ಒಪ್ಪಿಕೊಂಡ ಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮೀಸಲು ಸೀಟುಗಳನ್ನು ಕೊಡುವ ವ್ಯವಸ್ಥೆ ಪ್ರಾರಂಭವಾಯಿತು, ಇದು ಅವತ್ತಿನಿಂದಲೂ ನಡೆದುಕೊಂಡು ಬರುತ್ತಿದೆ. ಇದು ಯಾರ ಮೆಹರುಬಾನಿಯೂ ಅಲ್ಲ. ೧೯೩೦ರಿಂದಲೂ ಇದರಲ್ಲಿ ಒಂದು ಫೈಟ್ ಇದೆ. ಈ ಹೋರಾಟದಲ್ಲಿ ಇದು ಒಂದು ಸಾಧನೆ. ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುವ ಸಲುವಾಗಿ ನಾನು ತಮ್ಮ ಮೂಲಕ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಮೀಸಲಾತಿ ಎಂಬುದು ಇವತ್ತು ಹುಟ್ಟಿದೆ, ಹೊಸದಾಗಿ ಈ ಮೀಸಲಾತಿಯನ್ನು ಕೊಡುತ್ತಿದ್ದಾರೋ ಏನೋ ಎಂಬ ಭಾವನೆ ಕೆಲವು ಜನರ ಮನಸ್ಸಿನಲ್ಲಿ ಬಂದಿರಬಹುದು. ಆದರೆ ಆ ಭಾವನೆ ತಪ್ಪು. ಯಾವಾಗ ಕಮ್ಯೂನಲ್ ಅವಾರ್ಡನ್ನು ಕೊಟ್ಟರು ಅಂದರೆ, ಸಿಕ್ಕರಿಗೆ, ಮುಸ್ಲೀಮರಿಗೆ, ಹೀಗೆ ಬೇರೆ ಬೇರೆಯವರಿಗೆ ಏನು ಈ ಮೀಸಲಾತಿಯನ್ನು ಕೊಟ್ಟರೋ ಆಗ ಈ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಮೀಸಲಾತಿಯನ್ನು ಕೊಡಲೇಬೇಕೆಂದು ಮಾನ್ಯ ಅಂಬೇಡ್ಕರ್‌ರವರು ಹಠವನ್ನು ಹಿಡಿದಾಗ ಈ ಒಂದು ಅಗ್ರಿಮೆಂಟ್ ಆಯಿತು. ಇದು ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಹಾಗೂ ದೇಶದ ಎಲ್ಲ ವಿಧಾನಸಭೆಗಳಲ್ಲೂ ಚರ್ಚೆ ಆಯಿತು, ಡಾ॥ ಅಂಬೇಡ್ಕರ್‌ರವರು ಸಂವಿಧಾನವನ್ನು ಬರೆದ ಮೇಲೆ ಅನೇಕ ಹೊಸ ಕಲಂಗಳನ್ನು ಸೇರಿಸಿದರು. ಅದು ೬೪ ಇರಬಹುದು. ೧೫(೪) ಇರಬಹುದು. ೨೯ ಇರಬಹುದು. ೧೭ನೇ ಆರ್ಟಿಕಲ್ ಇರಬಹುದು, ಅಥವಾ ೩೩೦, ೩೩೧, ೩೩೨, ೩೩೩, ೩೩೪ ಇರಬಹುದು. ಇವತ್ತು ಈ ಮನೆಯಲ್ಲಿ ಆಂಗ್ಲೋ ಇಂಡಿಯನ್ ಒಬ್ಬರು ಪ್ರಮಾಣ ವಚನವನ್ನು ಸ್ವೀಕರಿಸಿದರು. ಇವರಿಗೂ ಕೂಡ ಸಂವಿಧಾನದಲ್ಲಿ ರಕ್ಷಣೆಯನ್ನು ಕೊಟ್ಟಿದೆ. ಯಾರಿಗೆ ಈ ದೇಶದಲ್ಲಿ ಪ್ರಾತಿನಿಧ್ಯವಿಲ್ಲ, ಗೆದ್ದು ಬರಲು ಶಕ್ತಿ ಇಲ್ಲ ಅಂಥವರಿಗೆ ರಕ್ಷಣೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ಈ ಸಂವಿಧಾನದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿದೆ, ಈ ರೀತಿ ಒಂದು ಮಹಾನ್ ಹೋರಾಟದ ಫಲದಿಂದಾಗಿ ಇವತ್ತು ಈ ರಿಸರ್ವೇಷನ್ ಎಂಬುದು ಅಸ್ತಿತ್ವದಲ್ಲಿ ಬಂದಿದೆ. ಇದು ಒಂದು ಹಿಸ್ಟಾರಿಕ್ ನೆಸಿಸಿಟಿ. ಮೆಹರುಬಾನಿಯಿಂದ ಯಾರೂ ಕೂಡ ಇದನ್ನು ಕೊಟ್ಟಿಲ್ಲ.

ಮಾನ್ಯ ಅಧ್ಯಕ್ಷರೆ. ಇನ್ನೊಂದು ವಿಚಾರವನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಏತಕ್ಕೆ ಒಪ್ಪಿಕೊಂಡರು ಎಂದರೆ ಡಾ: ಅಂಬೇಡ್ಕರ್‌ರವರು ಏನೊಂದು ಮಾತನ್ನು ಹೇಳಿದ್ದಾರೆಂದು ನೋಡಬೇಕು, ಅದೇನೆಂದರೆ :

> "It is only in a Swaraj Constitution that you stand any chance of getting political power in your hands without which you connot bring solvation to our people. Don't be obsessed by the past, don't be severed by fear or favour from any quarter in making your own decision. Consult your best interest and I am sure you will accept Swaraj as your goal."

ಅಂದರೆ ಅವರೂ ಕೂಡ ಈ ದೇಶಕ್ಕೆ ಸ್ವಾತಂತ್ರ್ಯಬೇಕು, ಸ್ವಾತಂತ್ರ್ಯ ಭಾರತದಲ್ಲಿ ಸ್ವಾತಂತ್ರ್ಯ ಸಂವಿಧಾನದಲ್ಲಿ ನಾವೇನಾದರೂ ಬದುಕಬೇಕೆಂದರೆ ನಮಗೆ ಸ್ವಾತಂತ್ರ್ಯ ಬೇಕೆಬೇಕು ಸ್ವರಾಜ್ಯ ಬೇಕೆಬೇಕೆಂದು ಡಾ: ಅಂಬೇಡ್ಕರ್‌ರವರು ಪ್ರತಿಪಾದನೆ ಮಾಡಿದರು ಇದಕ್ಕೆ ಪುಷ್ಟಿಯಾಗಿ ಮುಂದೆ ಒಂದು ಮಾತನ್ನು ಏನು ಹೇಳಿದರು ಅದೇನೆಂದರೆ 'I am speaking with a due se se of responsibility when I say it is not a proper claim which is registered by Dr. Ambedkar when he seeks to speak for the whole of untouchables in Iudia.' ಎಂದು. ಆದಕ್ಕೂ ಜನ ವಿರೋಧ ಮಾಡಿದ ಮೇಲ ಅವರು ಹೇಳಿದ್ದೇನೆಂದರೆ, ನಾನು ಅವರ ಪರವಾಗಿ ವಾದ ಮಾಡುತ್ತೇನೆ. ನನಗಿರತಕ್ಕಂಥ ನೋವು ಬೇರೆಯವರಿಗೆ ಇಲ್ಲ. ಅದಕ್ಕಾಗಿ ಅವರಿಗೆ ಬೆಂಬಲ ಕೊಡಬೇಕೆಂದು ಕೇಳಿದಾಗ ಅವರ ಆ ಮಾತಿಗೆ ಒಪ್ಪಿಗೆ ಕೊಟ್ಟು ಆವತ್ತು ಕೆಲವು ರಿಸರ್ವೇಷನ್

ಮಾಡಿದ್ದಾರೆ. ಅದು ಕೇವಲ ಹತ್ತು ವರ್ಷಗಳೆಂದು. ಅದಕ್ಕೆ ಎಲ್ಲರೂ ಒಪ್ಪಿಕೊಂಡಿದ್ದರು. ಆದರೆ ಈ ದೇಶದಲ್ಲಿ ಎಲ್ಲಿಯವರೆಗೆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಈ ಒಂದು ಜನಾಂಗ ಮುಂದೆ ಬರುವುದಕ್ಕೆ ಲಗುವು ಲ್ಲ. ಆರ್ಥಿಕವಾಗಿ ಸಂವೃದ್ಧಿಯಾಗಿ ಬೆಳೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿಗೂ ಹಳ್ಳಿಗಳಿಗೆ ಹೋದರೆ ಒಬ್ಬ ಶ್ರೀಮಂತನೆನಿಸಿಕೊಂಡವನು ಇಲ್ಲವೇ ಹತ್ತು ಎಕರೆ ಜಮೀನನ್ನು ಹೊಂದಿರತಕ್ಕಂಥವನು ಆ ಹಳ್ಳಿಯಲ್ಲಿರತಕ್ಕಂಥ ಹೋಟೆಲ್‌ಗೆ ಹೋಗತಕ್ಕಂಥ ಅವಕಾಶವಿಲ್ಲ. ಹಳ್ಳಿಯಲ್ಲಿರತಕ್ಕಂಥ ಅಂಗಡಿಗೆ ಹೋಗಿ ವ್ಯಾಪಾರ ಮಾಡುವಂತಿಲ್ಲ. ಕುಡಿಯುವ ನೀರಿನ ಬಾವಿಗೆಹೋಗಿ ನೀರನ್ನು ತೆಗೆದುಕೊಳ್ಳುವಂತಿಲ್ಲ. ದೇವಸ್ಥಾನಕ್ಕೆ ಹೋಗುವಂತಿಲ್ಲ. ಎಲ್ಲರೂ ತೆಗೆದುಕೊಳ್ಳುವಂಥ ಕುಡಿಯುವ ನೀರಿನ ಬಾವಿಗೆ ಹೋಗಿ ನೀರನ್ನು ತೆಗೆದುಕೊಂಡ ಸಂದರ್ಭದಲ್ಲಿ, ಕೊಲೆಗಳಾಗಿರತಕ್ಕಂಥ ಪ್ರಸಂಗಗಳು ತಮಗೆ ಗೊತ್ತಿದೆ. ಇಂಥ ಪರಿಸ್ಥಿತಿ ಇರುವಾಗ ಇದನ್ನು ಮುಂದುವರಿಸಬೇಕೆಂದು ಹೇಳುವಾಗ ಕೆಲವು ಜನ ಇದನ್ನು ತಪ್ಪು, ರಿಸರ್ವೇಷನ್ ಅಮೇಂಡ್‌ಮೆಂಟ್ ತಂದು ತಪ್ಪು ಮಾಡಿದಿರಿ ಎಂದು ಹೇಳಿದರು. ಇದರ ಬಗ್ಗೆ ಚಳುವಳಿಯನ್ನೂ ಕೂಡ ಮಾಡುವುದಾಗಿ ಹೇಳಿದರು. ಅವರಿಗೆ ನಾನಾದರೂ ಹೇಳಬೇಕಾಗುತ್ತದೆ, ಅವರನ್ನು ದೇಶದ್ರೋಹಿಗಳೆಂದು ಹೇಳಬೇಕಾಗುತ್ತದೆ. ಈ ದೇಶ ಒಗ್ಗಟ್ಟಾಗಿ ಇರಬೇಕೆಂಬ ಭಾವನೆ ಅವರಲ್ಲಿ ಇದ್ದಿದ್ದರೆ ಅವರು ಇಂಥ ಒಂದು ಚಳುವಳಿಯನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಮ್ಮ ಕರ್ನಾಟಕದ ಕೆಲವು ಭಾಗದಲ್ಲಿ ಈ ರೀತಿಯಾದ ಒಂದು ಚಳುವಳಿ ಮಾಡುತ್ತಿರುವುದು ನಮ್ಮ ದುರ್ದೈವವೆಂದು ಹೇಳಬೇಕಾಗುತ್ತದೆ. ಆದ್ದರಿಂದ ನಮ್ಮ ಕರ್ನಾಟಕದಲ್ಲಿಯೇ ಅಲ್ಲ, ಯಾವುದೇ ರಾಜ್ಯದಲ್ಲಿ ಯಾವುದೇ ಸರ್ಕಾರವಿರಲಿ, ಇದಕ್ಕೆ ಪ್ರೋತ್ಸಾಹವನ್ನು ಕೊಡಬಾರದು. ಇವತ್ತಿಗೂ ಕೆಲವು ಹಳ್ಳಿಗಳಲ್ಲಿ, ಕೆಲವು ಮೂಲೆ ಮೂಲೆಗಳಲ್ಲಿ ಅಸ್ಪೃಶ್ಯತೆ ಜಾರಿಯಲ್ಲಿದೆ. ಇವತ್ತಿದಿವಸ ನಾಯಿ ಹಂದಿಗಳು ದೇವಸ್ಥಾನಗಳಿಗೆ ಹೋಗಬಹುದು, ಆದರೆ ಮನುಷ್ಯ ದೇವಸ್ಥಾನಕ್ಕೆ ಹೋಗಬೇಕೆಂದರೆ ಅವಕಾಶವಿಲ್ಲ. ಅದರ ಬಗ್ಗೆ ಧ್ವನಿ ಎತ್ತುವವರಿಲ್ಲ. ಇವತ್ತಿನದಿವಸ ಫ್ಯಾಕ್ಟರಿಗಳಲ್ಲಿ ವೇಜಸ್ ಸರಿಯಾಗಿ ಸಿಗುತ್ತಿಲ್ಲವೆಂದು ಅಮರಣಾಂತ ಉಪವಾಸ ಕೊಡುತ್ತಿರುತ್ತಾರೆ. ರೈತರಿಗೆ ಬೆಲೆ ಸಿಗುತ್ತಿಲ್ಲವೆಂದು ಅಮರಣಾಂತ ಉಪವಾಸ ಕುಳಿತುಕೊಳ್ಳತಕ್ಕಂಥ ಪ್ರಸಂಗಗಳನ್ನು ನೋಡುತ್ತಿದ್ದೇವೆ. ಆದರೆ ಮನುಷ್ಯ ಎನಿಸಿಕೊಂಡವನು ಮನುಷ್ಯರ ತುಳಿತಕ್ಕೆ ಒಳಗಾಗಿ ಸಾಯುತ್ತಿರತಕ್ಕಂಥವರ ಬಗ್ಗೆ ಪ್ರಶ್ನೆ ಮುಂದೆ ಬಂದಾಗ ಪ್ರತಿಯೊಬ್ಬ ಮನುಷ್ಯ ಅವರು ಯಾವ ಪಕ್ಷದವರೇ ಇರಲಿ, ನಾವೆಲ್ಲರೂ ಒಂದೇ ಎನ್ನುವ ಭಾವನೆ ಎಲ್ಲಿಯವರೆಗೆಬರುವುದಿಲ್ಲವೋ ಅಲ್ಲಿಯವರೆಗೆ ಇಂಥ ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥ ಅವಶ್ಯಕತೆ ಇದ್ದೇ ಇರುತ್ತದೆ. ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡತಕ್ಕಂಥದ್ದು ಇದೆ ಇದು ಕೇವಲ ಪೊಲಿಟಿಕಲ್ ರಿಸರ್ವೇಷನ್ ಮಾತ್ರವೆಂದು ಅಮೆಂಡ್‌ಮೆಂಟ್ ಮಾಡಿದರು. ಈಗಾಗಲೇ ನಮ್ಮ ಸರ್ವೀಸ್‌ನಲ್ಲಿಯಾಗಲಿ ಅಥವಾ ಇನ್ನಿತರ ವ್ಯವಸ್ಥೆಯಲ್ಲಿಯಾಗಲಿ ಟೈಮ್ ಲಿಮಿಟ್ ಇಲ್ಲ. ಆರ್ಟಿಕಲ್ ೩೪ರ ಪ್ರಕಾರ ನಮಗೆ ಅನ್ಯಾಯವೆಂದು ಕಂಡುಬಂದರೆ ಅದಕ್ಕೆ ನ್ಯಾಯ ದೊರಕಿಸಿಕೊಡತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೆ ಕಾನೂನಿನಲ್ಲಿ ಅವಕಾಶವನ್ನು ಕೂಡ ಮಾಡಿಕೊಟ್ಟಿರುತ್ತಾರೆ. ಆದರೆ ಇದಕ್ಕೆ ಮಾತ್ರ ಟೈಮ್ ಲಿಮಿಟ್ ಮಾಡಿರುತ್ತಾರೆ. ಹತ್ತು ವರ್ಷಗಳೆಂದು ಹೇಳಿರುತ್ತಾರೆ. ಇದು ಎಲ್ಲಿಯವರೆಗೆ ಹೋಗುತ್ತದೆಯೋ ನೋಡೋಣ. ಈ ಒಂದು ಅಮೆಂಡ್‌ಮೆಂಟ್‌ಗೆ ಸದನದಲ್ಲಿ ಎಲ್ಲರ ಒಪ್ಪಿಗೆ ಇದೆ ಎಂದು ಈಗಾಗಲೇ ಮಾನ್ಯ ನಮ್ಮ ವಿರೋಧ ಪಕ್ಷದ ನಾಯಕರೂ ಕೂಡ ಹೇಳಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರೂ ಕೂಡ ಹೇಳಿದ್ದಾರೆ.

ನನ್ನ ಒಂದು ಸಲಹೆ ಏನೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಮಂಡಲ ಪಂಚಾಯಿತಿಯಲ್ಲಿ ಸಹ ತಾವು ರಿಸರ್ವೇಷನ್ ಮಾಡಬೇಕು. ಏಕೆಂದರೆ ಇವತ್ತು ಎಂ. ಎಲ್. ಎ. ಮತ್ತು ಎಂ.ಪಿ.ಗಳಿಗೆ ರಿಸರ್ವೇಷನ್ ಮಾಡಿರುವುದರಿಂದ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಎಂ.ಎಲ್.ಎ. ಮತ್ತು ಎಂ.ಪಿ.ಗಳನ್ನು ಕಾಣುತ್ತಿದ್ದೇವೆ. ಇವತ್ತಿನ ದಿವಸ ೧೮-೧೯ ಜಿಲ್ಲಾ ಪರಿಷತ್ತುಗಳಿವೆ, ಅಲ್ಲಿ ಅಧ್ಯಕ್ಷರಾಗಲಿ ಉಪಾಧ್ಯಕ್ಷರಾಗಲಿ ಪರಿಶಿಷ್ಟ ಜಾತಿಯವರು ಇಲ್ಲ, ಅದೇ ರೀತಿ ಮಂಡಲ ಪಂಚಾಯಿತಿಗಳಲ್ಲಿ ಕೂಡ ಪ್ರಧಾನರಾಗಲಿ ಉಪ ಪ್ರಧಾನರಾಗಲಿ ಇಲ್ಲ. ಅದೇ ರಿಸರ್ವೇಷನ್ ಇದ್ದಿದ್ದರೆ ನಾಲ್ಕು ಜನರಾದರೂ ಇರುತ್ತಿದ್ದರು.

ಒಬ್ಬರು ಮಾನ್ಯ ಸದಸ್ಯರು.—ನಮ್ಮಲ್ಲಿ ಒಬ್ಬರು ಪ್ರಧಾನರು ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಬ್ಬರು ಇದ್ದರೆ ಸಾಲದು.

ಶ್ರೀ ಬಸವರಾಜ ರಾಯರೆಡ್ಡಿ.—ರಿಸರ್ವೇಷನ್ ಪಾಲಿಸಿಯನ್ನು ಅಲ್ಲಿಯೂ ಜಾರಿಗೆ ತರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ರಿಸರ್ವೇಷನ್ ಇದ್ದರೆ ಯಾರಾದರೂ ಬರುತ್ತಾರೆ. ರಿಸರ್ವೇಷನ್ ಇಲ್ಲದಿದ್ದರೆ ಜನರಲ್ ಸೀಟನ್ನು ಯಾರು ಕೊಡುತ್ತಾರೆ? ನಾವು ನೀವು ಎಷ್ಟು ಸೀಟುಗಳನ್ನು ಕೊಟ್ಟಿದ್ದೇವೆ, ಯೋಚನೆ ಮಾಡಿ.

ಒಬ್ಬರು ಮಾನ್ಯ ಸದಸ್ಯರು.— ಯಾರೂ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಪಾರ್ಲಿಮೆಂಟಿಗೆ ನಾವು ಹೋದ ಸಾರಿ ಕೊಟ್ಟಿದ್ದೇವೆ. ನೀವು ಅದನ್ನೂ ಮಾಡಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ.—ನಿಮ್ಮ ಪಾರ್ಟಿ ಬಗ್ಗೆ ಹೇಳಿದರಲ್ಲ ಇವತ್ತು. ಲೋಕಸಭೆಯಲ್ಲಿರತಕ್ಕ ಇಬ್ಬರು ಪರಿಶಿಷ್ಟ ಜಾತಿಯ ಸದಸ್ಯರು ಜನರಲ್ ಸೀಟ್‌ನಿಂದ ಗೆದ್ದು ಬಂದಿದ್ದಾರೆ. ಬರೀ ನ್ಯಾಷನಲ್ ಫ್ರಾಂಟ್ ಎಂದು ಹೇಳುತ್ತಿಲ್ಲ. ಲೋಕಸಭಾ ಡಿಬೇಟ್‌ನಲ್ಲಿದೆ ತೆಗೆದು ಓದಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದು ಜನತಾ ದಳದ್ದು, ಮತ್ತೊಂದು ಬಿಜೆಪಿ.ಯದು ಇದೆ.

ಶ್ರೀ ಎಸ್. ಬಂಗಾರಪ್ಪ.— ಅಷ್ಟೇ ಏಕೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಚಿತ್ರದುರ್ಗದಿಂದ ಶ್ರೀ ಕೆ.ಹೆಚ್. ರಂಗನಾಥ್‌ರವರನ್ನು ಲೋಕಸಭೆಗೆ ಆರಿಸಿ ಕಳುಹಿಸಿದ್ದೆವು.

ಶ್ರೀ ಬಸವರಾಜ ರಾಯರೆಡ್ಡಿ.— ಆದರೆ ನಾವು ಬಳ್ಳಾರಿಯಲ್ಲಿ ನಿಲ್ಲಿಸಿದ್ದ ವ್ಯಕ್ತಿಯನ್ನು ಸೋಲಿಸಿಬಿಟ್ಟಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ನೀವೂ ಕೊಟ್ಟಿಲ್ಲ. ನಾವು ಕೊಟ್ಟಿಲ್ಲ. ಈಗ ನೀವು ಏಕೆ ಕೊಟ್ಟಿಲ್ಲವೆಂದು ನಾನು ಕೇಳುತ್ತಿಲ್ಲ. ಪ್ರಾವಿಷನ್ ಇದ್ದರೆ ಬರುತ್ತಾರೆ. ಪ್ರಾವಿಷನ್ ಇಲ್ಲದಿದ್ದರೆ ಯಾರೂ ಬರುವುದಿಲ್ಲ. ನಿಲ್ಲುವುದಕ್ಕೆ ಜಾಗವನ್ನು ಕೊಡುವುದಿಲ್ಲ. ಕಂಪಲ್‌ಷನ್ ಇದ್ದರೆ ಎಲ್ಲರೂ ಒಬ್ಲೈಜ್ ಮಾಡುತ್ತಾರೆ. ಇವತ್ತಿನ ದಿವಸ ಜಿಲ್ಲಾ ಪರಿಷತ್ತಿನಲ್ಲಿ ಪರಿಶಿಷ್ಟ ಜಾತಿಯ ಒಬ್ಬ ಅಧ್ಯಕ್ಷರೂ ಇಲ್ಲ. ಅಂದರೆ ಅರ್ಹತೆ ಇರುವವರು ಇಲ್ಲವೇ? ಅರ್ಹತೆ ಇರುವವರು ಇದ್ದಾರೆ, ಆದರೆ ಅವಕಾಶ ಇಲ್ಲ. ಸಪೋರ್ಟ್ ಮಾಡುವವರು ಇಲ್ಲ. ಎಲ್ಲರೂ ಸುಮ್ಮನೆ ಇದ್ದು ಬಿಡುತ್ತಾರೆ. ಹಾಸನದಲ್ಲೇನೋ ಒಬ್ಬರನ್ನು ಹಾಕಿದರು. ಆ ಕಡೆಯಿಂದ ಒಬ್ಬರು ಈ ಕಡೆಯಿಂದ ಒಬ್ಬರು ಮುಂದೆ ಬಂದಾಗ ಇಬ್ಬರ ಮಧ್ಯದಲ್ಲಿ ಜಗಳವೇಕೆ. ಇವನೇ ಇರಲಿ ಎಂದರು. ಅಷ್ಟೇ ಹೊರತು ಬೇರೇನು ಅಲ್ಲ.

ಶ್ರೀ ಎಸ್. ಬಂಗಾರಪ್ಪ.— ಆಯಾಯ ಪಕ್ಷದ ಪ್ರಮುಖ ವ್ಯಕ್ತಿಗಳು ಇರುತ್ತಾರೆ. ಆ ಪಾರ್ಟಿ ಈ ಪಾರ್ಟಿ ಎಂದು ಇರುತ್ತಾರೆ, ಇವರ ಮರ್ಯಾದೆ ಉಳಿಸಿಕೊಳ್ಳುವುದಕ್ಕೋಸ್ಕರ ಅಧ್ಯಕ್ಷ ಉಪಾಧ್ಯಕ್ಷ ಎಂದು ಆಯ್ಕೆ ಮಾಡುತ್ತಾರೆ. ಪರಿಶಿಷ್ಟ ಜಾತಿಯವರನ್ನೇ ಮಾಡಬೇಕೆಂದೇನೂ ಮಾಡಿಲ್ಲ. ಎಲ್ಲಾ ಪಕ್ಷದಲ್ಲೂ ಅದು ಇದ್ದೇ ಇದೆ.

ಒಬ್ಬರು ಮಾನ್ಯ ಸದಸ್ಯರು.— ಅವರಿಗೆ ಹಿಂದಿನ ಸರ್ಕಾರ ಅವಕಾಶ ಮಾಡಿ ಕೊಟ್ಟಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೋದ ಸಾರಿ ನಾನು ಒಂದು ತಿದ್ದುಪಡಿಯನ್ನು ತಂದಿದ್ದೆ.

ಒಬ್ಬರು ಮಾನ್ಯ ಸದಸ್ಯರು.— ಜಿಲ್ಲಾ ಪರಿಷತ್ತಿನ ಮಾತಿರಲಿ. ಇವತ್ತಿನವರೆಗೆ ಯಾವ ಮುಖ್ಯ ಮಂತ್ರಿಯೂ ರಿಸರ್ವೇಷನ್ ಮೇಲೆ ಆಯ್ಕೆ ಆಗಿಲ್ಲ. ಅದನ್ನು ಮಾಡಿದರೆ ಅನುಕೂಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದಕ್ಕೂ ಕಾಲ ಬರುತ್ತದೆ.

ಒಬ್ಬರು ಮಾನ್ಯ ಸದಸ್ಯರು.— ಅದು ನಮ್ಮ ರಾಜ್ಯದಿಂದಲೇ ಪ್ರಾರಂಭವಾಗಲಿ. ಕರ್ನಾಟಕದಲ್ಲಿ ಮೊದಲು ಆ ಕೆಲಸ ಆಗಲಿ. ನಿಮ್ಮ ಪಕ್ಷದಲ್ಲಿ ರಾಚಯ್ಯನವರಿದ್ದರಲ್ಲ. ಅವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಬೇಕಾಗಿತ್ತು. ಯಾರಾದರೂ ಮಾಡಬಾರದು ಎಂದು ನಿಮ್ಮ ಕೈ ಹಿಡಿದುಕೊಂಡಿದ್ದರಾ? ಈ ಸಲ ಏನೋ ಮಾಡಿ ಕೊನೆಗೆ ಅವರನ್ನು ಎಂ.ಎಲ್.ಎ. ಕೂಡಾ ಮಾಡಲಿಲ್ಲ. ಹೋದ ಅಧಿವೇಶನದಲ್ಲಿ ಇದಕ್ಕೆ ಸಂಬಂಧಪಟ್ಟಹಾಗೆ ನಾನು ಒಂದು ತಿದ್ದುಪಡಿ ತಂದಿದ್ದೆ. ಅದರ ಜೊತೆಯಲ್ಲಿ ಇನ್ನೊಂದು ತಿದ್ದುಪಡಿ ಏನಿತ್ತು ಎಂದರೆ ಒಂದೇ ಒಂದು ಸೆಕ್ಷನ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ ಎಂದು ಇದೆ. ಅಲ್ಲಿ ಯಾರಾದರೂ ಚುನಾವಣೆಗೆ ನಿಲ್ಲಬಹುದು, ರಿಸ್ಟ್ರಿಕ್ಷನ್ ಇಲ್ಲ. ಇದನ್ನು ಯಾವ ರೀತಿ ರೆಕ್ಟಿಫೈ ಮಾಡುತ್ತಿದ್ದೇವೆ ಅದೇ ರೀತಿಯಾಗಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು ಮಂಡಲ ಪಂಚಾಯಿತಿ ಪ್ರಧಾನರು ಮತ್ತು ಉಪಪ್ರಧಾನರ ವಿಷಯದಲ್ಲೂ ಕೆಲವು ರಿಸರ್ವೇಷನ್

ಇಡಬೇಕು. ರೊಟೇಷನ್ ಪ್ರಕಾರವಾದರೂ ಮಾಡಿ. ಪ್ರತಿ ಐದು ವರ್ಷಕ್ಕೊಮ್ಮೆ ಬದಲಾವಣೆಯಾಗುತ್ತದೆ. ಕನಿಷ್ಠ ಪಕ್ಷ ನಮ್ಮ ನಾಲ್ಕೈದು ಜನರಿಗಾದರೂ ಅವಕಾಶ ಸಿಗುತ್ತದೆ. ಇದನ್ನು ಮಾಡಬೇಕೆಂದು ಸಲಹೆ ಕೊಡುತ್ತಿದ್ದೇನೆ. ಎರಡನೆಯದಾಗಿ ಇದನ್ನು ಇವತ್ತು ಏನು ರೆಕ್ಟಿಫೈ ಮಾಡುತ್ತಿದ್ದೇವೆ......

ಶ್ರೀ ಸಿ. ಬೈರೇಗೌಡ.— ಈಗ ಅದು ನಿಮ್ಮ ಕೈಯಲ್ಲಿದೆ. ತಿದ್ದುಪಡಿ ತನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಒಪ್ಪಿದರೆ ಆಯಿತು. ತರುತ್ತೇವೆ. ಇದು ಪಕ್ಷಭೇದ ಇಲ್ಲದೆ ಮಾಡುವಂಥದ್ದು. ಎಲ್ಲರೂ ಕೂಡಿ ತರುವ ಕಾನೂನು. ಇದರಲ್ಲಿ ಯಾರ ಪರ ವಿರೋಧ ಅನ್ನೋದಿಲ್ಲ. This is irrespective of party. The entire House agree to this proposal. If you agree for that proposal unanimously it will be brought, ಆದರಲ್ಲೇನೂ ತಾಪತ್ರಯ ಇಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ತಕ್ಷಣ ತಿದ್ದುಪಡಿಯನ್ನು ತೆಗೆದುಕೊಂಡು ಬರಬೇಕೆಂದು ಹೇಳುತ್ತಿದ್ದೇನೆ. ಇದರಿಂದ ಈ ವರ್ಗದ ಜನರಿಗೆ ಸಹಾಯವಾಗುತ್ತದೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಚ್. ಪಾಟೀಲ್ (ಗದಗ).— ಮಾನ್ಯ ಅಧ್ಯಕ್ಷರೆ, ಈ ನಿರ್ಣಯದ ಮೇಲೆ ಮಾತನಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ನಾನು ನಿಜವಾಗಿ ಬಹಳ ಸಂತೋಷ ಪಡುತ್ತಿದ್ದೇನೆ. ಈ ರಿಸರ್ವೇಷನ್ ದೇಶಕ್ಕೆ ಸ್ವತಂತ್ರ್ಯ ಬಂದಲಾಗಾಯ್ತು ಇಲ್ಲಿಯವರೆಗೂ ಬೆಳೆಯುತ್ತಾ ಬಂದಿದೆ ಪಂಡಿತ್ ಜವಾಹರಲಾಲ್ ನೆಹರು ಅವರಾಗಲೀ, ಶ್ರೀಮತಿ ಇಂದಿರಾಗಾಂಧಿಯವರಾಗಲೀ, ಪದೇಪದೇ ಹತ್ತತ್ತು ವರ್ಷ ಈ ರಿಸರ್ವೇಷನ್ ಅನ್ನು ಬೆಳೆಸುತ್ತಾ ಬಂದರು. ಮಾನ್ಯ ರಾಜೀವ್ ಗಾಂಧಿಯವರೂ ಸಹ ಚುನಾವಣೆ ಪೂರ್ವದಲ್ಲೂ ರಿಸರ್ವೇಷನ್ ಮುಂದುವರೆಸುತ್ತೇವೆ ಎಂದು ದೇಶಕ್ಕೆ ಆಶ್ವಾಸನೆಯನ್ನು ಕೊಟ್ಟರು. ಒಂದು ಸಂತೋಷ ಅಂದರೆ, ರಾಷ್ಟ್ರೀಯ ರಂಗದ ಸರ್ಕಾರ ಅನೇಕ ಸಂದರ್ಭಗಳಲ್ಲಿ ರಾಜೀವ್ ಗಾಂಧಿಯವರು ಮಾಡಿದ್ದನ್ನು ಮುಂದುವರೆಸುವ ಪ್ರವೃತ್ತಿಯನ್ನು ಬೆಳೆಸಿಕೊಂಡು ರಾಜೀವ್ ಗಾಂಧಿಯವರು ಅನುಸರಿಸಿದ ಮಾರ್ಗವನ್ನೇ ಅನುಸರಿಸಿದ್ದಾರೆ. ರಿಸರ್ವೇಷನ್ ಏತಕ್ಕೆ ಬೇಕು ಎಂಬ ಪ್ರಶ್ನೆಯನ್ನು ಮೀಸಲಾತಿ ವಿರೋಧಿ ಜನ ಎತ್ತುತ್ತಿದ್ದಾರೆ. ಮಾನವೀಯತೆ ದೃಷ್ಟಿಯಿಂದ ನೋಡಿದರೆ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಇನ್ನೂ ಪರಿಶಿಷ್ಟ ಜನಾಂಗದವರು ಎಲ್ಲರಿಗೂ ಸರಿಸಮಾನವಾದ ರೀತಿಯಲ್ಲಿ ಮುಂದೆ ಬಂದಿಲ್ಲವಲ್ಲ ಎಂದು ವ್ಯಥೆ ಪಡಬೇಕಾಗುತ್ತದೆ. ಅನ್‌ಟಚಬಿಲಿಟಿ ಇಲ್ಲ, ರಿಸರ್ವೇಷನ್ ಬೇಡ ಎಂದು ಹೇಳುವವರು ಮೂರ್ಖರು. ಮಹಾತ್ಮ ಗಾಂಧಿಯವರ ಪ್ರಭಾವದಿಂದ ಹರಿಜನರ ಬಗ್ಗೆ ವಿಶೇಷವಾದ ಗೌರವ ಸಮಾಜದಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಒಂದು ಉದಾಹರಣೆ ಕೊಡುತ್ತೇನೆ. ನಾನು ಹಿಂದೆ ಎಜುಕೇಷನ್ ಮಿನಿಸ್ಟರ್. ಆಗಿದ್ದೆ. ಆಗ ಒಬ್ಬ ಹುಡುಗ ನನ್ನ ಹತ್ತಿರ ಬಂದು ಕೆಲಸ ಕೇಳಿದ. ಆಗ ಡೈರೆಕ್ಟ್ ರೆಕ್ರೂಟ್‌ಮೆಂಟ್ ಜೊತೆಗೆ ಟೆಂಪೊರರಿ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದರು. ಶಹಪುರ ತಾಲ್ಲೂಕಿನಲ್ಲಿ ನಾನು ಆ ಹುಡುಗನಿಗೆ ಟೀಚರ್ ಪೋಸ್ಟಿಂಗ್ ಕೊಟ್ಟೆ. ಹನುಮಂತ ದೇವರ ಗುಡಿಯಲ್ಲಿ ಆ ಸ್ಕೂಲ್ ನಡೆಯುತ್ತಿತ್ತು. ಅಲ್ಲಿನ ಪಂಚಾಯಿತಿ ಛೇರ್ಮನ್‌ರೇ ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಛೇರ್ಮನ್ನರು. ಅವರು ಅಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿದರು. ಏನೆಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಟೀಚರ್ ಅನ್ನು ತಾವು ಏನು ಪೋಸ್ಟ್ ಮಾಡಿದ್ದೀರಿ, ಅವರ ಬದಲು ಬೇರೆ ಟೀಚರ್ ಪೋಸ್ಟ್ ಮಾಡಿ, ಇಲ್ಲದಿದ್ದರೆ ನಮಗೆ ಸ್ಕೂಲೇ ಬೇಡ ಎಂದು ಹೇಳಿದರು. ನಾನು ಮುಖ್ಯಮಂತ್ರಿಗಳಿಗೆ, ಈ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಪತ್ರ ಬರೆದೆ. ಆ ಛೇರ್ಮನ್ನನ್ನು ಡಿಸ್‌ಮಿಸ್ ಮಾಡಿ ಅನ್‌ಟಚಬಲಿಟಿ ಆಕ್ಟ್ ಪ್ರಕಾರ ಕೇಸ್ ಹಾಕಿ ಎಂದು ಹೇಳಿದೆ. ಕೇಸ್ ಹಾಕಿದಾಗ ಎವಿಡೆನ್ಸ್ ಯಾರೂ ಕೊಡದೆ ಕೇಸ್ ಡಿಸ್‌ಮಿಸ್ ಆಯಿತು.

ಶ್ರೀ ಕೆ. ಎಚ್. ಪಾಟೀಲ್.— ಅವರನ್ನು ಮೂರ್ಖರು ಎನ್ನಬೇಕೇ ವಿನಾ ಸಮಾಜದಲ್ಲಿ ಗಣ್ಯರು ಎನ್ನಬಾರದು.

ಇವತ್ತು ಸಮಾಜದಲ್ಲಿ ಕೆಲಸ ಮಾಡತಕ್ಕ ಸಮಯದಲ್ಲಿ ನಾನು ನೋಡಿದ ಪ್ರಕಾರ ಹರಿಜನರ ಬಗ್ಗೆ ಒಳ್ಳೆಯ ಅಂತಃಕರಣ ಇದೆ ಎನ್ನುವ ಅಭಿಪ್ರಾಯ ನನಗೆ ಬರುತ್ತದೆ. ಸಮಾಜದಲ್ಲಿ ನಾವು ಕೆಲಸ ಮಾಡುವಾಗ ಅನೇಕ ಸಂದರ್ಭದಲ್ಲಿ ಇದನ್ನು ನೋಡಿದ್ದೇವೆ. ಇವತ್ತು ಇದನ್ನು ವಿರೋಧ ಮಾಡುವ ಜನರೂ ಇದ್ದಾರೆ. ಅವರಿಗೆ ಕಣ್ಣು ಇಲ್ಲ. ಅವರು ಕುರುಡರಾಗಿದ್ದಾರೆ. ಅಂತಹವರ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಿ ನಾವು ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತಾ ಇವತ್ತು ಈ

ಮೀಸಲಾತಿ ಏಕೆ ಬೇಕೆಂದು ಯೋಚಿಸಬೇಕಾಗಿದೆ. ಇವತ್ತು ಕೇವಲ ಅನ್‌ಟಚಬಿಲಿಟಿ ಹೋಗಬೇಕೆಂದು ಅಲ್ಲ. ಮಾನವೀಯತೆಯ ದೃಷ್ಟಿಯಿಂದ, ಈ ಜನರು ಮಾನವರಾಗಿ ಬಾಳುವುದಕ್ಕೆ, ಸಮಾಜದಲ್ಲಿ ಗೌರವ ಸ್ಥಾನವನ್ನು ಗಳಿಸುವುದಕ್ಕೆ ಬೇಕಾಗುವ ಅವಕಾಶವನ್ನು ಸಮಾಜ ಕಲ್ಪಿಸಬೇಕು. ಅದಕ್ಕಾಗಿ ಇವತ್ತು ಮೀಸಲಾತಿ ಬೇಕು, ನಿಜ. ಇವತ್ತು ರಿಸರ್ವೇಷನ್‌ನ ಅನುಕೂಲ ಕೆಲವೇ ಜನರಿಗೆ ಹೆಚ್ಚು ಲಭ್ಯವಾಗುತ್ತದೆ. ಇವತ್ತು ಸಮಾಜದಲ್ಲಿ ಅದೇ ಕೆಳಮಟ್ಟದ ಸೆಡ್ಯೂಲ್ಡ್ ಕಾಸ್ಟ್‌ನವರಿಗೆ ಅದರ ಲಾಭ ಇನ್ನೂ ಸಿಕ್ಕುತ್ತಿಲ್ಲ. ಹೀಗೆಂದರೆ ಇವತ್ತು ರಿಸರ್ವೇಷನ್ ತೆಗೆಯಬೇಕು ಎಂದಲ್ಲ ಈ ಮೀಸಲಾತಿಯಿಂದ ಕೆಲವೇ ಜನರು ಸಹಾಯ ಪಡೆದು ಸಮಾಜದಲ್ಲಿ ಮುಂದೆ ಬಂದು ಉನ್ನತ

(ಶ್ರೀ ಎಂ.ಎಸ್. ಹಿಂಡಸ್‌ಗೇರಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಸ್ಥಾನಮಾನ ಪಡೆದಿದ್ದಾರೆಂದು ನಾನು ಹೇಳುತ್ತೇನೆ. ಆ ದೃಷ್ಟಿಯಿಂದ ಇನ್ನೂ ಕೆಲವು ದಿವಸ ಇದನ್ನು ಅನಿವಾರ್ಯವಾಗಿ ಮುಂದುವರಿಸಬೇಕು ಎನ್ನುವ ಮಾತನ್ನು ರಾಜೀವ್ ಗಾಂಧಿಯವರೂ ಹೇಳಿದ್ದಾರೆ. ಇವತ್ತು ಇದನ್ನು ರಾಷ್ಟ್ರೀಯ ರಂಗದವರೂ ಒಪ್ಪಿದ್ದಾರೆ. ಈ ಬಗ್ಗೆ ಅವರು ಅಮೆಂಡ್‌ಮೆಂಟ್ ತಂದಿದ್ದಾರೆ. ಅದಕ್ಕೆ ನಾವು ಇಲ್ಲಿ ರ್‍ಯಾಟಿಫಿಕೇಷನ್ ಮಾಡುವುದು ಉಳಿದಿದೆ. ಕರ್ನಾಟಕದಲ್ಲಿ ಇದರ ಬಗ್ಗೆ ಯಾವ ಪಕ್ಷದ್ದೂ ವಿರೋಧ ಇಲ್ಲ. ರ್‍ಯಾಟಿಫಿಕೇಷನ್ ಮಾಡುವುದಕ್ಕೆ ಎಲ್ಲರೂ ಒಮ್ಮತದಿಂದ ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಮೊಯ್ಲಿಯವರು ತಂದಿರತಕ್ಕ ಸೂಚನೆಯನ್ನು ಬೆಂಬಲಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ (ಹಿರೇಕೇರೂರ್).— ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯಿಲಿಯವರು ತಂದಿರತಕ್ಕ ಸೂಚನೆಗೆ ನನ್ನ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಇವತ್ತು, ಇದನ್ನು ೧೦ ವರ್ಷಗಳಕಾಲ ಮುಂದುವರಿಸುವ ಸಂದರ್ಭದಲ್ಲಿ ಇದಕ್ಕೆ ಕಾರಣ ಏನು ಎಂಬುದನ್ನು ಅವಲೋಕಿಸಿದಾಗ ೧೦ ವರ್ಷ ಮುಗಿದಿದ್ದರಿಂದ ಇನ್ನೂ ೧೦ ವರ್ಷಗಳವರೆಗೆ ಇದನ್ನು ಮುಂದುವರಿಸಲಾಗಿದೆ ಎಂಬುದು ಗೊತ್ತಾಗುತ್ತದೆ. ಆದರೆ ಈ ದೇಶದಲ್ಲಿ ಡಾ॥ ಅಂಬೇಡ್ಕರ್‌ರವರು ಹಾಗೂ ಮಹಾತ್ಮ ಗಾಂಧೀಜಿಯವರು ಯಾವ ಒಂದು ಉದ್ದೇಶವನ್ನು, ಕಳಕಳಿಯನ್ನು ಪರಿಶಿಷ್ಟ ಜಾತಿ ಹಾಗೂ ಜನಾಂಗದವರ ಬಗ್ಗೆ ಇಟ್ಟುಕೊಂಡಿದ್ದರು ಎಂದರೆ ಕೇವಲ ೧೦ ವರ್ಷಗಳಲ್ಲಿ ಇವರಲ್ಲಿ ಸಮಾನತೆ ತರಬಹುದು, ಎನ್ನುವ ಉದ್ದೇಶ ಇಟ್ಟುಕೊಂಡಿದ್ದರೇ ವಿನಹ ಪುನಃ ೧೦ ವರ್ಷ ಮುಂದುವರಿಸಬೇಕೆಂಬ ಅಭಿಪ್ರಾಯ ಅವರಲ್ಲಿ ಇರಲಿಲ್ಲ. ಅವರಲ್ಲಿ ಅಷ್ಟೊಂದು ಕಳಕಳಿ ಇತ್ತು. ಯಾರು ಶತಮಾನಗಳಿಂದ ತುಳಿತಕ್ಕೆ ಒಳಪಟ್ಟಿದ್ದಾರೆ, ನತದೃಷ್ಟರಾಗಿದ್ದಾರೆ, ಅವರಿಗೆ ಕೇವಲ ೧೦ ವರ್ಷಗಳ ಕಾಲಾವಕಾಶ ಸಾಕಷ್ಟು ಆಗುತ್ತದೆ, ಅವರಿಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಬೇಕೆಂದು ತಂದಿದ್ದರು, ದುರ್ದೈವವಶಾತ್ ಸ್ವಾತಂತ್ರ್ಯ ನಂತರ, ಈ ದೇಶದಲ್ಲಿ ಆಡಳಿತದ ಚುಕ್ಕಾಣಿಯನ್ನು ಹಿಡಿದ, ಆಡಳಿತ ವ್ಯವಸ್ಥೆಯನ್ನು ಹೊತ್ತ ರಾಜಕಾರಣಿಗಳು ಇದನ್ನು ಮರೆತು ಅವರು ಈ ಒಂದು ಮೀಸಲಾತಿ ಕೊಡುವ ವಿಚಾರವನ್ನು ಕೇವಲ ರಾಜಕೀಯಕ್ಕಾಗಿ ಉಪಯೋಗಿಸಿಕೊಂಡು ಬಂದಿದ್ದರಿಂದ ಈ ಸ್ಥಿತಿಗೆ ನಾವು ಬಂದಿದ್ದೇವೆ. ಇದರಿಂದ ನಿಜವಾಗಿ ಅವರಲ್ಲಿ ಕಳಕಳಿ ಇಲ್ಲ ಎನ್ನುವ ಮಾತು ೪೦ ವರ್ಷಗಳ ನಂತರವೂ ಮೀಸಲಾತಿ ಮುಂದುವರೆಯುತ್ತಿರುವುದನ್ನು ನೋಡಿದಾಗ ಸ್ಪಷ್ಟವಾಗಿ ಕಾಣುತ್ತದೆ. ರಾಜಕೀಯಕ್ಕಾಗಿ, ರಾಜಕೀಯ ವರ್ಚಸ್ಸಿಗಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ಇವರನ್ನು ಮುಂದೆ ತರುತ್ತೇವೆಂದು ಹೇಳುತ್ತಾ ಕುದುರೆಗೆ ನೀರನ್ನು ತೋರಿಸುವ ಹಾಗೆ ಅಲ್ಪ ಸ್ವಲ್ಪ ವ್ಯವಸ್ಥೆ ಮಾಡಿ ಇದನ್ನು ಮುಂದುವರಿಸುತ್ತಿರುವುದನ್ನು ನೋಡಿದರೆ ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಕೇಂದ್ರದಲ್ಲೂ ಮಾಡಿಲ್ಲ, ರಾಜ್ಯದಲ್ಲಿ ಆಡಳಿತ ಮಾಡಿದವರೂ ಮಾಡಿಲ್ಲವೆಂದು ಹೇಳಿ, ಈ ಬಗ್ಗೆ ಮಹಾತ್ಮಾಜಿಯವರ ಕಳಕಳಿ ಏನು ಇತ್ತೋ, ಅಷ್ಟು ಇವರಿಗೆ ಸ್ಪಷ್ಟತೆ ಇರಲಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತಾ ಇದೆ. ಡಾ॥ ಅಂಬೇಡ್ಕರ್‌ರವರು ಯಾವ ಒಂದು

೧೨–೩೦ ಪಿ.ಎಂ.

ಕಳಕಳಿಯನ್ನು ಇಟ್ಟುಕೊಂಡು ಈ ವರ್ಗದವರನ್ನು ಮೇಲಕ್ಕೆತ್ತಬೇಕು ಎಂಬ ವಿಚಾರವನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿದ್ದಾರೆ. ಆ ಒಂದು ಕಳಕಳಿ ಈ ಒಂದು ವ್ಯವಸ್ಥೆಯಲ್ಲಿ ಮುಂದುವರೆದುಕೊಂಡು ಬಂದಿಲ್ಲ. ಕಳೆದ ೪೦ ವರ್ಷಗಳಿಂದ ಈ ವರ್ಗದ ಜನರ ಏಳಿಗೆ ಸಂಪೂರ್ಣವಾಗಿ ಆಗಿಲ್ಲ. ಈ ದಿಸೆಯಲ್ಲಿ ನಮ್ಮ ರಾಷ್ಟ್ರೀಯ ನಾಯಕರುಗಳು, ೧೦ ವರ್ಷಗಳಲ್ಲಿ ಇದನ್ನು ಪೂರೈಸಬೇಕೆಂದು ನಮ್ಮ ರಾಷ್ಟ್ರಪಿತರು ಹೇಳಿದ್ದರು. ಆದರೆ ೪೦ ವರ್ಷಗಳಾದರೂ ಕೂಡ ಇದು ಸಾಧ್ಯವಾಗಿಲ್ಲ ಎಂಬುದನ್ನು ಬಹಳ ವಿಷಾದದಿಂದ ಎಲ್ಲಾ ರಾಷ್ಟ್ರೀಯ ನಾಯಕರು ವ್ಯಕ್ತಪಡಿಸಿದ್ದಾರೆ. ಯಾರು ಬಲಿಷ್ಟರಾಗಿದ್ದಾರೆ

ಅವರುಗಳು ದುರ್ಬಲರ ಹೆಸರುಗಳನ್ನು ಹೇಳಿಕೊಂಡು ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿರುವುದು ನಿಲ್ಲಬೇಕು. ಹಿಂದಿನ ಸರ್ಕಾರ ಎಂದರೆ ಕೇಂದ್ರ ಸರ್ಕಾರವು ಈಗ ಮಾಡಿದಂತಹ ತಪ್ಪುಗಳನ್ನು ಇನ್ನು ಮುಂದೆ ಮಾಡಕೂಡದು. ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು ಹಾಗೂ ಒಂದು ಸರಿಯಾದ ಯೋಜನೆಯನ್ನು ಈ ವರ್ಗದ ಜನರ ಅಭಿವೃದ್ಧಿಗಾಗಿ ಹಾಕಿಕೊಳ್ಳಬೇಕು. ಈ ವರ್ಗಕ್ಕೆ ಸೇರಿದ ಜನರಲ್ಲಿ ಯಾರು ಮುಂದುವರಿದಿದ್ದಾರೆ, ಅವರು ಸ್ವಲ್ಪಮಟ್ಟಿಗೆ ತ್ಯಾಗ ಮಾಡಬೇಕು. ಇಲ್ಲದಿದ್ದರೆ ಪರಿಶಿಷ್ಟಜಾತಿ ಹಾಗೂ ಪಂಗಡಗಳ ನಡುವೆ ಸಂಘರ್ಷಣೆ ಅನಿವಾರ್ಯವಾಗುತ್ತದೆ. ಯಾರು ತುಳಿತಕ್ಕೆ ಒಳಗಾಗಿದ್ದಾರೆ, ಅವರನ್ನು ಮೇಲೆತ್ತಲು ಪರಿಶಿಷ್ಟ ವರ್ಗದ ಹಿರಿಯರು ಅವಕಾಶ ಮಾಡಿಕೊಡಬೇಕು, ಈ ದಿಸೆಯಲ್ಲಿ ರಾಷ್ಟ್ರೀಯರಂಗದ ಸರ್ಕಾರದವರು ಒಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಹಿಂದಿನ ಸರ್ಕಾರದವರು ಯಾವರೀತಿಯಾಗಿ ಮೊಸಲಾತಿಯನ್ನು ಪೂರೈಸಿದ್ದಾರೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸುಮಾರು ೫೫ ಸಾವಿರಕ್ಕೂ ಮೆಚ್ಚು ಸರ್ಕಾರಿ ನೌಕರಿಯಲ್ಲಿ ಖಾಲಿ ಇದ್ದಂತಹ ಹುದ್ದೆಗಳ ಪೈಕಿ ಮೊನ್ನೆ ಚುನಾವಣೆ ಪೂರ್ವದಲ್ಲಿ ಶ್ರೀ ರಾಜೀವ್ ಗಾಂಧೀಯುವರು ೨೬ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದಾರೆಂದು ಹೇಳಬೇಕಾದರೆ ನಾವು ಹೇಳಿದ ಮಾತಿಗೆ ಬೆಂಬಲ ಸಿಕ್ಕುವುದು ಸ್ಪಷ್ಟವಾಗಿ ಕಳೆದ ೪೦ ವರ್ಷಗಳಲ್ಲಿ ಮಾಡಿದಂತಹ ಕೆಲಸವನ್ನು ಚುನಾವಣಾ ಪೂರ್ವದಲ್ಲಿ ೨೬ ಸಾವಿರ ಹುದ್ದೆಗಳನ್ನು ತುಂಬುವುದರ ಮೂಲಕ ಇವರು ಕೈಗೊಂಡಿರುವ ಕಾರ್ಯಕ್ರಮ ಈಗಾಗಲೇ ಈ ದೇಶದ ಜನರಿಗೆ ಗೊತ್ತಾಗಿದೆ. ಮತ್ತೆ ಶ್ರೀ ಕೆ. ಹೆಚ್. ಪಾಟೀಲರು ಮಾತನಾಡುತ್ತಾ, ರಾಜೀವ್ ಗಾಂಧೀಯವರ ಮಾರ್ಗದಲ್ಲಿ ರಾಷ್ಟ್ರೀಯರಂಗದ ಸರ್ಕಾರ ಅನುಕರಣೆ ಮಾಡಬೇಕೆಂದು ಹೇಳಿದರು. ಇದು ಸರಿಯಲ್ಲ. ರಾಜೀವ್ ಗಾಂಧಿಯವರು ಮಾಡಿದಂತೆ ನಾವೂ ಮುಂದುವರಿಸಿಕೊಂಡು ಬಂದರೆ ಇನ್ನೂ ೪೦ ವರ್ಷಗಳಾದರೂ ಕೂಡ ಈ ಮೊಸಲಾತಿಯನ್ನು ಮುಂದುವರಿಸುವುದು ಅನಿವಾರ್ಯವಾಗುತ್ತದೆ. ರಾಷ್ಟ್ರೀಯರಂಗದ ಸರ್ಕಾರಕ್ಕೆ ನಿಜವಾಗಿಯೂ ಈ ವರ್ಗದ ಜನರ ಬಗ್ಗೆ ಕಳಕಳಿ ಇದೆ. ಅವರ ಅಭಿವೃದ್ಧಿ ಆಗಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ, ಈ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಲು ರಾಷ್ಟ್ರೀಯರಂಗದ ಸರ್ಕಾರವು ಸಿದ್ಧವಾಗಿದೆ. ಇಷ್ಟು ಹೇಳಿ ಈ ಮಸೂದೆಗೆ ಬೆಂಬಲವನ್ನು ಸೂಚಿಸಿ ಇನ್ನು ೧೦ ವರ್ಷಗಳಲ್ಲಿ ಈ ಜನರ ಒಂದು ಸಮಗ್ರವಾದ ಅಭಿವೃದ್ಧಿ ಆಗಲೆಂದು ಹಾರೈಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೫೫ ಸಾವಿರ ಹುದ್ದೆಗಳು ಖಾಲಿ ಇತ್ತು, ಇದರಲ್ಲಿ ೨೫ ಸಾವಿರ ಹುದ್ದೆಗಳನ್ನು ಫಿಲ್‌ಅಪ್ ಮಾಡಿದ್ದೇವೆ. ಬ್ಯಾಕ್‌ಲಾಗ್ ಇತ್ತು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವ ಸರ್ಕಾರ ಬಂದರೂ ಬಿಹಾರ್. ಯು.ಪಿ. ಮಧ್ಯಪ್ರದೇಶ್ ಅವರ ಪ್ಯಾಟ್ರನ್ ಬೇರೆ, ನಮ್ಮ ಸೌತ್ ಇಂಡಿಯಾ ಪ್ಯಾಟ್ರನ್ ಬೇರೆ. ಇಲ್ಲಿ ೬೦ ಸಾವಿರ ಹುದ್ದೆಗಳು ಖಾಲಿ ಇತ್ತು. ಬ್ಯಾಕ್‌ಲಾಗ್ ಅನ್ನು ನಿಮ್ಮ ಸರ್ಕಾರ ಇದ್ದಾಗ ಏತಕ್ಕೆ ಭರ್ತಿ ಮಾಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ೬೦ ಸಾವಿರ ಹುದ್ದೆಗಳು ಸಹ ಪರಿಶಿಷ್ಟ ವರ್ಗದವರಿಗೆ ಬರುತ್ತವೆಯೇ ? ಕೇಂದ್ರದಲ್ಲಿ ೪೫ ಸಾವಿರ ಮೊಸಲಾತಿ ಹುದ್ದೆಗಳು ಖಾಲಿ ಇತ್ತು. ಅದರಲ್ಲಿ ೨೬ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ೧೦ ವರ್ಷಗಳಲ್ಲಿ ಅವರನ್ನು ಅಭಿವೃದ್ಧಿ ಮಾಡಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಓಟ್‌ಗಳು ಸಿಕ್ಕುವುದಿಲ್ಲವೆಂದು ಅವರು ಹಾಗೇ ಇಟ್ಟುಕೊಂಡು ಬಂದರು "ಕುದುರೆ ಮುಂದೆ ಕ್ಯಾರೆಟ್ ಕಟ್ಟುವಹಾಗೆ" ಇದು ನಡೆದುಕೊಂಡು ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೬೦ ಸಾವಿರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಸುಮಾರು ೬೦ ಸಾವಿರ ಹುದ್ದೆಗಳು ಬರುತ್ತವೆ.

ಶ್ರೀ ಆರ್. ಎಲ್. ಜಾಲಪ್ಪ.— ನಾವು ಅಧಿಕಾರ ಕೊಟ್ಟಿದ್ದೇವೆ. ಈಗ ನೀವು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನ್ನ ಕಾಲದಲ್ಲಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಎಂದು ಮಾಡಿ ೩ ತಿಂಗಳಲ್ಲಿ ೧೪ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.— ಈಗ ಹರಿಜನರ ಹೆಸರಿನಲ್ಲಿ ಬೇರೆಯವರು ಕೆಲವು ಸಾರಿ ನೌಕರಿ ತೆಗೆದುಕೊಂಡಿದ್ದಾರೆ ಬೇರೆ ಉನ್ನತವಾದ ಶಿಕ್ಷಣಕ್ಕೆ ಇವರ ಹೆಸರಿನಲ್ಲಿ ಹೋಗಿದ್ದಾರೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ದಲಿತ ಸಂಘರ್ಷ ಸಮಿತಿಯವರು ಹೋರಾಟ ಮಾಡಿ ಲಾಭ ಪಡೆದವರನ್ನು ಹುಡುಕಿ ಕೊಟ್ಟರು ಸರ್ಕಾರ ಏನೂ ಮಾಡಿಲ್ಲ. ಸರ್ಕಾರ ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿತು ಎಂದು ಕೇಳಿ ಸ್ವಾಮಿ ? ಅವರ ತಪ್ಪನ್ನೆಲ್ಲಾ ಮಾಫಿ ಮಾಡಿದರೆ ಅವರು ಅಲ್ಲಲ್ಲೇ ಇರಬೇಕು ಅಂತ ಆಯ್ತು. ಈ ತರಹ ಆದರೆ ಹರಿಜನರ ಉದ್ಧಾರ ಆಗುತ್ತದೆಯೇ ? ಪಕ್ಷದ ಮೇಲೆ ಏಕೆ ಟೀಕೆ ಮಾಡಬೇಕು ? ಟೀಕೆ ಮಾಡುವುದು ಬೇಡ. ಜನರಲ್ ಆಗಿ ಎಲ್ಲರೂ ಅವರಿಗೆ ಸಹಕಾರ ಕೊಡುವ ಬಗ್ಗೆ ಮಾತನಾಡುವುದು ಉತ್ತಮ.

ಶ್ರೀ ಬಿ ಎಚ್. ಬನ್ನಿಕೋಡ್.—ಸನ್ಮಾನ್ಯ ಖರ್ಗೆಯವರು ಖಾಲಿಯಿರುವ ಸ್ಥಾನಗಳನ್ನು ತುಂಬಬೇಕು ಎನ್ನುವ ಮಾತನ್ನು ಹೇಳಿದರು. ಬಹುತೇಕವಾಗಿ ನನಗನ್ನಿಸುತ್ತದೆ, ಏನೆಂದರೆ ಕರ್ನಾಟಕದಲ್ಲಿ ಯಾವುದೇ ಸರ್ಕಾರ ಬದಲಾದರೂ ಸಹಿತ ಇಡೀ ದೇಶದಲ್ಲೇ ಈ ವಿಚಾರದಲ್ಲಿ ನಮ್ಮ ರಾಜ್ಯ ಹಿಂದೆ ಬಿದ್ದಿಲ್ಲ, ಬೇರೆ ರಾಜ್ಯಗಳಿಗಿಂತ ಮುಂದೆ ಇದೆ. ಆದರೆ ಇದು ತೃಪ್ತಿಕರವಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದು ತೃಪ್ತಿಕರವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗಲಾದರೂ ಸಹಿತ ಇವರು ಅಧಿಕಾರಕ್ಕೆ ಬಂದಿದ್ದಾರೆ. ಅನೇಕ ನಮ್ಮ ಹಿರಿಯ ಮುಖಂಡರು ಇದ್ದಾರೆ. ಈಗಲಾದರೂ ಸಹ ಅವರಿಗೆ ಸಿಗಬೇಕಾದ ಮೀಸಲಾತಿಯನ್ನು ಅವರು ಪೂರೈಸುತ್ತಾರೆ ಎಂದು ನಾನು ಆಶಿಸುತ್ತೇನೆ. ಈ ದೃಷ್ಟಿಯಲ್ಲಿ ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲರು ರಾಷ್ಟ್ರೀಯ ರಂಗದವರು ಏನು ಶ್ರೀ ರಾಜೀವ್‌ಗಾಂಧಿಯವರ ಅನುಕರಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ, ಆ ಮಾತು ಸರಿಯಲ್ಲ. ಕೇವಲ ಹತ್ತು ವರ್ಷಗಳಲ್ಲಿ ಆಗಬೇಕಾದಂಥ ಒಂದು ಕೆಲಸ ನಲ್ವತ್ತು ವರ್ಷಗಳಾದರೂ ಶ್ರೀ ರಾಜೀವ್ ಗಾಂಧಿಯವರಿಂದ ಆಗಲಿಲ್ಲ, ಶ್ರೀಮತಿ ಇಂದಿರಾಗಾಂಧಿಯವರಿಂದ ಆಗಲಿಲ್ಲ. ಅದನ್ನೆ ಇವತ್ತು ರಾಷ್ಟ್ರೀಯ ರಂಗದ ಸರ್ಕಾರದವರು ಮುಂದುವರೆಸಬಾರದು. ಇನ್ನು ಕೇವಲ ಹತ್ತು ವರ್ಷಗಳಲ್ಲಿ ಅವರ ಸಮಗ್ರ ಅಭಿವೃದ್ಧಿಗಾಗಿ ನಿರ್ದಿಷ್ಟವಾದ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಾಕಿಕೊಂಡು ಪರಿಶಿಷ್ಟ ಜಾತಿ ಜನಾಂಗದವರಿಗೆ ಈ ರಿಸರ್ವೇಶನ್ ಕೊಟ್ಟು ಅವನನ್ನು ಉಳಿದವರ ರೀತಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಾನು ಆಶಿಸುತ್ತೇನೆ. ರಾಜಕೀಯ ಗುರಿಯನ್ನು ಇಟ್ಟುಕೊಂಡು ಈ ಬಗ್ಗೆ ವಿಚಾರ ಮಾಡಬೇಕೆಂದು ಹೋದರೆ ಎಂದಿಗೂ ಅವರ ಅಭಿವೃದ್ಧಿ ಸಾಧ್ಯವಿಲ್ಲ. ಕೇವಲ ತಮ್ಮ ವೈಯಕ್ತಿಕ ಹಾಗೂ ರಾಜಕೀಯವಾದ ಮುಂಚೂಣಿಯನ್ನು ಹಿಡಿಯಲಿಕ್ಕೆ ಈ ಹಿಂದುಳಿದವರ ಹೆಸರು ಹೇಳಿ, ಪರಿಶಿಷ್ಟ ಜಾತಿಯವರ ಹೆಸರನ್ನು ಹೇಳುವಂಥ ಸೋಗು ನಿಲ್ಲಬೇಕು. ನಿಜವಾದ ಒಂದು ಕಳಕಳಿಯಿಂದ ಅವರ ಅಭಿವೃದ್ಧಿ ಆಗಬೇಕೆಂದು ರಾಷ್ಟ್ರೀಯ ರಂಗದವರು ಏನು ಹೇಳಿದ್ದಾರೆ. ಅದು ಸ್ವಾಗತಾರ್ಹ. ಈ ದೃಷ್ಟಿಯಿಂದ ನಾನು ಈ ನಿಲುವಳಿಯನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಸೂಚಿಸಿರುವ ನಿರ್ಣಯವನ್ನು ನಾನು ಬೆಂಬಲಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಹಿರಿಯ ಸದಸ್ಯರಾದಂಥ ಖರ್ಗೆಯವರು ಮತ್ತು ಶ್ರೀ ಕೆ. ಎಚ್. ಪಾಟೀಲರು ಮತ್ತು ಈ ಕಡೆಯ ಸದಸ್ಯರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೆಚ್ಚು ಕಡಿಮೆ ಅವರು ಯಾವ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಆ ಅಭಿಪ್ರಾಯಕ್ಕೆ ನಮ್ಮ ವಿರೋಧ ಇಲ್ಲ. ಆದರೆ ರಾಜ್ಯಾಂಗ ರಚನೆಯಾದಮೇಲೆ, ಮೊಟ್ಟಮೊದಲು ೧೫ ವರ್ಷಗಳು ಮಾತ್ರ ಇಂತಹ ಒಂದು ಮೀಸಲಾತಿ ಇರಬೇಕು ಎಂದು ಡಾ॥ ಅಂಬೇಡ್ಕರ್ ಅವರು ಹೇಳಿದರು. ತದನಂತರ ಪುನಃ ೧೫ ವರ್ಷಗಳು ಇದನ್ನು ಮುಂದುವರೆಸಬೇಕು ಎಂದು ತೀರ್ಮಾನ ಆಯಿತು. ಆದಾಗ ಮೇಲೆ ಪುನಃ ಹತ್ತು ವರ್ಷಕ್ಕೆ ಮುಂದುವರೆಸಿದೆವು. ಅಂದರೆ ೪೦ ವರ್ಷಗಳಿಂದ ಈ ಮೀಸಲಾತಿ ಸೌಲಭ್ಯವನ್ನು ಅನುಚ್ಛೇದ ೩೩೪ರ ಪ್ರಕಾರ ಮುಂದುವರೆಸುವಂಥ ಪ್ರಯತ್ನವನ್ನು ನಾವು ಮಾಡಿದೆವು. ಪುನಃ ಈಗ ಇದನ್ನು ಹತ್ತು ವರ್ಷ ಮುಂದುವರೆಸಲಿಕ್ಕೆ ಈಗ ರಾಜ್ಯದ ಮತ್ತು ರಾಷ್ಟ್ರದ ಎಲ್ಲಾ ಪಕ್ಷಗಳು ಒಪ್ಪಿದ್ದಾರೆ. ಈ ಮೀಸಲಾತಿಯನ್ನು ಮುಂದುವರೆಸುವುದಕ್ಕೆ ನಮಗೆ ಸಂತೋಷ ಏನೂ ಇಲ್ಲ. ಆದರೆ ಈ ಮೀಸಲಾತಿಗೆ ನಾವು ವಿರೋಧಿಗಳೂ ಏನೂ ಅಲ್ಲ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ಯಾವ ಉದ್ದೇಶಕ್ಕೋಸ್ಕರ ಈ ಮೀಸಲಾತಿಯನ್ನು ತಂದಿದ್ದೇವೋ, ಅದರ ಪ್ರಕಾರ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಯೋ, ಆ ಕಾರ್ಯಕ್ರಮಗಳಲ್ಲಿ ನಾವು ವಿಫಲರಾಗಿದ್ದೇವೆಯೇ ಹೊರತು ಜಯಶೀಲರಾಗಿಲ್ಲ. ಆದ್ದರಿಂದ ಇನ್ನಷ್ಟು ಕಾಲಾವಧಿ ಬೇಕು ಎಂಬುದನ್ನು ಪರೋಕ್ಷವಾಗಿ ನಾವೆಲ್ಲರೂ ಒಪ್ಪಿಕೊಂಡಂತಾಗುತ್ತದೆ. ಈ ಮಾತನ್ನು ಹೇಳಲಿಕ್ಕೆ ಖಂಡಿತವಾಗಿಯೂ ದುಃಖವಾಗುತ್ತದೆ, ಇದಕ್ಕೆ ಕಾರಣ ಏನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಕಳೆದ ನಲ್ವತ್ತು ವರ್ಷಗಳ ಅವಧಿಯಲ್ಲಿ ತುಳಿತಕ್ಕೆ ಒಳಗಾದಂಥ ಜನ ಏನು ಇದ್ದಾರೆ ಶೋಷಣೆಗೆ ಒಳಗಾದ ಜನ ಏನು ಇದ್ದಾರೆ ಅನ್ಯಾಯಕ್ಕೆ ಒಳಗಾದ ಜನ ಏನಿದ್ದಾರೆ ಅವರನ್ನು ಮೇಲಕ್ಕೆ ಎತ್ತುವುದಕ್ಕೆ ಸಾಧ್ಯವಾಗದೇ ಇದ್ದರೆ, ಈ ಒಂದು ಕಾರ್ಯಕ್ರಮವನ್ನು ಜಯಪ್ರದಗೊಳಿಸಲಿಕ್ಕೆ ಆಗದೇ ಇದ್ದರೆ, ಇದಕ್ಕೆ ಏನು ಕಾರಣ ? ಈ ಬಗ್ಗೆ ಯಾವುದೇ ಒಂದು ಸರ್ಕಾರ ಅಥವಾ ಪಕ್ಷವನ್ನು ದೂಷಣೆ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅದಕ್ಕೆ ಬದಲಾಗಿ ನಮ್ಮಲ್ಲಿರುವಂಥ ವ್ಯವಸ್ಥೆ ಏನಿದೆ, ಈ ವ್ಯವಸ್ಥೆಯಲ್ಲಿ ನಾವು ಪಟ್ಟಭದ್ರ ಹಿತಾಸಕ್ತಿಗಳಿಗೆ ಶಾಮೀಲು ಆಗಿದ್ದೇವೆಂದು ಹೇಳಿದರೆ ತಪ್ಪಾಗುವುದಿಲ್ಲ ಇವತ್ತಿನ ದಿವಸ ಯಾವುದೇ ಜನಾಂಗ ಮುಂದುವರೆಯಬೇಕಾದರೆ, ಮೂರು ವಿಧವಾದ ಪ್ರಕಾರಗಳು

ನಮ್ಮಲ್ಲಿ ಏನಿವೆ, ಅವುಗಳನ್ನು ನಾವು ಯಶಸ್ವಿಯಾಗಿ ನೋಡಬೇಕಾಗುತ್ತದೆ. ಮೊದಲನೆಯದಾಗಿ ವಿದ್ಯೆಯನ್ನು ನೋಡೋಣ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರು ಏನಿದ್ದಾರೆ, ಇವರ ಬಗ್ಗೆ ೧೯೬೧ನೇ ಇಸವಿಯ ವರದಿ ಇರಬಹುದು. ೧೯೭೧ನೇ ಇಸವಿಯ ಅಂಕಿಅಂಶ ಇರಬಹುದು ಅಥವಾ ೧೯೮೧ನೇ ಇಸವಿಯ ಅಂಕಿಅಂಶಗಳನ್ನು ತೆಗೆದುಕೊಂಡಾಗ, ಸಾರ್ವತ್ರಿಕವಾಗಿ ನಿರಕ್ಷರತೆ ಏನಿದೆ ಈ ಶೇಕಡಾವಾರು ಪ್ರಮಾಣಕ್ಕೆ ಈ ಒಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ನಿರಕ್ಷರತೆಯ ಪ್ರಮಾಣವನ್ನು ಹೋಲಿಕೆ ಮಾಡಿದಾಗ, ಮೊದಲು ಸರಾಸರಿ ೧೫ರಷ್ಟು ಅಂತರ ಏನಿತ್ತು, ೧೯೬೧ರಲ್ಲಿ ಮತ್ತು ೧೯೮೧ರಲ್ಲೂ ಸಹ ಅದೇ ಅಂತರವನ್ನು ಕಾಪಾಡಿಕೊಂಡು ಹೋಗುತ್ತಿದ್ದೇವೆಂದು ಹೇಳಿದರೆ, ಎಷ್ಟು ಶೋಚನೀಯವಾದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಎಲ್ಲಾ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ವಿದ್ಯೆಯನ್ನು ಕೊಡುವುದಕ್ಕೆ ಶಾಲಾಕಾಲೇಜುಗಳನ್ನು ಮಾಡಿದ್ದೇವೆ ಎಂಬ ಮಾತನ್ನು ಹೇಳುತ್ತೇವೆ, ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ ಎಂಬ ಮಾತನ್ನು ಹೇಳಿದ್ದೇವೆ. ಆದರೆ ಸಾರ್ವತ್ರಿಕವಾಗಿ ಈ ಒಂದು ಶೇಕಡಾವಾರು ಪ್ರಮಾಣ ಏನಿದೆ, ಈ ಒಂದು ಪ್ರಮಾಣಕ್ಕೆ ಎಸ್‌ಸಿ ಮತ್ತು ಎಸ್‌ಟಿಯವರನ್ನು ಹೋಲಿಕೆ ಮಾಡಿದಾಗ, ಖಂಡಿತವಾಗಿಯೂ ಸಹ ಈ ಹಿಂದಿನ ಅಂತರವೇ. ಇವತ್ತಿನದಿವಸವೂ ಸಹ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೬೧ನೇ ಇಸವಿಯಲ್ಲಿ ಶೇಕಡಾವಾರು ೨೩.೯೮ ಎಲ್ಲಾ ವರ್ಗದವರಲ್ಲಿ ಅಕ್ಷರ ಜ್ಞಾನದವರು ಇದ್ದರೆ, ಎಸ್‌ಸಿ ಮತ್ತು ಎಸ್‌ಟಿಯವರದ್ದು ಶೇಕಡ ೧೦.೧೧ ಮತ್ತು ೮.೫ ಇತ್ತು. ೧೯೭೧ನೇ ಇಸವಿಯಲ್ಲಿ ಶೇಕಡಾವಾರು ಪ್ರಮಾಣ ೨೯.೪೮ ಇದ್ದರೆ, ಎಸ್‌ಸಿ ಯವರು ೧೪.೫೪ ಮತ್ತು ಎಸ್‌ಟಿ ಯವರು ೧೦.೮೯. ೧೯೮೧ನೇ ಇಸವಿಯ ಸಮೀಕ್ಷೆ ಪ್ರಕಾರವೂ ಸಹ ಅಕ್ಷರತೆಯ ಜ್ಞಾನ ಶೇಕಡಾ ೩೬.೨೩ ಎಂಬುದನ್ನು ನಾನು ಒಪ್ಪುತ್ತೇನೆ. ಅದೇರೀತಿ ಎಸ್‌ಸಿ ಯವರು ೨೧.೩೮ ಮತ್ತು ಎಸ್‌ಟಿಯವರು ೧೬.೩೫. ಈ ರೀತಿಯಾಗಿ ಬೇರೆ ವರ್ಗದವರಿಗೆ ಹೋಲಿಕೆ ಮಾಡಿದಾಗ ಈ ಅಕ್ಷರಜ್ಞಾನ ಎಸ್‌ಸಿ ಎಸ್‌ಟಿ ಯವರಲ್ಲಿ ಅದೇ ಅಂತರವನ್ನು ಉಳಿಸಿಕೊಂಡು ಬಂದಿದ್ದೇವೆ. ಅದರ ಅರ್ಥ ಈ ಜ್ಞಾನವನ್ನು ಹೆಚ್ಚು ಮಾಡುವುದಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಸರ್ಕಾರ ಮಾಡಿಲ್ಲ ಎಂದು ಹೇಳಬಹುದು. ನಾವೆಲ್ಲರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪರ ಇದ್ದೇವೆ. ಶೋಷಿತ ಜನಾಂಗವನ್ನು ಉದ್ಧಾರ ಮಾಡಬೇಕು ಎಂದು ಚುನಾವಣೆಯಲ್ಲಿ ಹೇಳುತ್ತೇವೆ. ಮತ್ತು ಪ್ರತಿ ವಿಧಾನ ಸಭೆಯಲ್ಲೂ ಚರ್ಚೆ ಮಾಡುತ್ತೇವೆ. ಆದರೆ ಕಾರ್ಯಕ್ರಮ ಜಾರಿಗೆ ಬಂದಾಗ, ಅದರ ಫಲವನ್ನು ನೋಡಿದರೆ, ಈ ಒಂದು ಅಂತರವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣವನ್ನು ನಾವು ಇವತ್ತಿನ ದಿವಸ ಹುಡುಕಬೇಕಾಗಿದೆ. ಅದೇರೀತಿಯಾಗಿ ಬಡತನ ರೇಖೆಯಿಂದ ಕೆಳಗಿರುವ ಜನರನ್ನು ತೆಗೆದುಕೊಳ್ಳೋಣ. ಬಡತನ ರೇಖೆಯಿಂದ ಕೆಳಗಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ಶೇಕಡಾವಾರು ಪ್ರಮಾಣವನ್ನು ತೆಗೆದುಕೊಂಡಾಗ ೧೯೮೩-೮೪ರಲ್ಲಿ ೫೧.೨ರಷ್ಟು ಗ್ರಾಮೀಣ ಪ್ರದೇಶದಲ್ಲಿ ಇದ್ದರೆ, ಮತ್ತು ನಗರ ಪ್ರದೇಶಗಳಲ್ಲಿ ೩೮.೪ರಷ್ಟು ಜನ ಬಡತನ ರೇಖೆಯಿಂದ ಕೆಳಗೆ ಇದ್ದಾರೆ. ಆ ಪೈಕಿ ಎಸ್‌ಸಿ ಯವರನ್ನು ತೆಗೆದುಕೊಂಡಾಗ, ೬೪.೯ ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ, ೫೪.೨ರಷ್ಟು ನಗರ ಪ್ರದೇಶಗಳಲ್ಲಿ ಇದ್ದಾರೆ. ಎಸ್‌ಟಿ ಯವರು ಗ್ರಾಮೀಣ ಪ್ರದೇಶದಲ್ಲಿ ೭೨.೩ ಮತ್ತು ನಗರ ಪ್ರದೇಶಗಳಲ್ಲಿ ೫೨.೯ ಜನ ಶೇಕಡಾವಾರು ಪ್ರಮಾಣದಲ್ಲಿ ಬಡತನರೇಖೆಯಿಂದ ಕೆಳಗೆ ಇದ್ದಾರೆ. ಇವತ್ತಿನ ದಿವಸ ೩ ಕೋಟಿ ೩೪ ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ. ಆ ಪೈಕಿ ೫೪ ಲಕ್ಷ ಜನರು ಇವತ್ತಿನದಿವಸ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಜನಾಂಗದವರು ಉದ್ಯೋಗ ವಿನಿಮಯ ಕಛೇರಿಯಲ್ಲಿ ನೊಂದಾಯಿಸಿದ್ದಾರೆ. ಇವರಿಗೆ ಕೆಲಸ ಇಲ್ಲ, ನಾವು ಇವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗಿದೆಯೇ? ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರದಲ್ಲಿ ಯಾವುದೇ ಪಕ್ಷದ ಸರ್ಕಾರ ಇರಲಿ, ಈ ಜನಾಂಗದವರಿಗೆ ನೌಕರಿ ಕೊಡುವಂಥ ಕೆಲಸವನ್ನು ನಾವು ಮಾಡಿದ್ದೇವೆಯೇ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಈ ಜನರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಖರ್ಗೆಯವರು ಅನೇಕ ಕ್ರಾಂತಿಕಾರಕವಾದ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಈ ದೇಶದಲ್ಲಿ ಈ ಸಮಾಜದಲ್ಲಿ ಪಟ್ಟಭದ್ರಹಿತಾಸಕ್ತಿಗಳಿವೆ ಎಂಬ ಮಾತನ್ನು ನಾನು ಖಂಡಿತವಾಗಿಯೂ ಒಪ್ಪುತ್ತೇನೆ. ಈ ದೇಶದಲ್ಲಿರುವ ಪಟ್ಟಭದ್ರಹಿತಾಸಕ್ತಿಗಳನ್ನು ಹೊರದೂಡುವುದಕ್ಕೆ ಹಾಗೂ ಛಿದ್ರ ಮಾಡುವುದಕ್ಕೆ ಬಸವಲಿಂಗಪ್ಪನವರು ಪುನಃ ಹುಟ್ಟಿಬಂದರೂ ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರು ಈ ಕೆಲಸದಲ್ಲಿ ಜಯಶೀಲರಾಗಲೀ ಎಂದು ನನ್ನ ಆಸೆ. ಕಳೆದ ೪೦ ವರ್ಷಗಳಿಂದ ತಮ್ಮಲ್ಲಿ ಏನು ಆಡಳಿತ ವ್ಯವಸ್ಥೆ ಇದೆ, ಸಾಮಾಜಿಕ ವ್ಯವಸ್ಥೆ ಏನಿದೆ, ಇದನ್ನು ಛಿದ್ರಗೊಳಿಸದೇ, ಇವರನ್ನು ಇದ್ದಕ್ಕಿದ್ದಹಾಗೆ ಮುಂದುವರೆಸುವುದಕ್ಕೆ ಸಾಧ್ಯವಿಲ್ಲ. ನಾವು ಸಮಾಜದಲ್ಲಿರತಕ್ಕ ಪಟ್ಟಭದ್ರಹಿತಾಸಕ್ತಿಗಳನ್ನು ಹೇಗೆ ಗುರುತು ಮಾಡಿದ್ದೇವೋ ಅದೇರೀತಿಯಾಗಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ

ಜನಾಂಗದ ಸಮಾಜದಲ್ಲೂ ಸಹ ಪಟ್ಟಭದ್ರಹಿತಾಸಕ್ತಿಗಳನ್ನು ಗುರುತು ಮಾಡಬೇಕಾಗಿದೆ. ಮೀಸಲಾತಿಯ ಲಾಭ ಏನಿದೆ, ಪರಿಹಾರ ಏನಿದೆ ಕೇವಲ ಈ ಜಾತಿಯ ಕೆಲವೇ ಜನರಿಗೆ ಹೋಗುವಂಥ ವ್ಯವಸ್ಥೆ ಏನಿದೆ. ಇದನ್ನು ಇವತ್ತಿನ ದಿವಸ ಮೊದಲು ಭದ್ರ ಮಾಡಿ. ಆನಂತರ ಈ ಕಡೆ ಬನ್ನಿ ಎಂದು ಹೇಳುತ್ತೇನೆ. ಈ ಬಗ್ಗೆ ಯಾವುದೇ ಕಾರ್ಯಕ್ರಮವಿದ್ದರೂ ಸಹ ಅದಕ್ಕೆ ನಮ್ಮ ಪಕ್ಷ ಖಂಡಿತವಾಗಿಯೂ ಬೆಂಬಲ ಕೊಡುತ್ತದೆಂದು ಹೇಳುತ್ತೇನೆ ಇವತ್ತಿನ ದಿವಸ ಪರಿಶಿಷ್ಟ ಜನಾಂಗದಲ್ಲಿ ಬಡವರು ಇಲ್ಲವೇ ? ಹಾಗಾದರೆ ಅವರಿಗೂ ಏತಕ್ಕೋಸ್ಕರ ವಿಶೇಷವಾದ ಮೀಸಲಾತಿ ಸೌಲಭ್ಯವನ್ನು ಮುಂದುವರಿಸಬಾರದು ?

೧೦ ಸಾವಿರಕ್ಕಿಂತ ಜಾಸ್ತಿ ಆದಾಯ ಬಂದರೆ ಸ್ಕಾಲರ್‌ಶಿಪ್ ಕೊಡುವುದಿಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಮಾತನ್ನು ಹೇಳುವುದಿಲ್ಲ ಇವತ್ತಿನ ದಿವಸದ ಮಾಹಿತಿ ಪ್ರಕಾರ ಅವರಿಗ ನೌಕರಿ ಕೊಡಬೇಕೆಂದು ಹೇಳುತ್ತೇವೆ. ಆದರೆ ಯಾರು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ, ವಿದ್ಯಾಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದಿದ್ದಾರೆ, ಅಂತಹವರನ್ನು ಬಿಟ್ಟು ಅದೇ ಸಮಾಜದಲ್ಲಿ ಅದೇ ವರ್ಗಕ್ಕೆ ಸೇರಿದಂಥ ಬಡವರಿಗೆ ಏತಕ್ಕೋಸ್ಕರ ಮೀಸಲಾತಿ ಸೌಲಭ್ಯ ಕೊಡಬಾರದು ಇದರ ಅರ್ಥ, ಇವತ್ತಿನ ದಿವಸ ಯಾರು ಸಾಕಾದಷ್ಟು ಮುಂದುವರಿದಿದ್ದಾರೆ, ಆರ್ಥಿಕವಾಗಿ ಯಾರೂ ಮುಂದುವರಿದಿದ್ದಾರೆ ಅವರಿಗೆ ತಪ್ಪಿಸಿ, ನಮ್ಮೂರಿನಲ್ಲಿರತಕ್ಕಂಥ ಹರಿಜನ ವಿದ್ಯಾರ್ಥಿಗೆ ಕೊಡುವಂತಹ ಕೆಲಸವನ್ನು ಅವರು ಮಾಡಿದರೆ ಖಂಡಿತವಾಗಿ ಅದಕ್ಕೆ ಶೋಭೆ ಬರುತ್ತದೆ. ಆದರೆ ಇದನ್ನು ಮಾಡುವುದಕ್ಕೆ ಸಾಧ್ಯ ಇಲ್ಲ. ಈ ಹಿಂದಿನ ವಿಧಾನಸಭೆಯಲ್ಲಿ ಯಾರಾದರೂ ಇಂತಹ ಮಾತನ್ನು ಹೇಳಿದಾಗ ಅದನ್ನು ಪಟ್ಟಭದ್ರ, ಹಿತಾಸಕ್ತಿಗಳು ಹತ್ತಿಕ್ಕುವುದಕ್ಕೆ ಪ್ರಯತ್ನ ಮಾಡಿದರು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಯಾವಾಗಲೂ ಸಹ ನಮ್ಮ ಹಿತಕ್ಕೆ ಧಕ್ಕೆ ಬಂದಾಗ ಮಾತ್ರ ನಾವು ಯಾವುದೇ ಒಂದು ಒಳ್ಳೆಯ ಪರಂಪರೆಯನ್ನು ನೀತಿಯನು ಅನುಸರಿಸುವುದಕ್ಕೆ ಇಷ್ಟಪಡುವುದಿಲ್ಲ, ಆದರೆ ನಮಗೆ ತೊಂದರೆಯಾದಾಗ ಇನ್ನೊಬ್ಬರಿಗೆ ಹೇಳುತ್ತೇವೆ. ಆದುದರಿಂದ ಇವತ್ತಿನ ದಿವಸ ನಾನು ಬಸವಲಿಂಗಪ್ಪನವರು ಸಹಕಾರವನ್ನು ಕೇಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಬಗ್ಗೆ ಒಳ್ಳೆಯ ಮಾತನ್ನು ಅವರು ಹೇಳುತ್ತಿದ್ದಾರೆ. ಈ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನ ಯಾರಿದ್ದಾರೆ ಶೋಷಣೆಗೆ ಒಳಗಾದ ಜನ ಯಾರಿದ್ದಾರೆ ಅವರಿಗೆ ನ್ಯಾಯ ಸಿಗಬೇಕು, ಅವರು ಇನ್ನೂ ಐದುನೂರು ವರ್ಷ ಇದೇ ರೀತಿ ಮುಂದುವರಿಯುವ ಆವಶ್ಯಕತೆ ಬರಬಾರದು ಎಂಬ ಮಾತನ್ನು ಹೇಳುತ್ತೇನೆ. ಅವರಿಗೆ ಬೇಕಾದಂಥ ಸಾಲಸೌಲಭ್ಯ ಇರಬಹುದು, ನೌಕರಿ ಇರಬಹುದು, ವಿದ್ಯೆ ಇರಬಹುದು, ಅದಕ್ಕೆ ಹೆಚ್ಚು ಹೆಚ್ಚು ಒತ್ತು ಕೊಟ್ಟು ಮೀಸಲಾತಿ ಲಭ್ಯವಾಗುವಂತೆ ಮಾಡಲಿಕ್ಕೆ ತಾವು ಎಲ್ಲಾ ರೀತಿಯ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯಾಂಗದಲ್ಲಿ, ಸಂವಿಧಾನದಲ್ಲಿ ೩೩ನೇ ಕಲಂನಲ್ಲಿ ಕೆಲವು ರಾಜಕೀಯ ಸ್ಥಾನಗಳನ್ನು ಮೀಸಲಿಡುವ ಪದ್ಧತಿ ಇದೆ. ಇದನು ನಾನು ಒಪ್ಪುತ್ತೇನೆ. ಇದನ್ನು ಮುಂದುವರಿಸಬೇಕೆಂಬ ಮಾತನ್ನು ನಾನು ಒಪ್ಪುತ್ತೇನೆ. ಕಳೆದ ನಲವತ್ತು ವರ್ಷಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಪಡೆದುಕೊಂಡು ಬಂದ ಮೀಸಲಾತಿ ವರ್ಗಕ್ಕೆ ಸೇರಿದ ಜನ ಇದ್ದರೂ ಸಹ, ಅವರು ಅನೇಕ ವಿಧವಾದ ಪ್ರಗತಿಪರವಾದ ಭಾವನೆಗಳನ್ನು ಹೊಂದಿದ್ದರೂ ಸಹ, ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ಇವರು ಅಡ್ಡಿ ಆತಂಕಗಳನ್ನು ಅವರು ಕಂಡುಕೊಂಡಿದ್ದಾರೆ. ಅವರಿಗೆ ಪ್ರಗತಿಪರವಾದ ಭಾವನೆ ಇರಬಹುದು. ಕಳೆದ ನಲವತ್ತು ವರ್ಷಗಳಲ್ಲಿ ಪರಿಶಿಷ್ಟ ಜಾತಿಯಿಂದ, ಜನಾಂಗದಿಂದ ಅತ್ಯಂತ ಉನ್ನತ ಮಟ್ಟದ ವ್ಯಕ್ತಿಗಳು ಬಂದಿದ್ದಾರೆ, ಡಾ. ಅಂಬೇಡ್ಕರ್ ಅಂತಹವರು ಬಂದಿದ್ದಾರೆ. ಆದರೆ ಅವರೂ ಸಹ ಹೆಚ್ಚು ಕೆಲಸ ಮಾಡದಂತಹ ಪರಿಸ್ಥಿತಿ ನಿರ್ಮಾಣ ಆಯಿತು. ಒಳ್ಳೆಯ ಭಾವನೆ ಇರುವಂತಹ ಎಲ್ಲ ಸಮಾಜಕ್ಕೆ ಸೇರಿದಂಥ ಜನ ಅವರಿಗೆ ಬೆಂಬಲ ಕೊಟ್ಟಿರಬಹುದು. ಆದರೂ ಸಹ ನಮ್ಮ ದೇಶದಲ್ಲಿ ನಲವತ್ತು ವರ್ಷದ ನಂತರವೂ ಸಹ ಹೆಚ್ಚು ಕಡಿಮೆ ನಲವತ್ತೇಳನೆಯ ಇಸವಿಯಲ್ಲಿದ್ದಂಥ ಪರಿಸ್ಥಿತಿ ಈಗ ಸ್ವಲ್ಪ ಮಟ್ಟಿಗೆ ಭಿನ್ನವಾಗಿದ್ದರೂ ಸಹ ಅದೇ ಒಂದು ಸಾಮಾಜಿಕ ವ್ಯವಸ್ಥೆ ಇನ್ನೂ ನಮ್ಮ ದೇಶದಲ್ಲಿದೆ. ಆದುದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕು. ಕೇವಲ ಪ್ರಗತಿಪರವಾದ ಭಾವನೆಗಳನ್ನು ಹೊಂದಿದ್ದರೆ ಸಾಲುವುದಿಲ್ಲ, ದೇಶದಲ್ಲಿರುವಂತಹ ಆಡಳಿತ ವ್ಯವಸ್ಥೆ ಚುನಾವಣಾ ಪದ್ಧತಿ ಏನಿದೆ ಅದು ಮೂಲಭೂತವಾಗಿ ಬದಲಾವಣೆಯಾಗದಿದ್ದರೆ ಸಾಮಾನ್ಯ ಜನರ, ಇವತ್ತಿನ ದಿವಸ ಸೂಕ್ತ ಪ್ರಾತಿನಿಧ್ಯ ಪಡೆಯುದಂಥ ಪರಿಸ್ಥಿತಿ ಉದ್ಭವವಾಗಬಹುದು. ಕೇವಲ ಶ್ರೀಮಂತರ ಕೈಗೊಂಬೆಗಳಾಗಿ, ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಯಾವುದೇ ಬಡವರ ಹಿತವನ್ನು ಕಾಪಾಡುವುದಕ್ಕೆ ಸಾಧ್ಯವಾಗುವ ಕಾರ್ಯನೀತಿಯನ್ನು ಅನುಸರಿಸುವುದಕ್ಕೆ ಸಾಧ್ಯವಾಗದಿರುವ ಪರಿಸ್ಥಿತಿ ಬರಬಹುದು. ಇದರ ಬಗ್ಗೆ ಆಲೋಚನೆ ಮಾಡಬೇಕು. ಕೇವಲ ಭಾವನೆಗಳನ್ನು ಪ್ರಕಟ ಮಾಡುವುದರ ಮುಖಾಂತರ ಅಥವಾ ನಿಮ್ಮ ಭಾವನೆ

ಗಳನ್ನು ಹಾಕಿಕೊಳ್ಳುವುದರ ಮುಖಾಂತರ ಸಮಾಜದಲ್ಲಿರುವ ದೀನದಲಿತರನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇಕಾದಂಥ ರಾಜಕೀಯ ಇಚ್ಛಾಶಕ್ತಿ ಬೇಕಾಗಿದೆ. ಇಂತಹ ಇಚ್ಛಾಶಕ್ತಿಯನ್ನು ಹೊಂದಿರುವಂತಹ ರಾಜಕೀಯ ಪಕ್ಷಗಳು ಎಷ್ಟಿವೆಯೋ ಗೊತ್ತಿಲ್ಲ. ಆದರೆ ಅದರಲ್ಲಿರುವಂತಹ ಹೆಚ್ಚು ಹೆಚ್ಚು ಜನ ಇಂತಹ ಶಕ್ತಿಯನ್ನು ಹೊಂದಿದ್ದರೆ ಮಾತ್ರ ಇದು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈ ದಿಸೆಯಲ್ಲಿ ಇವತ್ತಿನ ದಿವಸ ಕೇವಲ ಒಂದು ಜಾತಿಯ ನಾಯಕರಿಗೆ ಮಾತ್ರ ಮೀಸಲಾತಿ ಸೌಲಭ್ಯ ಇರುವುದು ಮುಖ್ಯ ಅಲ್ಲ. ಇಡೀ ಜನಾಂಗವೇ ಮುಂದುವರಿಯಬೇಕು. ಅವರ ಜೊತೆಯಲ್ಲೇ ಸಮಾಜದ ಎಲ್ಲ ವರ್ಗದ ಜನ ಏನಿದ್ದಾರೆ, ಅವರ ಬಗ್ಗೆ ಸಹಾನುಭೂತಿ ಇರುವ ಜನ ಏನಿದ್ದಾರೆ ಅವರು ಒಪ್ಪಿಕೊಳ್ಳುವುದರಿಂದ ಮಾತ್ರ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಸಾಧ್ಯವಾಗುತ್ತಿದೆ. ಅವರ ಆರ್ಥಿಕ ಪರಿಸ್ಥಿತಿ ಮೊದಲು ಸುಧಾರಣೆ, ಆಗಬೇಕು. ಕೇವಲ ರಾಜ್ಯಾಂಗದ ಅನುಸೂಚಿ ೩೩೮ರ ಮುಖಾಂತರ ಕೇವಲ ಮೀಸಲಾತಿ ಕೊಡುವ ಮೂಲಕ ಈ ದೇಶದ ಜನರನ್ನು ಉದ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಕೊಡುವ ವಿದ್ಯೆ ಮುಖಾಂತರ, ಬಡತನದ ರೇಖೆಯಿಂದ ಮೇಲೆತ್ತುವುದರ ಮುಖಾಂತರ ಅವರಿಗೆ ಬೇಕಾದಂಥ ನೌಕರಿ ಕೊಡುವುದರ ಮುಖಾಂತರ, ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದರ ಮುಖಾಂತರ ಮಾತ್ರ ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ವ್ಯವಸ್ಥೆಯನ್ನು ತರುವುದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ರೂಪಿಸುವುದರ ಮುಖಾಂತರ ಬದಲಾವಣೆ ತರಬೇಕು ಸಂವಿಧಾನದಲ್ಲಿ ೩೩೮ನೇ ಕಲಂ ಏನಿದೆ, ಇದು ಶಾಲಾ ಕಾಲೇಜುಗಳಲ್ಲಿ ಹಾಗೂ ನೌಕರಿಗಳಲ್ಲಿ ಕೊಡತಕ್ಕ ಮೀಸಲಾತಿ ಬಗ್ಗೆ ಇದೆ. ಇದೊಂದೇ ಸಾಕಾಗುವುದಿಲ್ಲ. ಅದಕ್ಕೆ ಬದಲಾಗಿ ೧೫-೪, ೧೬-೪ ಮತ್ತು ೩೩೨, ೩೩೫ ಮತ್ತು ೩೩೮ ವಿಧಿಗಳ ಪ್ರಕಾರ, ಈ ವಿಶೇಷ ವಿಧಿಗಳು ಏನಿವೆ ಇವುಗಳನ್ನು ಅನುಷ್ಠಾನಕ್ಕೆ ತಂದುಕೊಂಡು, ಈ ವಿಧಿಗಳ ಅನುಸಾರವಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಜನರನ್ನು ಮೇಲೆತ್ತುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಂತಹ ಕೆಲಸ ಮಾಡುವುದಕ್ಕೆ ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರಗಳಾಗಲೀ, ಯಾವುದೇ ಕಾರ್ಯಕ್ರಮ ಹಾಕಿಕೊಂಡಲ್ಲಿ ಅದಕ್ಕೆ ಎಲ್ಲರೂ ಪಕ್ಷಾತೀತವಾಗಿ ಬೆಂಬಲ ಕೊಡುವುದರ ಮುಖಾಂತರ ಈ ದುರ್ಬಲ ವರ್ಗದವರು ಯಾರು ಅನ್ಯಾಯಕ್ಕೆ ಒಳಗಾಗಿದ್ದಾರೆ, ಶೋಷಣೆಗೆ ಒಳಗಾಗಿದ್ದಾರೆ ತುಳಿತಕ್ಕೆ ಒಳಗಾಗಿದ್ದಾರೆ ಅವರನ್ನು ಮೇಲೆತ್ತುವುದಕ್ಕೆ ಸಾಧ್ಯವಾಗುತ್ತದೆಯೋ ಹೊರತು ಕೇವಲ ಕಾನೂನು ಮಾಡುವುದರ ಮುಖಾಂತರ ಇದು ಸಾಧ್ಯವಾಗುವುದಿಲ್ಲ, ನಮಗೆ ಕಾನೂನು ಬೇಕು. ಆದರೆ ಕಾನೂನು ಇದ್ದ ಮಾತ್ರಕ್ಕೆ ಎಲ್ಲವನ್ನು ಸರಿ ಮಾಡುವುದಕ್ಕೆ ಸಾಧ್ಯವಿಲ್ಲ. ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸುವ ಮುಖಾಂತರ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುವುದರ ಮುಖಾಂತರ ಸಾಧ್ಯವಾಗುತ್ತದೆ. ಎಂಬ ಅಭಿಮತವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ಅಧಿಕಾರಿಗಳ ಮಟ್ಟದಲ್ಲಿ ಮಾತ್ರ ಪಟ್ಟಭದ್ರಹಿತಾಶಕ್ತಿಗಳು ಇದ್ದಾರೆನ್ನುವ ಮಾತನ್ನು ಹೇಳುತ್ತಾರೆ. ಆದರೆ ಒಂದೇ ಜಾತಿಯಲ್ಲಿ ಅಲ್ಲ, ಎಲ್ಲಾ ಜಾತಿಗಳಲ್ಲಿಯೂ ಕೂಡ ಪಟ್ಟಬದ್ರಹಿತಾಸಕ್ತಿಗಳಿವೆ ಅಂತಹ ಪಟ್ಟಭದ್ರಹಿತಾಸಕ್ತಿಗಳನ್ನು ಸರ್ಕಾರದವರು ಗುರುತಿಸಿ ನಿರ್ನಾಮ ಮಾಡಬೇಕು. ಇಂತಹವರ ಜೊತೆ ಸರ್ಕಾರದವರು ಶಾಮೀಲಾಗುವುದಕ್ಕೆ ಪ್ರಯತ್ನ ಮಾಡಬಾರದೆಂದು ಹೇಳುತ್ತಾ ಇಂತಹ ಒಂದು ಹೊಸ ನೀತಿಯನ್ನು ಅನುಸರಿಸಲು ಪ್ರಯತ್ನ ಮಾಡಬೇಕೆನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಎಲ್ಲಾ ಪಕ್ಷಗಳ ಉದ್ದೇಶ ಇದೆ. ಈಗ ಸರ್ಕಾರದವರು ನಿಯಮ ೩೩೮ಕ್ಕೆ ಏನು ತಿದ್ದುಪಡಿ ತಂದಿದ್ದಾರೆ ಈ ತಿದ್ದುಪಡಿಯನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ ಭಾಷಣವನ್ನು ಕೇಳಿ ನನಗೆ ತುಂಬಾ ಆನಂದವಾಯಿತು. ನಮ್ಮ ಮುಂದೆ ಇರತಕ್ಕಂಥ ಸೂಚನೆ ಏನು ಇದೆ, ಅದನ್ನು ನಾವು ನೀವು ಎಲ್ಲರೂ ಒಪ್ಪುತ್ತೇವೆ. ಈ ಸದನದ ಎಲ್ಲಾ ಮಾನ್ಯ ಸದಸ್ಯರು ಸಹ ಒಪ್ಪುತ್ತಾರೆ. ಈಗ ಮಾತನಾಡಿದಂತಹ ಮಾನ್ಯ ಸದಸ್ಯರಾದ ಶ್ರೀ ಮಹಾನ್ ಬನ್ನಿಕೋಡ್‌ರವರು ಒಂದು ವಿಚಾರವನ್ನು ಹೇಳಿದರು. ಅದೇನೆಂದರೆ ಈಗ ಹತ್ತು ವರ್ಷಗಳ ಕಾಲ ಮಾತ್ರ ಮುಂದುವರಿಸಿದ್ದಾರೆ, ಇದನ್ನು ಏತಕ್ಕೆ ಸಮಗ್ರವಾಗಿ ನೋಡಬಾರದು ಎಂದು. ಆ ಸೂಚನೆಯನ್ನು ನಾನು ಸಹ ಒಪ್ಪುತ್ತೇನೆ. ಆದರೆ ರಾಜ್ಯಾಂಗದ ೩೩೮ನೇ ವಿಧಿಯಲ್ಲಿ ಒಂದಂಶ ಅಡಕವಾಗಿದೆ. ಅದೇನೆಂದರೆ.

Special Officer for Sch. Castes and Sch. Tribes.

"There shall be a special officer for the Sch. Castes and Sch. Tribes to be appointed by the President. It shall be

the duty of the Special Officer to investigate all metters/ relating to the safeguards provided for the Sch. Castes and Sch. Tribes under the Constitution and report to the President upon the working of these safeguards at such intervals as the President may direct and the President shall get all such reports to be laid before the Houses of Parliament''......

ಎಂದು ಇದೆ. ರಾಜ್ಯಾಂಗದ ೩೩೮ನೇ ಕಲಂ ಪ್ರಕಾರ ನಿಮ್ನ ವರ್ಗಗಳು. ಗುಡ್ಡಗಾಡು ಜನರು ಏನಿದ್ದಾರೆ ಇವರ ಸ್ಥಿತಿಗತಿಗಳನ್ನು ಆಗಿಂದಾಗ್ಯೆ ಪರಿಶೀಲಿಸಿ, ಯಾವ ರೀತಿ ಎಷ್ಟು ವರ್ಷ ಈ ಮೀಸಲಾತಿಯನ್ನು ಮುಂದುವರಿಸಬೇಕೆನ್ನುವ ಬಗ್ಗೆ ವರದಿ ಕೊಡಬೇಕಾಗುತ್ತದೆ. ಈಗ ಹತ್ತು ವರ್ಷಗಳಿಂದು ನೀವು ಒಂದು ಅವಧಿನಿಗಧಿಗೊಳಿಸತಕ್ಕಂಥಾದ್ದು ಸರಿಯೋ ಅಥವಾ ತಪ್ಪೋ ಎನ್ನುವ ಪ್ರಶ್ನೆ ಬರುತ್ತದೆ. ನನಗನಿಸುತ್ತದೆ ಈ ಬಗ್ಗೆ ಬಹಳ ವರ್ಷಗಳ ಹಿಂದೆಯೇ ಕಮೀಷನ್ ಅನ್ನು ನೇಮಿಸಬೇಕಾಗಿತ್ತು. ಆದರೆ ಆಗ ಅದನ್ನು ತೆಗೆದು ಹಾಕಿದರು. ಈಗ ಪುನಃ ಮಾಡಿದ್ದಾರೆ. ಇದು ರಾಜ್ಯಾಂಗದಲ್ಲಿಯೇ ಅಡಕವಾಗಿದೆ. ಈ ಜನರ ಸ್ಥಿತಿಗತಿಗಳನ್ನು ನೋಡಿ ಅವರ ಪರಿಸ್ಥಿತಿ ಸುಧಾರಿಸಿದೆಯೋ ಇಲ್ಲವೇ ಎನ್ನುವ ಬಗ್ಗೆ ಬಹಳ ಹಿಂದೆಯೇ ನೋಡಬೇಕಾಗಿತ್ತು. ಈಗ ನಾನು ಒಂದು ಮಾತನ್ನು ಹೇಳುತ್ತೇನೆ, ಈ ಪರಿಸ್ಥಿತಿ ಅತ್ಯಗತ್ಯವೇ ಅಥವಾ ಅನಿವಾರ್ಯವೇ ಎನ್ನುವುದನ್ನು ತಿಳಿಯಲು ರಾಜ್ಯಾಂಗ ಬದ್ಧವಾಗಿ ಈ ದೇಶದ ಅಧ್ಯಕ್ಷರು ಇಂತಹ ಒಂದು ಕಮೀಷನ್ ಅನ್ನು ನೇಮಕ ಮಾಡಿ ಈ ಜನರ ಸ್ಥಿತಿಗತಿಗಳ ಬಗ್ಗೆ ಒಂದು ತನಿಖೆ ಮಾಡಿ ವರದಿ ತಯಾರಿಸಿ ಅದರ ಆಧಾರದ ಮೇಲೆ ಎಷ್ಟು ವರ್ಷ ಇದನ್ನು ಮುಂದುವರಿಸಬೇಕು. ಇದನ್ನು ಎಷ್ಟು ಹೆಚ್ಚು ಮಾಡಬೇಕು ಎನ್ನುವ ನಿರ್ಣಯ ಮಾಡಿದರೆ ಬಹಳ ಒಳ್ಳೆಯದು. ಈಗ ಹತ್ತು ವರ್ಷಗಳಿಂದು ಇದೆ. ಇದನ್ನೂ ಕೂಡ ತಿದ್ದುಪಡಿ ಮಾಡಬಹುದು. ೧೦ ವರ್ಷಗಳ ಬದಲಾಗಿ ಎಷ್ಟು ವರ್ಷ ಮೀಸಲಾತಿಯನ್ನು ಕೊಟ್ಟರೆ ಇವರ ಉದ್ಧಾರವಾಗುತ್ತದೆ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆಯೇ ಹೊರತು ಈ ಕಲಂ ಅನ್ನು ತಿದ್ದುಪಡಿ ಮಾಡಿ ಬರೀ ೧೦ ವರ್ಷಗಳ ಮೀಸಲಾತಿಯನ್ನು ಮುಂದುವರಿಸುವುದು ಸರಿಯಲ್ಲವೆಂದು ನನಗನ್ನಿಸುತ್ತದೆ. ಆರ್ಟಿಕಲ್ ೩೮ರ ಪ್ರಕಾರ ನಾವು ನೋಡುವುದಾದರೆ,

"38. State to secure a social order for the promotion of welfare of the people.—

1) The State shall strive to promote the welfare of the people by securing and protecting as effectively as it may a social order in which justice, social, economic and political, shall inform all the institutions of the national life.'' ಎಂದಿದೆ. ಅಂದರೆ ಸಮಗ್ರವಾಗಿ ಏನು ಅಭಿವೃದ್ಧಿ ಕ್ಷೇತ್ರಗಳು ಇವೆ. ಏನು ಸಾಮಾಜಿಕ ಕ್ಷೇತ್ರಗಳು ಇವೆ, ಇದರಲ್ಲಿ ಸರಿಯಾಗಿರತಕ್ಕಂಥ, ವ್ಯವಸ್ಥೆ, ಅಭಿವೃದ್ಧಿ ಕಾರ್ಯಗಳನ್ನು, ಕಲ್ಯಾಣ ಕಾರ್ಯಗಳನ್ನು ಮಾಡತಕ್ಕಂತಾದ್ದು ಅನಿವಾರ್ಯ. ಇದನ್ನು ಮಾಡಿದ್ದೇವೆಯೇ ಇಲ್ಲವೇ ಎನ್ನತಕ್ಕಂತಾದ್ದು ಇಲ್ಲಿರುವ ಪ್ರಶ್ನೆ. ಮುಂದೆ ಇದರಲ್ಲಿ

''38 (2)– The State shall, in particular, strive to minimise the inequalities in income, and endeavour to eliminate inequalities in status, facilities and opportunities, not only amongst individuals but also amongst groups of people residing in different areas or engaged in different vocations'

ಎಂದಿದೆ. ಅಂದರೆ ಪ್ರಜಾಪ್ರಭುತ್ವವು, ಸಮಾನರು ಎನ್ನತಕ್ಕ ಆಧಾರದ ಮೇಲೆ ಇರತಕ್ಕಂಥಾದ್ದು, ಅದರ ಮೇಲೆ ಎಲ್ಲರೂ ಸಮಾನರಾಗಿದ್ದೇವೆ. ಅದರ ಮೇಲೆ ಏನೇನು ಸವಲತ್ತುಗಳನ್ನು ರಾಜ್ಯಾಂಗದ ಪ್ರಕಾರ ಪಡೆಯಬೇಕು ಎಂಬುದನ್ನು ನಿರ್ಧಾರ ಮಾಡಬೇಕು. ನಾವು ಏನು ಆಗಿದ್ದೇವೆ, ನಮ್ಮ ಸಮಾಜದಲ್ಲಿ, We have a society of unequals, and then, democracy presumes that the

society should be of equals, Now we have a democracy of unequal society.

ಆದ್ದರಿಂದ, ಅನ್-ಈಕ್ವಲ್ ಸೊಸೈಟಿಯನ್ನು ತೆಗೆದುಹಾಕಿ, ಅಸಮಾನತೆ ಇರತಕ್ಕಂಥಾದ್ದನ್ನು ಸಮಾಜದಿಂದ ಕಿತ್ತುಹಾಕಿ ನಂತರ ಪ್ರಜಾಪ್ರಭುತ್ವವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇದರಲ್ಲಿದೆ. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದವು. ೪೦ ವರ್ಷಗಳ ಹಿಂದಿನಿಂದಲೂ ಅಸಮಾನರು ಎಂದು ಮಾತನಾಡುತ್ತಿದ್ದೇವೆ. When we are going to achieve equalitv amongst all the people ? Now we have a society of unequals.

ಶ್ರೀ ಹೆಚ್. ಏಕಾಂತಯ್ಯ.—ಎಲ್ಲಿಯವರೆಗೆ ನಮ್ಮ ಕಾರ್ಯಕ್ರಮಗಳು ಫಲ ಕೊಡುವುದಿಲ್ಲವೋ ಅಲ್ಲಿಯವರೆಗೂ ಹೀಗೇ ಇರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಕಾರ್ಯಕ್ರಮಗಳನ್ನು ಹಾಕಿಕೊಂಡು ನಾವು ಯಾವ ರೀತಿ ಅಸಮಾನತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎನ್ನುವುದು ಪ್ರಶ್ನೆ ಕಲಮ್ ೩೯ನೇಯದರಲ್ಲಿ ಈ ರೀತಿ ಹೇಳಿದೆ :—

" 39. Certain principles of policy to be followed by the State

The State shall in particular, direct its policy towards securing.—

a) that the citizens, men and women equally. have the right to an adequate means of livelihood :

b) that the ownership and control of the material resources of the community are so distributed as best to subserve the common good :

c) that the operation of the econmic system does not result rn the concentration of wealth and means of production to the common detriment :

d) that there is equal pay for equal work for both men and women :

e) that the health and strength of workers, men and women, and the tender age of childern are not abused and that citizens are not forced by economic necessity to enter avocations unsuited to their age or strength :

f) teat childern are given opportunities and facilities to develop in a healthy manner and in conditions of freedom and dignity and that childhood and youth are protected against exploitation and against moral and material abandonment."

೧-೦೦ ಪಿ. ಎಂ.

ಈ ಒಂದು ರಾಜ್ಯಾಂಗದ ಪ್ರಕಾರ ಎಲ್ಲಾ ರಾಜ್ಯಗಳವರು ಈ ಕಡೆಗೆ, ಈ ದಿಶೆಯಲ್ಲಿ ಗಮನ ಹರಿಸಿ ಕೆಲಸ ಮಾಡಬೇಕು, ಇದರ ಸಾಧನೆಗಾಗಿ ಕೆಲಸ ಮಾಡಬೇಕು. ಹಾಗೆ ಇಂಥ ಒಂದು ಸಾಧನೆಯನ್ನು ಸಾಧಿಸಿದ ನಂತರ ಮಾತ್ರ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಅರ್ಥಗರ್ಭಿತವಾಗುತ್ತದೆಯೋ ಹೊರತು ಇಲ್ಲದಿದ್ದರೆ ಆಗುವುದಿಲ್ಲ ಎಂಬ ಮಾತನ್ನು ಹೇಳ ಬಯಸುತ್ತೇನೆ ಇವೊತ್ತು ಈ ಮೊಸಲಾತಿಯನ್ನು ನಾವುಗಳು ಒಪ್ಪಿದ್ದೇವೆ. ಆದರೆ ಇದರ ಬಗ್ಗೆ ಸೂಕ್ತ ಸಾಧನೆಗಳನ್ನು ಮಾಡುವುದಕ್ಕೆ ಏನು ಪ್ರಯತ್ನ

ಗಳನ್ನು ಸಾಧ ಮಾಡಿದ್ದೇವೆಂಬುದನ್ನು ನಾವು ವಿಚಾರ ಮಾಡಬೇಕು. ಈಗ ಹೀಗೆ ೧೦ ವರ್ಷಗಳು ೨೦ ವರ್ಷಗಳು ಎಂದು ಮುಂದುವರಿಸುವುದನ್ನು ಬಿಟ್ಟು, ಒಟ್ಟಾರೆ, ಈ ಜನರ ಉದ್ಧಾರಕ್ಕಾಗಿ ಎಷ್ಟು ವರ್ಷಗಳವರೆಗೆ ವಿಸ್ತರಣೆ ಮಾಡಬೇಕೆಂಬ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕು. ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರು ಈ ಕುರಿತು ಹೇಳಿದ ವಿಚಾರಗಳನ್ನು ನಾನು ಸಮರ್ಥನೆ ಮಾಡುತ್ತೇನೆ. ದೇಶದಲ್ಲಿ ನಿಮ್ಮ ವರ್ಗದವರು ಏನಿದ್ದಾರೆ ಅವರು ಹಿಂದೂಗಳೆನಿಸಿಕೊಂಡಿದ್ದಾರೆ. ಅವರ ಗತಿ ಈ ಹಿಂದೂಗಳ ಜೊತೆಗೆ ಏನಾಗಿದೆ, ಅವರ ಹಿತಸಾಧನೆಯಾಗಿದೆಯೇ, ಅವರ ಉದ್ಧಾರಕ್ಕಾಗಿ ಯಾವ ಪ್ರಗತಿಯನ್ನು ಸಾಧಿಸಲಾಗಿದೆ, ಎಂಬ ಪ್ರಶ್ನೆ ಬರುತ್ತದೆ. ಈ ಕುರಿತು ಮೆಕಾಲೆಯವರು ಹೇಳಿದ ಒಂದು ಮಾತನು ಹೇಳ ಬಯಸುತ್ತೇನೆ.

"People crushed by law and religion have no hopes but through power" ಯಾರು ಈ ದೇಶದಲ್ಲಿ ತುಳಿತಕ್ಕೆ ಒಳಗಾಗಿದ್ದಾರೆ. ಅಂತಹವರ ಉದ್ಧಾರವಾಗಬೇಕಾದರೆ ತುಳಿತಕ್ಕೊಳಪಟ್ಟವರು ಅಧಿಕಾರಕ್ಕೆ ಬರಬೇಕು, ಎಂಬ ಮೆಕಾಲೆಯವರ ಅಭಿಪ್ರಾಯದ ಪ್ರಕಾರ ಅಂಥ ಜನರಿಗೆ ನಾವು ಇಷ್ಟರವರೆಗೆ ಎಷ್ಟು ಅಧಿಕಾರವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಯೋಚನೆ ಮಾಡಬೇಕು. ಈ ರೀತಿಯಲ್ಲಿ ತುಳಿತಕ್ಕೊಳಗಾದವರು ಬಹುಭಾಗದಲ್ಲಿ ಅಧಿಕಾರಕ್ಕೆ ಬರುವ ಕುರಿತು ಯಾವ ರೀತಿಯಲ್ಲೂ ಒಂದು ಸೂಕ್ತ ವ್ಯವಸ್ಥೆಯಾಗಿಲ್ಲ ಎಂದು ನಾನು ಹೇಳ ಬಯಸುತ್ತೇನೆ. ಈ ರೀತಿಯಲ್ಲಿ ಹಿಂದುಳಿದವರು ಮುಂದಕ್ಕೆ ಬರಬೇಕಾದರೆ ಅವರಿಗೆ ಮಾನಸಿಕ ಸ್ವಾತಂತ್ರ್ಯ ಬೇಕು, ರಾಜ್ಯಾಂಗದ ಸ್ವಾತಂತ್ರ್ಯವೂ ಬೇಕು. ಈಗ ಹಿಂದೂವರ್ಗದಲ್ಲಿರುವ ಈ ಜನರು ಬುದ್ಧರಾದರೆ ಕ್ರಿಸ್ತರಾದರೆ, ಜೈನರಾದರೆ ಏನು ವ್ಯವಸ್ಥೆ ಇದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ದೇಶದಲ್ಲಿರುವ ಸಿಖ್ ಜನಾಂಗದವರಿಗೆ ಮೀಸಲಾತಿಯನ್ನು ಕೊಟ್ಟಿದ್ದೇವೆ. ಏಕೆಂದರೆ ಅವರಲ್ಲಿ ಪ್ರಬಲವಾದ ನಾಯಕತ್ವ ಇತ್ತು, ಆಗ ಅದನ್ನು ಜವಾಹರಲಾಲ್ ನೆಹರೂರವರು ಕೂಡ ಒಪ್ಪಿದರು. ಅವರಿಗೆ ಮೀಸಲಾತಿಯನ್ನು ಆಗ ಕೊಡಲಾಯಿತು. ಆ ಒಂದು ನೆಲೆಯಲ್ಲಿ ಈ ನಿಮ್ನವರ್ಗದವರು ಬುದ್ಧರಾದರೆ, ಕ್ರಿಸ್ತರಾದರೆ ಅವರಿಗೆ ಇದ್ದ ಮೀಸಲಾತಿಯು ಮುಂದುವರಿಯುತ್ತದೆಯೇ, ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ ರಾಜ್ಯಾಂಗದ ಪ್ರಕಾರ ಈ ಕುರಿತು ನಿಮ್ನವರ್ಗದವರು ಬೇರೆ ಜಾತಿವರ್ಗಕ್ಕೆ ಹೋದರೂ ಕೂಡ ಮೀಸಲಾತಿಯು ಸಿಗುವಂತೆ ತಿದ್ದುಪಡಿಯನ್ನು ತರಬೇಕು. ಸಿಖ್‌ರಿಗೆ ಕೊಟ್ಟ ಮೀಸಲಾತಿಯನ್ನು ಈ ಎಸ್‌ಸಿ ಮತ್ತು ಎಸ್‌ಟಿಯವರಿಗೆ ಏಕೆ ಕೊಟ್ಟಿಲ್ಲ ? ಬಹುಶಃ ಇದಕ್ಕೆ ಕಾರಣ ಏನೆಂದರೆ, ಈ ನಿಮ್ನವರ್ಗದವರು ಬುದ್ಧ ಧರ್ಮದವರಾದರೆ, ಕ್ರಿಸ್ತ ಧರ್ಮದವರಾದರೆ, ಜೈನ ಧರ್ಮದವರಾದರೆ ಹಿಂದೂಗಳ ಜನಸಂಖ್ಯೆಯು ಕಡಿಮೆಯಾದೀತು ಎಂಬ ಭಯ ಇರಬಹುದು. ಹೀಗೆ ನಿಮ್ನವರ್ಗದವರು ಬೇರೆ ಧರ್ಮವನ್ನು ಸ್ವೀಕಾರ ಮಾಡಿದರೆ ಅವರಿಗೆ ಇದ್ದ ಮೀಸಲಾತಿಯನ್ನು ಮುಂದುವರಿಸಬೇಕೆಂದು ಹಾಗೂ ಇದನ್ನು ರಾಜ್ಯಾಂಗಬದ್ಧವಾಗಿ ಮಾಡಬೇಕೆಂದು ನಾನು ಹೇಳುತ್ತಾ ಇದ್ದೇನೆ. ಈ ಬಗ್ಗೆ ಇದುವರೆವಿಗೂ ಏಕೆ ಆ ರಾಜ್ಯಾಂಗಬದ್ಧವಾದ ಹಕ್ಕನ್ನು ಕೊಟ್ಟಿಲ್ಲ ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಯಾವುದೇ ಪಕ್ಷದವರೂ ಜವಾಬ್ದಾರರಾಗಿರಬಹುದು. ಒಟ್ಟಾರೆ ಈ ನಿಮ್ನವರ್ಗದವರು ಹಿಂದೂ ಸಮಾಜವನ್ನು ಬಿಟ್ಟು ಹೋದರೆ, ಹಿಂದೂ ಸಮಾಜದ ಜನಸಂಖ್ಯೆ ಕಡಿಮೆ ಆಗುತ್ತದೆ, ಅದರ ಪರಿಣಾಮವನ್ನು ಗಣನೆಗೆ ತೆಗೆದುಕೊಂಡು ಈ ರೀತಿಯಲ್ಲಿ ಆ ಒಂದು ತಿದ್ದುಪಡಿಯನ್ನು ತಾರದೆ ಇದ್ದಿರಬಹುದು ಎಂದು ಕಾಣುತ್ತದೆ. ಈ ಜನರೂ ಬೇರೆ ಜಾತಿಗೆ ಹೋದರೆ ರಾಜ್ಯಾಂಗದತ್ತವಾಗಿ ಇನ್ನೇ ಕಲವಿ ನಲ್ಲಿ ಏನು ಅಡಕವಾಗಿದೆ, ಅಂದರೆ ನಿಮ್ನ ವರ್ಗಗಳು ಬೌದ್ಧ ಆದರೆ ರಾಜಕೀಯ ಮೀಸಲಾತಿ ಕೊಡಬೇಕೆನ್ನುವುದು ಏನಿದೆ ಅದರ ಬಗ್ಗೆ ತಾವು ತೀವ್ರವಾಗಿ ಯೋಚನೆ ಮಾಡಿ ಶೀಘ್ರವಾಗಿ ಜನತಾ ಪ್ರಾತಿನಿಧ್ಯ ಆಕ್ಟಿನಲ್ಲಿ ವಿಷಯವನ್ನು ಸೇರಿಸಿ ಬುದ್ಧಿಸ್ಟ್ ಯಾರ್‍ಯಾರು ಆಗುತ್ತಾರೆ ಅಂಥವರಿಗೆ ಮೀಸಲಾತಿ ಕೊಡಬೇಕೆಂದು ಮಾಡಿದರೆ ನಾನೇ ಮೊದಲು ಕೇಂದ್ರ ಸರ್ಕಾರದವರಿಗೆ ಧನ್ಯವಾದ ಅರ್ಪಿಸುತ್ತೇನೆ, ಇದು ಅವಶ್ಯವುಂಟು ಈ ರೀತಿ ಮಾಡಿದರೆ ಅದರ ಕ್ರೆಡಿಟ್ ಅವರಿಗೇ ಹೋಗುತ್ತದೆ. ರಾಜ್ಯಾಂಗದತ್ತವಾದ ಅವರ ಕರ್ತವ್ಯವುಂಟು. ನಾನು ಏನು ಹಿನ್ನೆಲೆ ಹೇಳಿದ್ದೇನೆ ನಿಮ್ನ ವರ್ಗದವರು ಹಿಂದೂ ಸಮಾಜ ಬಿಟ್ಟು, ಹೋದರೆ ಹಿಂದೂ ಸಮಾಜದ ಸಂಖ್ಯೆ ಕಡಿಮೆಯಾಗುತ್ತದೆಂದು ಇದುವರೆಗೂ ಆ ತಿದ್ದುಪಡಿ ತಂದಿಲ್ಲ. ಅದಕ್ಕೆ ಹೆದರದೆ ಕೇಂದ್ರ ಸರ್ಕಾರ ತಿದ್ದುಪಡಿ ತಂದರೆ ನಾವು ಧನ್ಯವಾದ ಅರ್ಪಿಸುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ.—ಇದು ನಿಮ್ಮ ಸರ್ಕಾರದ ಬೆಂಬಲವೇ ? ವೈಯಕ್ತಿಕ ಬೆಂಬಲವೇ ಅಥವಾ ಪಕ್ಷದ ಬೆಂಬಲವೇ ?

ಶ್ರೀ ಬಿ. ಬಸವಲಿಂಗಪ್ಪ.—ವೈಯಕ್ತಿಕವಾಗಿ ಇದ್ದೇ ಇದೆಯಲ್ಲ. ಎರಡನೆಯದು ನಾನು ಯಾವ ಸಮೂಹವನ್ನು ಪ್ರತಿನಿಧಿಸುತ್ತೇನೆ, ನಿರ್ಗತಿಕ ವಂಚಿತ ಸಮಾಜ ಏನಿದೆ ಅವರ ಪರವಾಗಿ ಹೇಳುತ್ತಿದ್ದೇನೆ

ಇದರಲ್ಲಿ ನಮ್ಮದು ನಿಮ್ಮದು ಅಂತ ವ್ಯತ್ಯಾಸ ಇಲ್ಲ. ಏಕೆಂದರೆ ಅಶೋಕನ ಕಾಲದಿಂದ ಅಂದರೆ ಕಳೆದ ಒಂದು ಸಾವಿರ ವರ್ಷಗಳ ಪರ್ಯಂತ ಈ ದೇಶದಲ್ಲಿ ಎಲ್ಲರೂ ಬುದ್ಧಿಸ್ಟ್ ಆಗಿದ್ದರು, ನೀವೂ ಆಗಿದ್ದೀರಿ. ಈಗ ಅದನ್ನು ಮರೆತು ಬಿಟ್ಟಿದ್ದೀರಿ.

> "The State relig on is Buddhist religion for one thousand years in this country from the days of Ashoka. The Scheduled Caste people are Hindus by virtue of acceptance of Hinduism and not by palition."

ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಏನು ಬುದ್ಧಿಸ್ಟ್ ಇದ್ದರು ಅದು ಪುನಃ ಆಗಬೇಕು ಆಗದೇ ಹೋದರೆ ಈಗ ಜಾತಿಗಳ ಹೆಸರಿನಲ್ಲಿ ಏನು ಹೊಡೆದಾಟ ಮಾಡುತ್ತಿದ್ದಾರೆ ತಮ್ಮ ಜಾತಿ ಚಿಕ್ಕದು ದೊಡ್ಡದು ಎಂದು ಹೊಡೆದಾಟ ಮಾಡುತ್ತಿದ್ದಾರೆ ಅದು ಹೋಗಬೇಕಾದರೆ ನಾವೆಲ್ಲ ಬುದ್ಧಿಸ್ಟ್ ಆಗಬೇಕು. ಅಂತಹ ಪರಿಸ್ಥಿತಿ ಬರುತ್ತದೆ. ಜಾಸ್ತಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾರಣವೇನೆಂದರೆ ಶ್ರೀಮಾನ್ ಖರ್ಗೆಯವರು ಜಿಲ್ಲಾಪರಿಷತ್ತಿನಲ್ಲಿ ಮಂಡಲ ಪಂಚಾಯ್ತಿನಲ್ಲಿ ಪ್ರಧಾನರು ಯಾರೂ ಇಲ್ಲವೆಂದು ಹೇಳುತ್ತಿದ್ದರು. ನಾನು ಅದರ ಲೆಕ್ಕ ಇನ್ನೂ ತಂದಿಲ್ಲ. ತಂದ ಮೇಲೆ ನಿಮ್ಮ ಮುಂದೆ ಹೇಳುತ್ತೇನೆ, ನಂತರ ನೀವು ಏನು ಮಾಡಬೇಕೆಂದು ಕೇಳುತ್ತೀರೋ ಅದನ್ನು ಮಾಡೋಣ ನಾನು ಜಾಸ್ತಿ ಮಾತನಾಡಬೇಕೆಂದಿದ್ದೆ. ಆದರೆ ಅಧ್ಯಕ್ಷರು ಬೇರೆಯವರಿಗೆ ಅವಕಾಶ ಕೊಡುತ್ತಿದ್ದಾರೆ. ಈಗ ಏನು ತಿದ್ದುಪಡಿ ತಂದಿದ್ದಾರೆ ಅದಕ್ಕೆ ಬೆಂಬಲ ಕೊಟ್ಟು ನನ್ನ ಮಾತನ್ನು ನಿಲ್ಲಿಸುತ್ತೇನೆ.

ಶ್ರೀಮಾನ್ ಬನ್ನಿಕೋಡ್.—ನೀವು ೪೨ ವರ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಿರಲ್ಲ, ಆಗ ಇದನ್ನು ಪ್ರತಿಪಾದನೆ ಮಾಡಬೇಕಾಗಿತ್ತು. ಈಗ ನಮಗೆ ಹೇಳುವುದನ್ನು ನೋಡಿದರೆ ಇಲ್ಲಿಗೆ ಅವರು ಬರಲಿಕ್ಕೆ ಅವರಿಗೆ ಇಚ್ಛೆ ಇದೆ ಎಂದು ನನಗೆ ಅನಿಸುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ನಿಲುವು ನಿಮಗೆಲ್ಲ ಗೊತ್ತು. ನಾನು ಅಲ್ಲಿ ಇಲ್ಲಿ ಸರಿದಾಡುವುದಿಲ್ಲ. ಆ ಕೆಲಸ ನೀವು ಬೇಕಾದರೆ ಮಾಡಿ ನಾನು ಆ ಕೆಲಸ ಇಲ್ಲೇ ಇದ್ದು ಮಾಡುತ್ತೇನೆ. ಕೇಂದ್ರವಲ್ಲಿ ನಿಮ್ಮ ಸರ್ಕಾರ ಇದೆಯಲ್ಲ ಆದ್ದರಿಂದ ಈ ಸದನದಲ್ಲಿ ಕೇಳುತ್ತಿದ್ದೇನೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಬಸವಲಿಂಗಪ್ಪನವರು ಗೊಂದಲದ ಚಕ್ರವರ್ತಿಗಳು.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡನೆ ಮಾಡಿರತಕ್ಕಂಥ ಈ ರಾಜ್ಯಾಂಗದ ೬೨ನೇ ತಿದ್ದುಪಡಿಗೆ ಸಂಪೂರ್ಣವಾದ ಬೆಂಬಲವನ್ನು ನೀಡಿ, ಇದರ ಮೇಲೆ ಮಾತನಾಡಲಿಕ್ಕೆ ನಾನು ನಿಂತಿದ್ದೇನೆ. ಇದು ಬಹಳ ಸಂತೋಷದ ವಿಚಾರ. ಈ ದೇಶದಲ್ಲಿ ಇರತಕ್ಕಂಥ ರಾಜಕೀಯ ಪಕ್ಷಗಳು ಅಂದರೆ. ಅದರಲ್ಲಿ ಕಾಂಗ್ರೆಸ್ ಇರಬಹುದು, ಕಮ್ಯುನಿಸ್ಟ್ ಇರಬಹುದು, ದಳ ಇರಬಹುದು ಬಿ.ಜೆ.ಪಿ. ಇರಬಹುದು, ಮತ್ತೊಂದು ಪಕ್ಷ ಇರಬಹುದು, ಈ ಎಲ್ಲ ಪಕ್ಷಗಳು ಪುನಃ ಹತ್ತು ವರ್ಷಗಳ ಕಾಲದವರೆಗೆ ಈ ಒಂದು ಮೀಸಲಾತಿ ಸೌಲಭ್ಯವನ್ನು ಈ ವರ್ಗಗಳಿಗೆ ಅಂದರೆ ಹರಿಜನ ಗಿರಿಜನರಿಗೆ ಮುಂದುವರಿಸುವುದಕ್ಕೋಸ್ಕರ ಈ ೬೨ನೇ ತಿದ್ದುಪಡಿಯನ್ನು ಏನು ತಂದಿದ್ದಾರೆ, ಇದನ್ನು ಸ್ವಾಗತಿಸಿವೆ. ಯಾವ ರಾಜಕೀಯ ಪಕ್ಷಗಳೂ ಕೂಡಾ ಇದನ್ನು ವಿರೋಧ ಮಾಡಿಲ್ಲ, ಇದೇ ಸಂತೋಷದ ವಿಚಾರ ಏಕೆಂದರೆ ನಾವು ಕೆಲವೊಮ್ಮೆ ಈ ಮೀಸಲಾತಿಯ ವಿರುದ್ಧ ನಡೆದಿರುವ ಚಳುವಳಿಯನ್ನು ಉತ್ತರ ಭಾರತದಲ್ಲೂ ಮತ್ತು ಬೇರೆ ಕೆಲವು ಭಾಗಗಳಲ್ಲಿ ನಾವು ನೋಡಿದ್ದೇವೆ. ಆದರೆ ಇದು ರಾಜಕೀಯ ಪಕ್ಷಗಳ ಹೆಸರಿನಲ್ಲಿ ನಡೆದಿರುವುದನ್ನು ನಾವು ನೋಡಿಲ್ಲ. ಇದರ ಅರ್ಥ ಏನೆಂದರೆ ಪುನಃ ಹತ್ತು ವರ್ಷಗಳ ಕಾಲದವರೆಗೆ ಈ ಒಂದು ಮೀಸಲಾತಿ ಸೌಲಭ್ಯವನ್ನು ಈ ನಿರ್ಗತಿಕ ವರ್ಗಗಳಿಗೆ ಮುಂದುವರಿಸುವುದಕ್ಕೆ ಯಾವುದೇ ರಾಜಕೀಯ ಪಕ್ಷಗಳ ಅಭ್ಯಂತರ ಇಲ್ಲವೆಂದು ಸ್ಪಷ್ಟವಾಗಿ ಇದರಿಂದ ಗೊತ್ತಾಗುತ್ತದೆ ಇದು ಬಹಳ ಸಂತೋಷ ಪಡತಕ್ಕಂಥ ಒಂದು ವಿಚಾರ. ಆದರೂ ಕೂಡಾ ನಾವು ಈ ಸಂದರ್ಭದಲ್ಲಿ ಚರ್ಚೆಯನ್ನು ಪಾರ್ಲಿಮೆಂಟ್‌ನ ಉಭಯ ಸದನಗಳಲ್ಲಿಯೂ, ರಾಷ್ಟ್ರದ ಎಲ್ಲ ರಾಜ್ಯಗಳ ಶಾಸನಸಭೆಗಳಲ್ಲಿ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಏತಕ್ಕೆಂದರೆ ಸ್ವಾತಂತ್ರ್ಯ ನಂತರ ಕಳೆದ ೪೦–೪೨ ವರ್ಷಗಳ ಅವಧಿಯಲ್ಲಿ ನಾವು ಇಲ್ಲಿಯವರೆಗೂ ಕೂಡಾ ಕೊಟ್ಟಿರತಕ್ಕಂಥ ಒಂದು ಮೀಸಲಾತಿ ಸೌಲಭ್ಯ ಏನಿದೆ, ಇದು ಮುಂದುವರಿಯಬೇಕು ? ಬೇಡವೇ ಎನ್ನತಕ್ಕಂಥ ವಿಚಾರವನ್ನು ಪುನಃ ಪುನಃ ಕೆಲವೊಮ್ಮೆ ಚರ್ಚೆಗೆ ಬರತಕ್ಕಂಥ ವಿಷಯವಾಗಿರುವುದರಿಂದ ನಾವು ಕಾನೂನುಬದ್ಧವಾಗಿ ಚರ್ಚೆಯನ್ನು ಮಾಡಬೇಕಾದಂಥ ಅವಶ್ಯಕತೆ ಇದೆ ಎನ್ನತಕ್ಕಂಥದ್ದು ಒಂದು ಕಾರಣವಾದರೆ, ಮತ್ತೊಂದು ಸಾರಿ ಈ ಒಂದು ವಿಷಯದ ಬಗ್ಗೆ ನಮ್ಮ ಗಮನವನ್ನು ಹರಿಸತಕ್ಕಂಥ ಅವಶ್ಯಕತೆ ಇಲ್ಲಿದೆ ಎನ್ನತಕ್ಕಂಥದ್ದು ಕೂಡಾ ಮತ್ತೊಂದು ಕಾರಣ. ಇನ್ನು ಏತಕ್ಕಾಗಿ ಈ ಸೌಲಭ್ಯವನ್ನು ಕೊಡಬೇಕು

ಎನ್ನತಕ್ಕಂಥ ಪ್ರಶ್ನೆಗೆ ಆಳವಾದ ಅಭ್ಯಾಸ ಮಾಡಿ ಉತ್ತರವನ್ನು ಕೊಡಬಹುದು. ಆದರೆ ಕಾಲದ ಅಭಾವದಿಂದ ಸಾಧ್ಯವಾಗುವುದಿಲ್ಲ. ಈ ಒಂದು ಪ್ರಶ್ನೆ ಅನಾವಶ್ಯಕ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ಇದನ್ನು ಎಲ್ಲರೂ ಕೂಡಾ ಒಪ್ಪಿಕೊಂಡಿದ್ದಾರೆ. ನಮ್ಮ ಸಮಾಜದಲ್ಲಿರತಕ್ಕಂಥ ಈ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗಗಳ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಎಷ್ಟು ವರ್ಷಗಳಿಂದ ಈ ವರ್ಗಗಳ ಜನರು ತುಳಿತಕ್ಕೆ ಒಳಗಾಗಿದ್ದಾರೆ ಎಂಬ ಪ್ರಶ್ನೆ ಬಂದರೆ ಅದು ಒಂದು ಸಾವಿರ ವರ್ಷ ಇರಬಹುದು. ಒಂದೂವರೆ ಸಾವಿರ ವರ್ಷ ಇರಬಹುದು ಎರಡು ಸಾವಿರ ವರ್ಷ ಇರಬಹುದು ಎನ್ನತಕ್ಕಂಥ ಉತ್ತರ ಅಲ್ಲಿದೆ. ಇವತ್ತು ಅಂಥ ವರ್ಗಗಳನ್ನು ಮೇಲೆ ಎತ್ತಬೇಕೆಂದರೆ ಯಾವ ಯಾವ ಕ್ಷೇತ್ರದಲ್ಲಿ ಅವರನ್ನು ಮೇಲಕ್ಕೆ ಎತ್ತಬೇಕು ಎನ್ನತಕ್ಕಂಥದ್ದು ಒಂದು. ಇವತ್ತು ಈ ರಾಜ್ಯಾಂಗದ ೬೨ನೇ ತಿದ್ದುಪಡಿ ಏನು ಇದೆ, ಅದನ್ನು ತಿದ್ದುಪಡಿ ಮಾಡುವುದರ ಮುಖಾಂತರ ಈ ಕೆಲಸ ಆಗಬೇಕು. ಈ ದೇಶದಲ್ಲಿ ಇರತಕ್ಕಂಥ ಎಲ್ಲಾ ಸಂಘ ಸಂಸ್ಥೆಗಳು ಎಲ್ಲೆಲ್ಲಿ ಅಪಾಯಿಂಟ್‌ಮೆಂಟ್ಸ್ ನಡೆಯುತ್ತಿದೆ, ಮತ್ತು ಎಲ್ಲೆಲ್ಲಿ ಚುನಾವಣೆಗಳು ನಡೆಯುತ್ತಿದೆ. ಈ ಎಲ್ಲದಕ್ಕೂ ಮೀಸಲಾತಿ ಸೌಲಭ್ಯವನ್ನು ಇನ್ನು ಹತ್ತು ವರ್ಷಗಳವರೆಗೂ ನಾವು ಏನೂ ಕೊಡುತ್ತಿಲ್ಲ. ಇದನ್ನು ಕೆಲವರು ಬಹಳ ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಈ ಮೀಸಲಾತಿ ಸೌಲಭ್ಯ ಪ್ರಾಮುಖ್ಯವಾಗಿರತಕ್ಕಂಥ ಶಾಸಕರಿಗೆ ಮುಖ್ಯವಾಗಿ ಇರತಕ್ಕಂಥ ತಿದ್ದುಪಡಿ. ಪಾರ್ಲಿಮೆಂಟ್ ಕ್ಷೇತ್ರ ಅಥವಾ ಅಸೆಂಬ್ಲಿಗೆ ಮಾತ್ರ ಸೀಮಿತಗೊಂಡಿರತಕ್ಕಂಥ ತಿದ್ದುಪಡಿ ಇದು. ಇದನ್ನು ಬಿಟ್ಟು ಮುಂದಕ್ಕೆ ಇದು ಹೋಗುವುದಿಲ್ಲ. ಇಲ್ಲಿ ಶಾಸಕಾಂಗವೆಂದರೆ ಅದು ಪಾರ್ಲಿಮೆಂಟ್ ಇರಬಹುದು, ರಾಜ್ಯದಲ್ಲಿ ಇರತಕ್ಕಂಥ ಶಾಸಕಾಂಗ ಇರಬಹುದು. ಅಷ್ಟಕ್ಕೆ ಮಾತ್ರ ಇದನ್ನು ಸೀಮಿತಗೊಳಿಸಿ ನಾನು ಮಾತನಾಡುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನಾವು ಪಾರ್ಲಿಮೆಂಟಿನಲ್ಲಿ ಅಥವಾ ಶಾಸನಸಭೆಗಳಲ್ಲಿ ಸದಸ್ಯರನ್ನಾಗಿ ಮಾಡುವುದರ ಮುಖಾಂತರ ಈ ಜನರ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಮಾಡುತ್ತೇವೆಂಬ ಗ್ರಹಿಕೆ ನಮ್ಮ ಹತ್ತಿರ ಇರಬಾರದು, ಇದ್ದರೆ ಅದು ಒಳ್ಳೆಯದಲ್ಲ. ಅದರಿಂದ ಇನ್ನೂ ಮುಂದಕ್ಕೆ ಹೋಗಬೇಕಾಗುತ್ತದೆ. ಒಂದು ಕಾಲ ಇತ್ತು. ೧೯೫೨ನೇ ಇಸವಿಯಲ್ಲಿ ಮೊದಲನೇ ಪಾರ್ಲಿಮೆಂಟ್ ಶುರು ಆದಾಗ, ನಾವು ಇನ್ನೂ ವಿದ್ಯಾರ್ಥಿಗಳು. ಇಲ್ಲಿ ಇರತಕ್ಕ ಕೆಲವು ಸದಸ್ಯರೂ ಆಗ ಸಹ ವಿದ್ಯಾರ್ಥಿಗಳಾಗಿದ್ದವರು. ಆ ನಂತರ ನಾವು ವಿಷಯವನ್ನು ತಿಳಿದುಕೊಂಡವರು. ಆಗ ಆಯ್ಕೆ ಆಗಿ ಹೋಗಬೇಕಾದರೆ ಡಬಲ್ ಮೆಂಬರ್ ಕಾನ್ಸ್‌ಟಿಟ್ಯೂಯೆನ್ಸಿ ಇದ್ದವು. ಒಂದು ಜನರಲ್ ಸೀಟ್ ಮತ್ತೊಂದು ಮೀಸಲಾತಿ ಸೀಟ್. ಇಬ್ಬರದ್ದೂ ಸೇರಿ ಒಂದು ಕ್ಷೇತ್ರ, ಜಾಯಿಂಟ್ ಆಗಿ ಇರತಕ್ಕ ಸಂದರ್ಭ ಇತ್ತು. ಆ ಪದ್ಧತಿ ೧೯೫೭ರಲ್ಲಿ ಇತ್ತು, ಬಹುಶಃ ೧೯೬೨ರಲ್ಲಿ ಸಹ ಈ ಪದ್ಧತಿ ಇತ್ತು ಎಂದು ಕಾಣಿಸುತ್ತದೆ. ಅಥವಾ ಇಡೀ ದೇಶದಲ್ಲಿ ಈ ರೀತಿ ಇತ್ತು ಎಂದು ಕಾಣುತ್ತದೆ. ಆ ಸಂದರ್ಭದಲ್ಲಿ ಜನರಲ್ ಸೀಟಿಗೆ ವಿದ್ಯೆ ಇರತಕ್ಕವರು, ಓದಿರತಕ್ಕವರು ಅಥವಾ ರಾಜಕೀಯ ಪ್ರಜ್ಞೆ ಇರತಕ್ಕವರು ಸ್ಪರ್ಧೆ ಮಾಡುವುದಕ್ಕೆ ಅಭ್ಯರ್ಥಿಗಳು ಇದ್ದರು. ಆದರೆ ಈ ಮೀಸಲಾತಿಯ ಒಂದು ಸ್ಥಾನ ಯಾವುದೇ ರಾಜಕೀಯ ಪಕ್ಷ ಇರಬಹುದು, ಆದರೆ ಮೀಸಲಾತಿಯ ಬಗ್ಗೆ ಅಭ್ಯರ್ಥಿಗಳು ಸಿಗುತ್ತಿರಲಿಲ್ಲ. ನಮ್ಮ ಕ್ಷೇತ್ರದಿಂದ ಆಯ್ಕೆ ಆಗಿ ಹೋದಾಗ ಅವರಿಗೆ ಓದು ಬರಹ ಬರುತ್ತಿರಲಿಲ್ಲ. ಹೆಬ್ಬೆಟ್ಟು ಒತ್ತುತ್ತಿದ್ದರು. ಅಥವಾ ಅವರು ರುಜು ಮಾಡುವುದನ್ನು ಕಲಿತಿದ್ದರೂ ಸಹ ಅಂದರೆ 'ಅ, ಆ, ಇ, ಈ' ಇತ್ಯಾದಿ ಅಕ್ಷರ ಜ್ಞಾನ ಅಲ್ಪಸ್ವಲ್ಪ ಇದ್ದರೂ ಕೂಡ ಪಾರ್ಲಿಮೆಂಟಿನಲ್ಲಿ ರಾಜ್ಯಾಂಗದ ಬಗ್ಗೆ ಯಾಗಲೀ ಅಥವಾ ರಾಜ್ಯದ, ರಾಷ್ಟ್ರದ ವಿದ್ಯಮಾನಗಳ ಬಗ್ಗೆ ಆಗಲೀ ವಿದೇಶಾಂಗ ನೀತಿ ಬಗ್ಗೆ ಆಗಲೀ ಅಥವಾ ಆಂತರಿಕ ನೀತಿ ಬಗ್ಗೆ ಆಗಲಿ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ ಅವರಿಗೆ ವಿಷಯ ತಿಳಿದುಕೊಳ್ಳುವುದಕ್ಕೆ ಸಾಧ್ಯ ಇರತಕ್ಕ ವಿದ್ಯೆ ಜ್ಞಾನ ಅಥವಾ ರಾಜಕೀಯ ಪ್ರಜ್ಞೆ ಇದ್ದರೂ ಕೂಡ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಸಹ ನಾವು ಅವರಿಗೆ ರಿಸರ್ವೇಷನ್ ಕೊಟ್ಟಿದ್ದೇವೆ. ಅಲ್ಲಿಂದ ಪ್ರಾರಂಭ ಆಯಿತು, ಹೆಬ್ಬೆಟ್ಟು ಒತ್ತತಕ್ಕ ವ್ಯಕ್ತಿ ಮಾನ್ಯ ಸದಸ್ಯರು ಆದ ಸಂದರ್ಭ. ಪಾರ್ಲಿಮೆಂಟಿನಲ್ಲಿಯೂ ರಿಸರ್ವೇಷನ್ ಕೊಟ್ಟಿರುವ ಸಂದರ್ಭ ಇದೆ. ನಮ್ಮ ಪ್ರಜಾಪ್ರಭುತ್ವ ಪದ್ಧತಿ ಪ್ರಾರಂಭ ಆಗಿದ್ದು ಸ್ವಾತಂತ್ರ್ಯ ನಂತರ. ನಾವು ರಾಜ್ಯಾಂಗ ಬದ್ಧವಾಗಿ ಪ್ರಾರಂಭ ಮಾಡಿದಾಗ ಅದು ಇನ್ನೂ ಶಿಶು ಆಗಿತ್ತು. ಅದು ಹಾಗೆ ಆಗಲೇ ಬೇಕಾದ ಅನಿವಾರ್ಯ ಸಂದರ್ಭ ಇತ್ತು. ಈ ಅಂಶವನ್ನು ನಾವು ಮರೆಯಬಾರದು. ಇಂತಹ ಸಂದರ್ಭ ಮುಂದೆ ಹೋಗುತ್ತಾ ಹೋಗುತ್ತಾ ಅಕ್ಷರ ಜ್ಞಾನ ಎಷ್ಟು ಜನಕ್ಕೆ ಇತ್ತು. ಯಾವ ವರ್ಗದಲ್ಲಿ ಇತ್ತು, ಯಾವ ಜಾತಿಯಲ್ಲಿ ಇತ್ತು ಎನ್ನುವ ವಿಚಾರದ ಕಡೆಗೆ ನಾವು ಹೋಗಬಾರದು. ಏಕೆಂದರೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಒಂದು ವಾದ ಆಗಬಹುದು. ಆಂಗ್ಲರು ನಮ್ಮ ದೇಶ ಬಿಟ್ಟು ಹೋದಾಗ ಶೇಕಡಾ ೧೮ರಷ್ಟು ಅಕ್ಷರ ಜ್ಞಾನ ನಮ್ಮ ಸಮಾಜದಲ್ಲಿತ್ತು. ಈಗ ಅದಕ್ಕೆ ಶೇಕಡಾ ೧೮ರಿಂದ ೧೯ರವರೆಗೆ ಸೇರಿಸಿದರೆ ಸುಮಾರು ಶೇಕಡಾ ೩೭ ೩೮ ಅಥವಾ ೩೯ರಷ್ಟು ಮಾತ್ರ ಅಕ್ಷರ ಜ್ಞಾನ ಇದೆ, ಅದು ವಿದ್ಯೆ ಅಲ್ಲ. ಇಡೀ ದೇಶದಲ್ಲಿ ಅಂದರೆ ಕರ್ನಾಟಕವೂ ಸೇರಿದಂತೆ ಇನ್ನೂ ಶೇಕಡ

೬೦ರಷ್ಟು ಜನರು ಹೆಚ್ಚೆಟ್ಟು ಒತ್ತತಕ್ಕ ನಿರಕ್ಷರ ಕುಕ್ಷಿಗಳು ಗ್ರಾಮೀಣ ಮಟ್ಟದಲ್ಲಿ ಇರತಕ್ಕ ಸಂದರ್ಭದಲ್ಲಿ ಯಾವ ವರ್ಗವನ್ನು ನಾವು ಮೇಲಕ್ಕೆ ಎತ್ತಲು ಗಮನ ಹರಿಸಿದ್ದೇವೆ. ಅಥವಾ ಯಾವ ನಿರ್ದಿಷ್ಟ ವರ್ಗದ ಕಡೆಗೆ ನಾವು ಗಮನ ಹರಿಸಿದ್ದೇವೆ ಎಂಬುದು ಮುಖ್ಯವಾದ ವಿಚಾರವಾಗಿದೆ. ನಾವು ಯಾವುದೇ ಒಂದು ಜಾತಿಯ ಬಗ್ಗೆ ಚಿಂತನೆ ಮಾಡದೆ ನೇರವಾಗಿ ಸಂವಿಧಾನದ ೬೨ನೇ ಅಮೆಂಡ್‌ಮೆಂಟ್ ಬಗ್ಗೆ ಮಾತನಾಡಬೇಕಾಗಿದೆ. ಇದರ ಬಗ್ಗೆ ನಾವು ಹೇಳುವುದಾದರೆ ಇದು ಕೇವಲ ಸ್ಥಾನಗಳ ಮೀಸಲಾತಿ ಇರುವುದು ಲೆಜಿಸ್ಲೇಚರ್‌ನಲ್ಲಿ ಮಾತ್ರ. ನಾವು ಇನ್ನೂ ಮುಂದೆ ಹೋಗಿ ಹೇಳುವುದಾದರೆ ಜುಡಿಷಿಯಲ್ ಅಂದರೆ ನ್ಯಾಯಾಂಗ ಇಲಾಖೆಯಲ್ಲಿ ಈ ಮೀಸಲಾತಿ ಪದ್ಧತಿ ಇಲ್ಲ. ನಾವು ೬೨ನೇ ತಿದ್ದುಪಡಿಯನ್ನು ಈಗ ಒಪ್ಪಿಕೊಂಡರೂ ಕೂಡ ಅದು ಜುಡಿಷಿಯಲ್‌ನಲ್ಲಿ ಒಪ್ಪಿಕೊಂಡ ಹಾಗೆ ಇಲ್ಲ. ಸುಪ್ರೀಂ ಕೋರ್ಟಿನ ಜಡ್ಜ್‌ಗಳಲ್ಲಿ ಆಗಲಿ ಅಥವಾ ಸುಪ್ರೀಂ ಕೋರ್ಟಿನಿಂದ ಹಿಡಿದು ವಿವಿಧ ಹೈ ಕೋರ್ಟ್‌ಗಳು ಇರಬಹುದು, ಮ್ಯಾಜಿಸ್ಟ್ರೇಟ್ ಕೋರ್ಟ್ ಇರಬಹುದು, ಅಥವಾ ಬೇರೆ ಯಾವುದೇ ಇರಬಹುದು, ಹೀಗೆ ಸಣ್ಣ ಸಣ್ಣ ನ್ಯಾಯಾಲಯದಿಂದ ಹಿಡಿದು ಉಚ್ಚ ನ್ಯಾಯಾಲಯದ ವರೆಗೆ ನಾವು ಸ್ಥಾನಗಳನ್ನು ಮೀಸಲಾತಿ ಇಡಬೇಕು. ಇಡದಿದ್ದರೆ ಪೂರ್ಣವಾಗಿ ಈ ಮೀಸಲಾತಿ ನಿಯಮವನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲವೆಂದು ನನ್ನ ಭಾವನೆ.

ಎಲ್ಲೋ ಒಬ್ಬರು ಹರಿಜನರು ಹೈಕೋರ್ಟ್ ನ್ಯಾಯಾಧೀಶರಾಗಿರಬಹುದು, ಹರಿಜನರು ನ್ಯಾಯಾಧೀಶರಾದರು ಎಂದು ಪತ್ರಿಕೆಯಲ್ಲಿ ಫೋಟೋ ಬಂದ ತಕ್ಷಣ ಅವನ್ನು ನೋಡಿ ಸಂತೋಷ ಪಟ್ಟು ಅದನ್ನು ತಲೆ ದಿಂಬು ಮಾಡಿ ಮಲಗಿಕೊಳ್ಳತಕ್ಕಂಥ ವರ್ಗ ಇನ್ನೂ ಕೂಡ ಜೀವಂತವಾಗಿದೆ. ಇನ್ನೂ ಕೂಡ ಹಾಗೆಯೇ ನಿಂತಿದೆ. ಏಕೆಂದರೆ ಇಂತಹ ವರ್ಗಗಳು ಹೆಚ್ಚಾಗಿ ಜುಡಿಶಿಯರಿಗೆ ಹೋಗಬಾರದೇ? ಆದುದರಿಂದ ನನ್ನ ಪ್ರಕಾರ ಜುಡಿಶಿಯರಿಯಲ್ಲೂ ಕೂಡ ಸ್ಥಾನಗಳನ್ನು ಮೀಸಲಿಡಬೇಕು. ಕೆಳಗಿನ ನ್ಯಾಯಾಲಯದಿಂದ ಹಿಡಿದು ಮೇಲಿನ [illegible] ಸ್ಥಾನಗಳನ್ನು ಮೀಸಲು ಇಡಬೇಕು. ನೀವು ಯಾರನ್ನು ಮಾಡುತ್ತೀರೋ ಅದನ್ನು ನೀವು ವಿಚಾರ ಮಾಡಿ. ಯಾವುದೇ ಪಕ್ಷದ ಸರ್ಕಾರ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇರಬಹುದು, ಅದು ನನಗೆ ಬೇಕಾಗಿಲ್ಲ, ಅವರು ಇದನ್ನು ವಿಚಾರ ಮಾಡಲಿ. ಜುಡಿಶಿಯರಿಯಲ್ಲೂ ಕೂಡ ಮೀಸಲಾತಿ ಇಡಬೇಕು ಎನ್ನತಕ್ಕಂಥ ವಿಚಾರವನ್ನು ಮಾತ್ರ ಮರೆಯಬೇಡಿ. ಎಲ್ಲಿಯವರೆಗೆ ಸಮಾಜದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅಸಮಾನತೆ ಇರುತ್ತದೋ ಅಲ್ಲಿಯವರೆಗೂ ಈ ಮೀಸಲಾತಿ ಪದ್ಧತಿಯನ್ನು ನೀವು ಬರೀ ಶಾಸಕಾಂಗಕ್ಕೆ ಮಾತ್ರ ಏನು ಮಿತಿ ಇಡುತ್ತಾ ಇದ್ದೀರಿ ಇದು ಸರಿಯಲ್ಲ. ನನ್ನ ಪ್ರಕಾರ ಕಾನ್‌ಸ್ಟಿಟ್ಯೂಷನ್ ಬಿಲ್‌ನಲ್ಲಿ ನಾನು ಹೇಳಿರತಕ್ಕಂಥ ಎಲ್ಲಾ ವಿಷಯಗಳನ್ನೂ ತರಬೇಕು. ಈಗ ತಿದ್ದುಪಡಿ ತಂದಿರತಕ್ಕಂಥದ್ದು ಒಳ್ಳೆಯದು. ಆದರೆ ಜುಡಿಶಿಯರಿಯಲ್ಲೂ ಕೂಡ ಮೀಸಲಾತಿಯನ್ನು ತರಬೇಕು ಎನ್ನತಕ್ಕಂಥ ವಿಚಾರವನ್ನೂ ಕೂಡ ಅದರಲ್ಲಿ ಹಾಕಬೇಕು. ಉದಾಹರಣೆಗೆ ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ, ಅಥವಾ ರಾಷ್ಟ್ರ ಮಟ್ಟದಲ್ಲಿ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ. ಈ ರಿಸರ್ವೇಷನ್ ಪಾಲಿಸಿ ಅದಕ್ಕೆ ಅಪ್ಲಿಕಬಲ್ ಆಗುತ್ತದೆಯೇ? ಅವಕ್ಕೆ ಮೀಸಲಾತಿ ಎಲ್ಲಿದೆ ಎಲ್ಲೂ ಇಲ್ಲ ಮನಸ್ಸಿಗೆ ಬಂದ ಹಾಗೆ ಅಪಾಯಿಂಟ್‌ಮೆಂಟ್ ಮಾಡತಕ್ಕ ಪದ್ಧತಿ ಇಟ್ಟುಕೊಂಡಿದ್ದಾರೆ. ಕಂಡ ಕಂಡವರನ್ನು ಅಪಾಯಿಂಟ್ ಮಾಡಿಕೊಳ್ಳತಕ್ಕಂಥ ಪದ್ಧತಿ ಇಟ್ಟುಕೊಂಡಿದ್ದಾರೆ, ಮಾಡಿಕೊಳ್ಳಲಿ ಇದು ಸೂಕ್ಷ್ಮವಾದ ವಿಚಾರ. ನೌಕರಿ ಕೊಡತಕ್ಕ ವಿಚಾರದಲ್ಲಿ ಮತ್ತೊಬ್ಬರು ಅಲ್ಲಿ ಅವರು ಮಾಡಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದುದರಿಂದ ಈ ವರ್ಗಗಳಿಗೂ ಕೂಡ ಅಲ್ಲಿ ಮೀಸಲಾತಿ ಇಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈಗ ಲೋಕಸಭೆ ಇದೆ, ರಾಜ್ಯ ಸಭೆ ಇದೆ. ಲೋಕ ಸಭೆಯಲ್ಲಿ ಇಷ್ಟು ರಿಸರ್ವೇಷನ್ ಸೀಟ್ಸ್ ಎಂದು ಇದೆ, ಅದೇ ರೀತಿ ರಾಜ್ಯ ಸಭೆಯಲ್ಲಿ ಎಲ್ಲಿದೆ? ಮೂರನೇ ಒಂದು ಭಾಗ ಸದಸ್ಯರು ಪ್ರತಿ ಎರಡು ವರ್ಷಕ್ಕೊಮ್ಮೆ ರಿಟೈರ್ ಆಗುತ್ತಾರೆ, ಆಗ ಇವರಿಗೂ ಮೀಸಲಾತಿ ಹೇಗೆ ಮಾಡಬೇಕು ಎಂದು ಯೋಚನೆ ಮಾಡಬೇಕು. ಇವತ್ತು ಈ ರಾಜ್ಯದಿಂದ ಎರಡು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ರಾಜ್ಯ ಸಭೆಗೆ ಕಳಿಸಿದರೆ ಮುಂದಿನ ಸಾರಿ ಬೇರೆ ರಾಜ್ಯದಿಂದ ಷೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ಕಳಿಸುವಂತೆ ಮಾಡಬೇಕು ಅದೂ ಕೂಡ ರೊಟೇಟ್ ಆಗುತ್ತಾ ಹೋಗಬೇಕು. ಮೀಸಲಾತಿಯಲ್ಲಿ ಇಷ್ಟು ಸ್ಥಾನಗಳನ್ನು ಕೊಟ್ಟಿದ್ದೇವೆ ಎಂದು ಭಾಷಣ ಮಾಡುತ್ತೇವೆ ರಾಜ್ಯ ಸಭೆ ಕೂಡ ಪಾರ್ಲಿಮೆಂಟ್ ಅಲ್ಲವೇ? ಅಲ್ಲಿ ಮೀಸಲು ಸ್ಥಾನವನ್ನು ಏಕೆ ಇಡುವುದಿಲ್ಲ? ಆದ್ದರಿಂದ ಅಲ್ಲೂ ಕೂಡ ಮೀಸಲಾತಿ ಸ್ಥಾನಗಳನ್ನು ಇಡಬೇಕು ಎನ್ನುವುದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಇವತ್ತು ನಾವು ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಮಾತನಾಡುತ್ತೇವೆ. ಸ್ಟೇಟ್ ಗವರ್ನಮೆಂಟ್ ಸರ್ವೀಸ್,

ಮತ್ತು ಸೆಂಟ್ರಲ್ ಗವರ್ನಮೆಂಟ್ ಸರ್ವೀಸ್ ಬಗ್ಗೆ ನಾವು ಮಾತನಾಡುತ್ತೇವೆ. ನಿಜ ಹೇಳಬೇಕಾದರೆ, ಕಂಪಲ್ಸರಿಯಾಗಿ ಯಾವು ಯಾವುದರಲ್ಲಿ ಎಷ್ಟೆಷ್ಟು ಎಂದು ಇವನ್ನೆಲ್ಲಾ ಸ್ಪೆಸಿಫೈ ಮಾಡಬೇಕು, ನೀವು ಇದನ್ನು ಮಾಡದೇ ಇದ್ದರೆ ಕೊನೇ ಪಕ್ಷ ಈ ಒಂದು ತಿದ್ದುಪಡಿಯಲ್ಲಿ ಆಯಾ ರಾಜ್ಯ ಸರ್ಕಾರದವರು ಇಂತಿಂಥ ವಿಚಾರದ ಬಗ್ಗೆ ಹೀಗೇ ಮಾಡಬೇಕು ಎಂದು ಕೇಂದ್ರ ಸರ್ಕಾರದವರು ರಾಜ್ಯಾಂಗ ಪ್ರಕಾರ ಹೇಳಬೇಕು. ಏಕೆಂದರೆ, ರಾಜ್ಯಾಂಗ ಎನ್ನತಕ್ಕಂಥಾದ್ದು ತಾಯಿ ಇದ್ದ ಹಾಗೆ. ಇದರಿಂದ ಅನೇಕ ಮಕ್ಕಳುಂಗಳು ಹುಟ್ಟಿ ಬರುತ್ತವೆ. ಅನೇಕ ಶಾಖೆಗಳು, ಕೊಂಬೆಗಳು ಹುಟ್ಟಿ ಬರುತ್ತವೆ. ಆದ್ದರಿಂದ ಮೂಲ ಇರತಕ್ಕಂಥಾದ್ದು ರಾಜ್ಯಾಂಗ, ರಾಜ್ಯಾಂಗದಲ್ಲಿ ಇದನ್ನು ಸೇರಿಸಬೇಕು. ಇವತ್ತು ತಿದ್ದುಪಡಿ ತಂದಿರ ತಕ್ಕಂಥಾದ್ದು ಬಹಳ ಒಳ್ಳೆಯದು. ಇದನ್ನು ನಾವು ವಿರೋಧ ಮಾಡುತ್ತಾ ಇಲ್ಲ, ವಿರೋಧ ಮಾಡಿದರೆ ಲೆಜಿಸ್ಲೇಚರ್‌ಗೆ ಮತ್ತು ಪಾರ್ಲಿಮೆಂಟಿಗೆ ಸಿಗತಕ್ಕ ಮೀಸಲಾತಿ ಸೌಲಭ್ಯವನ್ನು ಕಳೆದು ಕೊಳ್ಳಬೇಕಾಗುತ್ತದೆ. ಯಾವ ವರ್ಗಗಳು ಸೌಲಭ್ಯಗಳಿಂದ ಶತ ಶತಮಾನಗಳಿಂದ ವಂಚನೆಗೆ ಒಳ ಗಾಗಿದ್ದಾವೋ ಆ ವರ್ಗಗಳನ್ನು ಮೇಲಕ್ಕೆ ಎತ್ತತಕ್ಕಂಥ ಈ ಒಂದು ಚಿಂತನೆಯನ್ನು ನಾವು ಮಾಡಲೇ ಬೇಕಾಗಿತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆ ಬರುತ್ತದೆ. ಹಾಗಾದರೆ ಎಲ್ಲಿಯವರೆಗೆ ಈ ಮೀಸಲಾತಿ ಸೌಲಭ್ಯವನ್ನು ವಿಸ್ತರಿಸಬೇಕು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಕಾಲಮಿತಿಯುಳ್ಳಂಥ ವಿಸ್ತರಣೆ ಒಳ್ಳೆಯದಲ್ಲವೇ, ಎಲ್ಲಿಯವರೆಗೆ ಹೀಗೆ ವಿಸ್ತರಣೆ ಮಾಡುತ್ತಾ ಹೋಗುತ್ತೀರಿ ಎನ್ನತಕ್ಕ ಪ್ರಶ್ನೆ ಇದೆ. ನಿಜ ಹೇಳಬೇಕಾದರೆ, ಈಗ ರಾಜ್ಯಾಂಗಕ್ಕೆ ಯಾವು ಯಾವುದೋ ತಿದ್ದುಪಡಿ ಸೇರಿ, ಈಗ ೬೨ನೇ ತಿದ್ದುಪಡಿ ಮಾಡಿದ್ದೇವೆ. ಅನ್‌ರಿಟನ್ ಕಾನ್‌ಸ್ಟಿಟ್ಯೂಷನ್ ಇರುವ ಇಂಗ್ಲೆಂಡಿನಲ್ಲಿ ಎಷ್ಟು ಸಲ ತಿದ್ದುಪಡಿ ಮಾಡಿದ್ದಾರೆ. ಅಮೇರಿಕದಲ್ಲಿ ಕಾನ್‌ಸ್ಟಿಟ್ಯೂಷನ್ ಇದೆ. ಮದರ್ ಆಫ್ ಪಾರ್ಲಿಮೆಂಟ್ ಇಂಗ್ಲೆಂಡಿನಲ್ಲಿ ಪ್ರಾರಂಭವಾದಾಗ ಅಮೆರಿಕನ್ ಕಾನ್‌ಸ್ಟಿಟ್ಯೂಷನ್ ಹೆಚ್ಚೂ ಕಡಿಮೆ ಪ್ರಾರಂಭವಾಗಿದೆ. ನನಗೆ ಗೊತ್ತಿರುವ ಹಾಗೆ ಮೋರ್‌ದ್ಯಾನ್ ೧೦ ಅಮೆಂಡ್‌ಮೆಂಟ್ಸ್ ಟು ಅಮೆರಿಕನ್ ಕಾನ್‌ಸ್ಟಿಟ್ಯೂಷನ್ ಬಂದಿಲ್ಲ ಎನ್ನತಕ್ಕಂಥ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ ಅಲ್ಲಿ ಅಮೆಂಡ್‌ಮೆಂಟ್ಸ್ ಹತ್ತರ ಮೇಲೆ ಹೋಗಿಲ್ಲ. ಆದರೆ ನಮ್ಮಂಥ ಬೆಳೆಯತಕ್ಕಂಥ ರಾಷ್ಟ್ರದಲ್ಲಿ, ಸಮಾಜದಲ್ಲಿ ಇವತ್ತು ಮಾಡಿರ ತಕ್ಕಂಥಾದ್ದು ೬೨ನೇ ತಿದ್ದುಪಡಿ ಇರಬಹುದು. ಆದರೆ ಎಲ್ಲಿಯವರೆಗೆ ಸಮಾಜದಲ್ಲಿ ಇಂತಹ ಅಸಮಾನತೆ ಇರುತ್ತದೋ ಅಲ್ಲಿಯವರೆಗೆ ಇನ್ನು ೧೦೦ ತಿದ್ದುಪಡಿಗಳಾದರೂ ಚಿಂತೆಯಿಲ್ಲ, ತಿದ್ದುಪಡಿ ಗಳನ್ನು ತರಬೇಕು, ಎಲ್ಲ ಸೌಲಭ್ಯಗಳನ್ನು ಕೊಡಬೇಕು, ನಾವು ಈ ವರ್ಗಗಳನ್ನು ಮೇಲೆ ಎತ್ತುತ್ತಾ ಹೋಗಬೇಕು. ಇನ್ನೊಂದು ಮಾತನ್ನು ನನ್ನ ಮಾನ್ಯ ಮಿತ್ರರು ಹೇಳಿದರು. ಏನೆಂದರೆ ಎಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆ, ಅಸಮಾನತೆ ಇರುತ್ತದೆ ಅಲ್ಲಿಯವರೆಗೆ ಇದನ್ನು ವಿಸ್ತರಿಸಬೇಕು ಎಂದು ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ, ಹೀಗೆ ಹಲವಾರು ವಿಚಾರಗಳನ್ನು ಒಳ ಗೊಂಡಂಥ ವಿಚಾರಗಳಲ್ಲಿ ಅಸ್ಪೃಶ್ಯತೆ ಏನಿದೆ ಈ ಅಸ್ಪೃಶ್ಯತೆ ಬಹಳ ಪ್ರಾಮುಖ್ಯವಾದಂಥ ವಿಚಾರ, ಇದನ್ನು ನಾವು ತೊಡೆದು ಹಾಕಲೇಬೇಕು, ಒಂದು ವಿಷಯ ತಮ್ಮಗಳ ಗಮನದಲ್ಲಿ ಕೂಡ ಇದೆಯೆಂದು ನಾನು ಭಾವಿಸಿದ್ದೇನೆ. ಹಿಂದೆ ನಾವೆಲ್ಲಾ ಹುಡುಗರಾಗಿದ್ದಾಗ ಹೋಟೆಲುಗಳಲ್ಲಿ ಅವರಿಗೆ ತೆಂಗಿನ ಚಿಪ್ಪಿನಲ್ಲಿ ಟೀ ಕೊಡುತ್ತಾ ಇದ್ದರು. ಇದನ್ನು ನಾವು ಕಣ್ಣಾರೆ ನೋಡಿದ್ದೇವೆ. ಹರಿಜನರು ಅಸ್ಪೃಶ್ಯರು ಎನ್ನುವ ಒಂದೇ ಕಾರಣದಿಂದ ಈ ರೀತಿ ಮಾಡುತ್ತಿದ್ದರು. ಇವತ್ತು ಏನಾಗಿದೆ. ಅಲ್ಯೂಮಿನಿಯಂ ಕಪ್‌ನಲ್ಲಿ ಟೀ ಕೊಡುತ್ತಿದ್ದಾರೆ. ಅದನ್ನು ಅವನೇ ತೊಳೆದು, ತಡಿಕೆಗೆ ಸಿಗಿಸಿ ಹೋಗಬೇಕು. ಪುಕ್ಕಟೆ ಕಾಫಿ ಟೀ ಯಾರು ಕೊಡುವುದಿಲ್ಲ, ದುಡ್ಡು ಕೊಟ್ಟೇ ಕುಡಿಯಬೇಕು.

(ಶ್ರೀ ಎಚ್. ಏಕಾಂತಯ್ಯ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವತ್ತು ನಾವು ಮುಂದುವರಿದ ಜನಾಂಗದವರನ್ನು ಅಭಿನಂದನೆ ಮಾಡಬೇಕಾಗಿದೆ. ಏಕೆಂದರೆ ಶೇಕಡವಾರು ಪ್ರಮಾಣ ಈ ಬಗ್ಗೆ ಕಡಿಮೆಯಾದರೂ ಈ ಒಂದು ಅನಿಷ್ಟ ಪದ್ಧತಿ ಇನ್ನೂ ಇದೆ. ಇದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದವರು ಎರಾಡಿಕೇಷನ್ ಆಫ್ ದಿ ಅನ್‌ಟಚಬಲಿಟಿ ಬಗ್ಗೆ ದೊಡ್ಡ ಕಾರ್ಯಕ್ರಮ ಹಾಕಿಕೊಳ್ಳಬೇಕು. ಬರೀ ಕಾನೂನು ಮಾಡಿದರೆ ಅದು ಪುಸ್ತಕದ ಬದನೆಕಾಯಿ ಆಗುತ್ತದೆ. ಅಸ್ಪೃಶ್ಯತೆ ನಿವಾರಣೆ ಮಾಡುತ್ತೇವೆಂದು ಬರೀ ಕಾನೂನು ಮಾಡಿದರೆ ಸಾಲದು. ಕಾನೂನು ಪ್ರಕಾರ ಕೇಸುಗಳನ್ನು ಹಾಕಿದ್ದೇವೆಂದು ಬರೀ ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಸಾಲದು. ಇದರ ಬಗ್ಗೆ ನಮ್ಮ ಸಮಾಜಕ್ಕೆ ತಿಳುವಳಿಕೆ ಮತ್ತು ಜ್ಞಾನವನ್ನು ಕೊಡಬೇಕಾಗುತ್ತದೆ. ಸಾಮಾಜಿಕ ಳುವಳಿಕೆಯ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಮಾತ್ರ ಸಾಕಷ್ಟು ಪ್ರಮಾಣದಲ್ಲಿ ಇದನ್ನು ಪ ಮಾಡುವುದಕ್ಕೆ ಸಾಧ್ಯ ಎನ್ನುವುದು ನನ್ನ ನಂಬಿಕೆ. ಇದನ್ನು ಮಾಡದಿರುವುದರಿಂದ ಕಾಲಮಿತಿ ತಿಸುವುದಕ್ಕೆ ಆಗುತ್ತಿಲ್ಲ. ಇವತ್ತು ರಾಜ್ಯಾಂಗದಲ್ಲಿ ೧೦ ವರ್ಷ ಇರುವುದನ್ನು ಮುಂದುವರಿಸಿ

ಕೊಂಡು ಹೋಗುತ್ತಿದ್ದೇವೆ. The framers of the Constitution, if they had thought of giving 20 years instead of ten years, ೨೦ ವರ್ಷ ಎಂದು ಇದ್ದರೆ ೨೦ ವರ್ಷ ಮಾಡಿ ಎಂದು ಭಾಷಣ ಮಾಡುತ್ತಿದ್ದೆವು. ರಾಜ್ಯಾಂಗ ರಚನಾಕಾರರಿಗೆ ೧೦ ವರ್ಷಗಳಲ್ಲಿ ಅಸಮಾನತೆಯನ್ನು ತೊಡೆದು ಹಾಕಿ, ಸಮಾನತೆಯನ್ನು ತರಬಹುದೆನ್ನುವ ವಿಶ್ವಾಸದಿಂದ ೧೦ ವರ್ಷ ಮಾಡಿದರು. ಅವೊತ್ತು ಈ ವಿಷಯ ಅವರ ಗಮನಕ್ಕೆ ಬಂದಿದ್ದರೆ ತಾವು ಮಾಡಿದ್ದು ಮಹಾಪರಾಧ ಎಂದು ತಿಳಿದುಕೊಳ್ಳುತ್ತಿದ್ದರು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಆರ್ಟಿಕಲ್ ೩೩೪ರ ಪ್ರಕಾರ ೪೦ ಇದ್ದುದ್ದನ್ನು ೫೦ ಎಂದು ಮಾಡುತ್ತಿದ್ದಾರೆ. ಬರೀ ವರ್ಷ ಬದಲಾವಣೆ ಮಾಡುತ್ತಿದ್ದಾರೆ. ಅದನ್ನು ೬೦ ಎಂದು ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ನಾನು ಆ ವಿಚಾರ ಹೇಳಲಿಲ್ಲ. ೧೦ ವರ್ಷಕ್ಕೆ ಬದಲಾಗಿ ೨೦ ವರ್ಷ ಎಂದು ಇದ್ದರೆ ೨೦ ವರ್ಷ ಎಂದು ಭಾಷಣ ಮಾಡುತ್ತಿದ್ದೆವು ಎಂದು ಹೇಳುತ್ತಿದ್ದೇನೆ. ಮೀಸಲಾತಿಯ ಬಗ್ಗೆ ಮಾತನಾಡುವಾಗ ಅಸ್ಪೃಶ್ಯತೆಗೆ ಸೀಮಿತಗೊಳಿಸಿ ಮಾತನಾಡಬಾರದು. ಇವೊತ್ತು ಮೀಸಲಾತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಲಂಬಾಣಿ ಕೋಮಿನವರು, ವಡ್ಡರು, ಬೋವಿ ಕೋಮಿನವರು ಇದ್ದಾರೆ.

೧-೩೦ ಪಿ.ಎಂ.

ಈಗ ಸಿನಾನಿಮ್ಸ್‌ನ್ನು ಸೇರಿಸಬೇಕೆಂದು ಕೆಲವರಿಂದ ಒತ್ತಾಡ ಬರುತ್ತದೆ. ಅತೀ ಮೈನ್ಯೂಟ್ ಕಮ್ಯೂನಿಟಿ ಅವರು ಎತಕ್ಕೂ ಬರುವುದಿಲ್ಲ. ಸ್ವಾಮಿ ನಮ್ಮನ್ನು ಸೇರಿಸಿ ನಾವು ಅಪ್ಪಿತಪ್ಪಿ ಸೌಲಭ್ಯ ಪಡೆಯುತ್ತೇವೆ ಎಂದು ಹೇಳುವಂಥಾದ್ದನ್ನು ನಾವು ತಿಳಿದುಕೊಂಡಿದ್ದೇವೆ. ಇಲ್ಲಿ ನಾವು ಅಸ್ಪೃಶ್ಯತೆಯ ಬಗ್ಗೆ ಹೆಚ್ಚಿಗೆ ಮಾತನಾಡುತ್ತೇವೆ. ಅಂದರೆ ಪ್ರಪಂಚದ ಯಾವುದೇ ರಾಷ್ಟ್ರದಲ್ಲೂ ಕೊಡ ಇಂತಹ ಪದ್ಧತಿ ಇರಲಿಕ್ಕೆ ಸಾಧ್ಯವಿಲ್ಲ ಎನ್ನುವ ಭಾವನೆ ನಮಗೆಲ್ಲಾ ಇರುವುದರಿಂದ ಈ ರೌಂಡ್ ಟೇಬಲ್ ಕಾನ್‌ಫರೆನ್ಸ್ ಬಗ್ಗೆ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ವಿಚಾರದಲ್ಲಿ ಮಾತನಾಡುತ್ತಿದ್ದೆವು. ನಾನು ಕೂಡ ಅವರ ಪುಸ್ತಗಳನ್ನು ಓದಿದ ಹಾಗೆ ನನಗೆ ಗೊತ್ತಿರುವ ಹಾಗೆ ಅವರು ಒಂದು ದುಂಡು ಮೇಜಿನ ಪರಿಷತ್ತಿಗೆ ಪರರಾಷ್ಟ್ರಕ್ಕೆ ಹೋದಾಗ ಅಲ್ಲಿ ಒಂದು ವಿಚಾರ ಬಂತು. ಅಮೇರಿಕಾ ದೇಶಗಳಲ್ಲಿ ರತಕ್ಕ ಕಪ್ಪುಬಣ್ಣದ ಚರ್ಮ ಇರತಕ್ಕಂತ ನೀಗ್ರೋಸ್ ಎಂದು ನಾವು ಏನು ಕರೆಯುತ್ತೇವೆ, ಆ ಬಣ್ಣದ ಜನರ ವಿಚಾರ ಮತ್ತು ಕೆಂಪು ಬಣ್ಣದ ಚರ್ಮ ಇಟ್ಟುಕೊಂಡಿರತಕ್ಕವರು, ಸುಮಾರಾಗಿ ನಮ್ಮ ದೇಶದಲ್ಲಿ ಕೆಂಪು ಬಣ್ಣದವರು ಕಡಿಮೆ ಇದ್ದಾರೆ. ಇದ್ದರೂ ಸಹ ಆ ಒಂದು ಕೆಂಪು ಬಣ್ಣದವರು ಅಲ್ಲ. ಅಲ್ಲಿಗೆ ಇವರು ಏನಾದರೂ ಹೋಗಿ ಬಿಟ್ಟರೆ ಇವರು ಅಲ್ಲಿ ಕಪ್ಪು ಬಣ್ಣದವರು ಆಗಿಬಿಡುತ್ತಾರೆ. ಆ ವಿಚಾರ ಅಲ್ಲ. ನಾನು ಹೇಳುವುದು ಅಲ್ಲಿರತಕ್ಕ ಕಪ್ಪು ಮತ್ತು ಕೆಂಪು ಬಣ್ಣದ ಜನರ ಬಗ್ಗೆ ಆ ವಿಚಾರದಲ್ಲಿ ವ್ಯತ್ಯಾಸ ಬಂದು ಒಂದು ದೊಡ್ಡ ವಾದವನ್ನು ದುಂಡು ಮೇಜಿನ ಪರಿಷತ್ತಿನಲ್ಲಿ ಅವರು ಇಟ್ಟರಂತೆ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೇಳುತ್ತಲೇ ಕುಳಿತ್ತಿದ್ದರು. ಅದು ಆದಮೇಲೆ ಇವರು ನಮ್ಮ ದೇಶದಲ್ಲಿರತಕ್ಕ ಒಂದು ವಿಚಾರವನ್ನು ಹೊಸದಾಗಿ ಅಸ್ಪೃಶ್ಯತೆಯ ಬಗ್ಗೆ ಇಟ್ಟರು. ಕೆಂಪು ಬಣ್ಣದ ಚರ್ಮ ಇರತಕ್ಕಂಥ ಒಬ್ಬ ಹರಿಜನನನ್ನು ಕಪ್ಪುಬಣ್ಣದ ಚರ್ಮ ಇರತಕ್ಕಂಥ ಮುಂದುವರಿದ ಕೋಮಿನವನನ್ನು, ನನಗೆ ಆ ಜಾತಿ, ಈ ಜಾತಿ ಪ್ರಶ್ನೆ ಅಲ್ಲ, ಅವರು, ಹೇಳಿರುವ ಮಾತು, ಪುಸ್ತಕದಲ್ಲಿ ಬರತಕ್ಕ ಮಾತು. ಕಪ್ಪುಬಣ್ಣದ ಚರ್ಮ ಇರತಕ್ಕ, ಮುಂದುವರಿದ ಕೋಮಿನವರು ಬಂದು ಈ ಹರಿಜನ ಜಾತಿ ಇರತಕ್ಕ ಕೆಂಪು ಬಣ್ಣದವನಿಗ ಮುಟ್ಟಿದರೂ ಕೂಡ ಮನೆಗೆ ಹೋಗಿ ಸ್ನಾನ ಮಾಡುತ್ತಾರೆ. ಅಯ್ಯಯ್ಯೋ ಮುಟ್ಟಿಬಿಟ್ಟೆವೇ ಎಂತಹ ದೊಡ್ಡ ಅಪರಾಧ ಆಯಿತು ಎನ್ನುವ ಭಾವನೆ ಇದೆ ಇದು ಅಮೇರಿಕಾ ದೇಶದಲ್ಲಿ ಬಣ್ಣದ ವಿಚಾರದಲ್ಲಿ ಇಷ್ಟೊಂದು ವಿಚಾರ ಮಾಡಿದರೆ ನಾವು ಚರ್ಮದ ಬಣ್ಣವನ್ನು ಮೀರಿ ಮುಂದಕ್ಕೆ ಹೋಗುತ್ತೇವೆ ಎನ್ನುವ ವಾದವನ್ನು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಇಟ್ಟಾಗ ಅಲ್ಲಿರತಕ್ಕ ಜನರೆಲ್ಲರೂ ಕೂಡ ದಿಗ್ಭ್ರಾಂತರಾದರು ಎನ್ನತಕ್ಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಚರ್ಮದ ಬಣ್ಣಬಣ್ಣದ ವ್ಯತ್ಯಾಸಕ್ಕಿಂತಲೂ ಕೂಡ ಬಹಳ ಘೋರವಾಗಿರತಕ್ಕಂಥ ವಿಚಾರ ಆ ಪುಸ್ತಕದಲ್ಲಿ ಬರುತ್ತದೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಇದನ್ನು ತೊಡೆದು ಹಾಕದೇ ಇದ್ದರೆ ನಮ್ಮ ಸಮಾಜದ ಗೌರವ ಉಳಿಯಲಿಕ್ಕೆ ಸಾಧ್ಯವಿಲ್ಲ. ನಿಜವಾಗಿ ಹೇಳಬೇಕೆಂದರೆ, ಇದು ಸಮಾಜದಲ್ಲಿ ಎಲ್ಲರೂ ಕೂಡ ತಲೆ ತಗ್ಗಿಸತಕ್ಕ ವಿಚಾರ. ಅದಕ್ಕಾಗಿ ಆ ವರ್ಗಗಳನ್ನು ಮೇಲಕ್ಕೆ ಎತ್ತಬೇಕು ಎನ್ನತಕ್ಕ ಪುಷ್ಟಿ ಮಾತನ್ನು ಪದೇ ಪದೇ ಆಡತಕ್ಕ ಪ್ರಜ್ಞೆಗೆ ನಾವೆಲ್ಲರೂ ಗಂಟುಬಿದ್ದಿದ್ದೇವೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರ ಚಿಂತನೆ

ಯನ್ನು ಇಟ್ಟು ಈ ದೇಶದಲ್ಲಿ suppressed and oppresssd classes, who are in millions, ಏನಿವೆ, ಈ ವರ್ಗಗಳನ್ನು ಮೇಲಕ್ಕೆ ಎತ್ತತಕ್ಕ ವಿಚಾರದಲ್ಲಿ ದೊಡ್ಡ ಹೋರಾಟ ಮಾಡಿ ಹೋಗಿರತಕ್ಕ ನಮ್ಮಂತಹ ಸಮಾಜದಲ್ಲಿ ಇವೊತ್ತು ಅವರಿಗೆ ಗೌರವವನ್ನು ಸಂಪೂರ್ಣವಾಗಿ ಸಮರ್ಪಣೆ ಮಾಡಬೇಕು. ಆ ಚಿಂತನೆ ಇರತಕ್ಕಂಥ ಜನರಿಗ ಗೌರವ ತರಬೇಕೆಂದರೆ, ಬಹಳ ವೇಗವಾಗಿ ಈ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇಡೀ ಸಮಾಜದ ಸಹಕಾರ ತೆಗೆದುಕೊಂಡು ಮಾಡಬೇಕಾಗುತ್ತದೆ, ಬರೀ ಸರ್ಕಾರವೇ ಮಾಡಲಿಕ್ಕೆ ಆಗುವುದಿಲ್ಲ. ಸಮಾಜದ ಸಹಕಾರ ಆಗತ್ಯವೆಂದು ಪದೇ ಪದೇ ನೆನಪು ಮಾಡತಕ್ಕಂಥ ಅಗತ್ಯವಿಲ್ಲ ಎಂದು ನಾನು ಭಾವಿಸಿದ್ದೇನೆ. ಎಲ್ಲರ ಸಹಕಾರ ಪಡೆದು ಈ ಒಂದು ಸಾಧನೆಯನ್ನು ಮಾಡಬೇಕು ಅನಂತರ ಈಗ ನಾವು ಹೆಚ್ಚಿನ ಬೆಂಬಲ ಕೂಡ ಅನೇಕ ವಿಚಾರಗಳ ಬಗ್ಗೆ ಕೊಡಬೇಕಾಗುತ್ತದೆ. ಅನೇಕ ಸಾರಿ ನಾನು ಹೇಳಿದಂತಹ ಮಾತು ಏನು ಅಂದರೆ, this may go outside the purview of this 62nd Amendment to the Constitution. ಕೆಲವು ಸಾರಿ ಹೋಗಬಹುದು. ಇವೊತ್ತು ಅಂತರ್‌ಜಾತಿ ವಿವಾಹದ ಬಗ್ಗೆ ನಾವು ಬೇಕಾದಷ್ಟು ಹೇಳಿದ್ದೇವೆ. ಒಂದು ಜಾತಿಯ ಜನರು ಮತ್ತೊಂದು ಜಾತಿಯವರನ್ನು ಮದುವೆಯಾದರೆ ನೌಕರಿ ಕೊಡುವ ವಿಚಾರ, ಹಣ ಕೊಡತಕ್ಕಂಥ ವಿಚಾರ ಏನಿದೆ, ಅದನ್ನು ಸೋಷಿಯಲ್ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆ. ಅದರ ಬಗ್ಗೆ ಬೇಕಾದಷ್ಟು ಮಾತನಾಡುತ್ತೇವೆ, ನಿಜವಾಗಿ ಹೇಳಬೇಕೆಂದರೆ, ಆ ಬಾಬ್ತು ಹಣ ಖರ್ಚು ಆಗದೇ ಹಾಗೆಯೇ ವರ್ಷಗಟ್ಟಲೆ ಬಿದ್ದಿದೆ ಎಂದು ಕೇಳಿದ್ದೇವೆ. ಅವರು ಹಣದ ಆಸೆಗಾಗಿ ಮದುವೆ ಆಗುತ್ತಾರೆ ಎನ್ನುವುದು ಅಲ್ಲ.

ಅವರು ಅನೇಕ ವಿಚಾರಗಳನ್ನು ಎದುರಿಸಬೇಕಾಗುತ್ತದೆ. ಮದುವೆ ಆಗತಕ್ಕ ಹೆಣ್ಣುಮಗಳಾಗಲಿ, ಗಂಡು ಮಗ ಆಗಲಿ ಅನೇಕ ವಿಚಾರಗಳನ್ನು ಎದುರಿಸಬೇಕಾಗುತ್ತದೆ. ಅವರಿಗೆ ೨ ಸಾವಿರ ಅಥವಾ ೫ ಸಾವಿರ ರೂಪಾಯಿ ಕೊಡಬಹುದು, [illegible] ಅಂಶ ನನಗೆ ಸರಿಯಾಗಿ ನೆನಪು ಇಲ್ಲ. ಆ ಹಣ ಅವನ ಕೈಗ ಸಿಕ್ಕಿದರೆ ಅವನಿಗ ಏನೋ ಒಂದು ತರಹ ಧೈರ್ಯ ಬರುತ್ತದೆ. ನಾನು ಒಂದು ಮನೆ ಮಾಡಿಕೊಂಡಿದ್ದೇನೆ. ಒಂದು ಅಂಗಡಿ ಇಟ್ಟುಕೊಂಡಿದ್ದೇನೆ. ನಾನು ಒಂದು ಉದ್ಯೋಗ ಮಾಡುತ್ತಿದ್ದೇನೆ, ಎನ್ನುವ ಒಂದು ಆಸಕ್ತಿ ಅವನಲ್ಲಿ ಬರುತ್ತದೆ. ಆದ್ದರಿಂದ, ನಾನೇನು ಇನ್‌ಸೆಂಟಿವ್ ಎಂದು ಕರೆಯುತ್ತೇವೆ. the incentives that we give to eradicate this evil in the society which has so many castes and creeds. ನಾವು ಇದನ್ನು ತೆಗೆಯಬೇಕು ಜಾತ್ಯಾತೀತ ರಾಷ್ಟ್ರದ ನಿರ್ಮಾಣದ ಬಗ್ಗೆ, ರಾಜ್ಯಾಂಗದ ಬಗ್ಗೆ ನಾವು ಏನು ಪದೇಪದೇ ಮಾತನಾಡುತ್ತೇವೆ, ಏನೆಂದರೆ ಪೂರ್ವಭಾವಿಯಾಗಿ ಸೆಕ್ಯುಲಿಯರಿಸಮ್ ಅಥವಾ ಸೆಕ್ಯುಲಿಯರ್ ಸ್ಟೇಟ್ ಮಾಡಲಿಕ್ಕೋಸ್ಕರ ಏನು ಪ್ರಯತ್ನ ಮಾಡುತ್ತಿದ್ದೇವೆ ಅದಕ್ಕೆ ಹೋಗತಕ್ಕ ದಿಸೆಯಲ್ಲಿ ಒಂದು ಮಾತನ್ನು ಗಮನದಲ್ಲಿಡ ಬೇಕಾದ್ದು ಹೆಚ್ಚು ಅವಶ್ಯಕತೆ ಇದೆ. ಹರಿಜನರನ್ನು ದೇವಸ್ಥಾನಗಳಿಗ ಕರೆತರುವ ಬಗ್ಗೆ ಮಹಾತ್ಮಾಗಾಂಧಿಯವರು ಮತ್ತು ಇನ್ನಿತರರು ಅನೇಕ ರೀತಿಯ ಹೋರಾಟಗಳನ್ನು ಮಾಡಿ ಹೋಗಿದ್ದಾರೆ. ಮಹಾತ್ಮಾ ಗಾಂಧಿಯವರು ಹುಟ್ಟಿದ ದಿವಸ ಮತ್ತು ರಿಪಬ್ಲಿಕ್ ಡೇ ದಿವಸ ಅವರ ಫೋಟೋ ಇಟ್ಟು ಅವರಿಗೆ ನಾವೆಲ್ಲರೂ ನಮನ ಮಾಡುತ್ತೇವೆ ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಯಿತೆಂದು ನಾವು ಮಾತನಾಡಿಕೊಳ್ಳುತ್ತೇವೆ. ಆದರೆ ಅವರ ತತ್ವವನ್ನು ನಾವು ಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ: ಹರಿಜನರು ದೇವಸ್ಥಾನದ ಒಳಗಡೆ ಹೋಗದೇ ಇರುವಂತಹ ಉದಾಹರಣೆಗಳು ಬೇಕಾದಷ್ಟು ಇದೆ. ಸುಮಾರು ೭-೮ ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಎಲ್ಲರೂ ಸೇರಿ ದೇವರಿಗೆ ಪೂಜೆ ಮಾಡಿಸಬೇಕೆಂದು ತೀರ್ಮಾನ ಮಾಡಿದೆವು. ಮುಸಲ್ಮಾನ ಭಾಂಧವರು, ಬ್ರಾಹ್ಮಣರು, ಲಿಂಗಾಯಿತರು ಎಲ್ಲರೂ ಇದ್ದರು. ಆದರೆ ಮತ್ತೆ ಅವರು ಒಳಗಡೆ ಹೋಗಲಿಲ್ಲ. ಕರೆದರೂ ಕೂಡ

ಹೋಗಲಿಲ್ಲ. ಗಲಾಟೆ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಕರೆದಿರತಕ್ಕಂತಹ ಕಡೆಗಳಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬರಬಹುದು, ಆದರೆ ಅವರು ಅದಕ್ಕೆ ತಯಾರಿಲ್ಲ ಬೇರೆಯವರು ದೇವಸ್ಥಾನಗಳಿಗೆ ಕರೆದರೆ ಬರುವುದಕ್ಕೆ ಅವರೂ ಕೂಡ ತಯಾರಾಗಿರಬೇಕು. ನಾವೆಲ್ಲರೂ ಒತ್ತಾಯ ಮಾಡಿ ಅವರನ್ನು ಒಳಕ್ಕೆ ಕರೆದುಕೊಂಡು ಹೋದೆವು. ವಯಸ್ಸಾಗಿರತಕ್ಕಂತಹವರು ಮತ್ತು ಮಾನಸಿಕವಾಗಿ ಯಾತನೆಯನ್ನು ಅನುಭವಿಸಿರತಕ್ಕಂತಹವರು ಒಳಗಡೆ ಹೋಗಲಿಕ್ಕೆ ಧೈರ್ಯ ಮಾಡುವುದಿಲ್ಲ, ಅವರನ್ನು ನಾವುಗಳು ಕರೆದುಕೊಂಡು ಬರಬೇಕು. ಇಂತಹ ಪರಿಸ್ಥಿತಿ ಇದೆ. ನಾವು ಆ ದೇವಸ್ಥಾದಲ್ಲಿ ಅಂದು ಅವರಿಂದಲೇ ಪೂಜೆ ಮಾಡಿಸಿದೆವು. ಬೇರೆ ಎಲ್ಲಾ ಜಾತಿಯವರು ಹೇಗೆ ದೇವಸ್ಥಾನಗಳಿಗ ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ ಹಾಗೆಯೇ ಇವರೂ ಕೂಡ ಹೋಗಿ ಪೂಜೆಮಾಡಿಸಿಕೊಂಡು ಬರಬೇಕು. ಅವತ್ತು ನಾವು ಎಲ್ಲರೂ ಸೇರಿ ಅಲ್ಲಿ ಪೂಜೆ ಮಾಡಿಸಿಕೊಂಡು ಬಂದೆವು. ನಾವು ಅಸೆಂಬ್ಲಿ ಕಡೆ ಬಂದೆವು, ಅವರು ಹೊರಗಡೆ ಹೋದರು ಮತ್ತೆ ಒಳಕ್ಕೆ ಬರಲಿಲ್ಲ.

ಮಾನಸಿಕವಾಗಿ ಏನು ಯಾತನೆಯನ್ನು ಆ ವರ್ಗದವರು ಅನುಭವಿಸಿದ್ದರು, ಅವರು ಆ ದೇವಸ್ಥಾನದ ಒಳಗೆ ಮತ್ತೆ ಬರಲಿಲ್ಲ. ಅವರದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ನಾವು ಆದಷ್ಟು ಆ ಕೆಳಮಿಸ್ಸವರಿಗೆ ಕುಮ್ಮಕ್ಕು, ಧೈರ್ಯ ಕೊಡಬೇಕು. ದೇವಸ್ಥಾನಕ್ಕೆ ಬಂದು ದೇವರಿಗೆ ತೆಂಗಿನಕಾಯಿ ಒಡೆಸಿ ಪೂಜೆ ಮಾಡಿಸಿಕೊಂಡು ಹೋಗಿ ಎಂದು ನಾವೆಲ್ಲರೂ ಅವರಿಗೆ ಹೇಳಬೇಕು. ಈ ಮೀಸಲಾತಿ ಪದ್ಧತಿ ಏನು ಇದೆ, ಇದನ್ನು ಹರಿಜನರಿಗೆ ಮಾತ್ರ ಇಟ್ಟು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ರಾಜ್ಯಾಂಗದಲ್ಲಿರತಕ್ಕಂತಹ ಕಲಂ ೧೪, ೫, ೧೬ ಮತ್ತು ಇನ್ನೂ ಯಾವುದು ಇದೆ ಅದರಲ್ಲಿ ಹಿಂದುಳಿದವರಿಗೂ ಕೂಡ ಈ ಸೌಲಭ್ಯ ಕೊಡಬೇಕೆಂದು ಇದೆ. ಆದರೆ ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ನಾವು ಜಾರಿಗೆ ಕೊಟ್ಟೆವು, ಹಿಂದುಳಿದ ವರ್ಗದವರಿಗೆ ಜಾರಿಗೆ ಕೊಡಲಿಲ್ಲ.

ಅದು ಹಾಗೆ ಉಳಿದಿದೆ. ನಾನು ನಿನ್ನೆ ಟಿ.ವಿ.ಯಲ್ಲಿ ನೋಡಿದೆ ಬಹುಶಃ ದೇವಿಲಾಲರ ಅಧ್ಯಕ್ಷತೆಯಲ್ಲಿ ಎಂದು ಕಾಣುತ್ತದೆ, ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿರತಕ್ಕಂಥಾದ್ದು ಹಾಗೂ ಅದರಲ್ಲಿ ಎಲ್ಲಾ ಜಾತಿಯವರು ಇದ್ದಾರೆಂದು ಕೇಳಲ್ಪಟ್ಟೆ. ತುಳಿತಕ್ಕೆ ಸಿಕ್ಕಿರತಕ್ಕಂತಹ ಹರಿಜನರನ್ನು ಮೇಲಕ್ಕೆ ಎತ್ತತಕ್ಕಂತಹ ವಿಚಾರದಲ್ಲಿ ಎಲ್ಲಾ ಜಾತಿಯವರಿಗೂ ಬಹಳಷ್ಟು ಆಸೆ ಇದೆ. ಮಹಾತ್ಮ ಗಾಂಧೀಜಿಯವರ ಜೊತೆಯಲ್ಲಿ ಅನೇಕ ಉಚ್ಚ ಜಾತಿಯವರೂ ಕೂಡ ಹೋರಾಟ ಮಾಡಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆದರೂ ಕೂಡ ಅವರು ಇನ್ನೂ ಹೆಚ್ಚು ಜವಾಬ್ದಾರಿಯನ್ನು ತೆಗೆದುಕೊಂಡು ಹೆಚ್ಚು ಹೆಚ್ಚು ಮುಂದೆ ಬರಬೇಕೆಂದು ನಮಗೆ ಆಸೆ ಇದೆ. ಮಂಡಲ ಆಯೋಗದ ವರದಿಯ ಬಗ್ಗೆ ಕೇಂದ್ರ ಸರಕಾರ ಏನು ಉಪ ಸಮಿತಿಯನ್ನು ಮಾಡಿದೆ ಅವರು ಕೂಡಲೇ ತೀರ್ಮಾನ ತೆಗೆದುಕೊಂಡು ಇದನ್ನು ಜಾರಿಗೆ ಕೊಟ್ಟು ಕೇಂದ್ರದವರು ಎಲ್ಲಾ ರಾಜ್ಯ ಸರಕಾರಗಳಿಗೂ ಇದನ್ನು ಅನುಸರಿಸುವಂತಾಗಬೇಕು. ಇದನ್ನು ವ್ಯವಸ್ಥಿತವಾಗಿ ಜಾರಿಗೆ ತಂದು ಹಿಂದುಳಿದ ವರ್ಗಕ್ಕೆ ಸೇರಿದವರು ಎಂದು ಏನು ಮಂಡಲ ಆಯೋಗದವರು ಪಟ್ಟಿ ಮಾಡಿದ್ದಾರೆ, ಅವರಿಗೆ ಅನುಕೂಲ ಮಾಡಿಕೊಡಬೇಕು, ವಿವರಕ್ಕೆ ನಾನು ಹೋಗುವುದಿಲ್ಲ. ಮೀಸಲಾತಿಯ ವಿಚಾರದಲ್ಲಿ ಹಿಂದುಳಿದ ವರ್ಗದವರಿಗೂ ಕೂಡ ಅನುಕೂಲ ಮಾಡಿಕೊಡಬೇಕು. ಇಲ್ಲಿ ತಂದಿರುವ ಅಮೆಂಡ್‌ಮೆಂಟ್ ಒಳಕ್ಕೆ ಇದು ಬರದಿದ್ದರೂ ಕೂಡ ಸಾಂದರ್ಭಿಕವಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮೀಸಲಾತಿಯನ್ನು ಅವರಿಗೂ ಕೂಡ ಎಕ್ಸ್‌ಟೆಂಡ್ ಮಾಡಬೇಕು. ಇನ್ನು ಕ್ರೈಟೀರಿಯ ಹೇಗೆ ಇರಬೇಕು ಎಂಬುದು ಬಹಳ ಮುಖ್ಯ. ಸಾಮಾಜಿಕವಾಗಿ ರಾಜಕೀಯವಾಗಿ ನಾವು ಇದನ್ನು ನೋಡಬೇಕಾಗುತ್ತದೆ. ಆರ್ಥಿಕವಾಗಿ ಕೂಡ ನಾವು ಇದರ ಬಗ್ಗೆ ನೋಡಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದಿರತಕ್ಕವರನ್ನು ಗಮನದಲ್ಲಿಟ್ಟುಕೊಂಡು ಮಾಡುವುದು ಒಳ್ಳೆಯದು. Not on caste basis, but on the financial condition of a person or the family; economic condition of a family of a person. ಎನ್ನತಕ್ಕ ಮಾತು, ವಾದಗಳು, ಪರ ಹಾಗೂ ವಿರೋಧವಾಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಿಂದೆ ರಾಮಕೃಷ್ಣ ಹೆಗಡೆಯವರು ಎ,ಬಿ.ಸಿ.ಡಿ ಇ.ಎಫ್. ಎಂದು ಏನು ವರ್ಗ ಮಾಡಿದರು ಇದು ಹಾಗೆ ಆಗುತ್ತದೆ. ಯಾರಿಗೆ ನಿಜವಾಗಿ ಸೌಲಭ್ಯಗಳು ಸಿಕ್ಕಬೇಕೋ ಅವರಿಗೆ ಸಿಕ್ಕುವುದಿಲ್ಲ. ಎ ಬಿ.ಸಿ.ಡಿ.ಇ,ಎಫ್. ಎಂದು ಮಾಡಿದ್ದರಿಂದ ಅರ್ಹರಲ್ಲದವರೂ ಕೂಡ ಈ ಸೌಲಭ್ಯಗಳನ್ನು ಹಂಚಿಕೊಂಡರು. ಆದರೆ ಈಗ ಆ ರೀತಿ ಆಗಬಾರದು,

ಶ್ರೀ ಎಸ್. ಬಂಗಾರಪ್ಪ.— ಹಾಗೆ ಹೇಳುವುದಾದರೆ ಷೆಡ್ಯೂಲ್ಡ್ ಕ್ಯಾಸ್ಟ್ ಎಂದರೆ ಕೇವಲ ಹರಿಜನರು ಏನೂ ಅಲ್ಲ, ಇದರಲ್ಲಿ ಲಂಬಾಣಿಯವರೂ ಇರುತ್ತಾರೆ. ಒಡ್ಡರೂ ಇರುತ್ತಾರೆ...

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ಇದಕ್ಕೆ ಸಂಬಂಧಪಟ್ಟಂತೆ ಷೆಡ್ಯೂಲ್ಡ್ ಕ್ಯಾಸ್ಟ್ ಲಿಸ್ಟ್ ಒಂದು ಇದೆ. It differs from state to state. Lambanis are Scheduled Caste here. ಆದರೆ ಮಹಾರಾಷ್ಟ್ರದಲ್ಲಿ ಅವರು ಇಲ್ಲ. ಆಂಧ್ರದಲ್ಲಿ ಅವರು ಇಲ್ಲ. ಮಧ್ಯ ಪ್ರದೇಶದಲ್ಲಿ ಅವರು ಇಲ್ಲ. ಏಕೆಂದರೆ ಇದು ಒಂದೊಂದು ರಾಜ್ಯಕ್ಕೂ ವ್ಯತ್ಯಾಸವಿದೆ. ನೀವು ಯಾವ ಲಿಸ್ಟನ್ನು ಕಳುಹಿಸುತ್ತೀರೋ ಅದನ್ನು ಅವರು ರ್ಯಾಟಿಫೈ ಮಾಡಿ ಕಳುಹಿಸಿಕೊಡುತ್ತಾರೆಯೇ ಹೊರತು ಷೆಡ್ಯೂಲ್ಡ್ ಕ್ಯಾಸ್ಟ್‌ನ ಬಗ್ಗೆ ಅವರದೇ ಆದ ಸಪರೇಟ್ ಲಿಸ್ಟ್ ಇಲ್ಲ. ಹರಿಜನರು ಎಂದು ಯಾರೂ ಆ ಹೆಸರಿನವರು ಇಲ್ಲವೇ ಇಲ್ಲ. ಹರಿಜನರು ಎಂದರೆ ಹೊಲೆಯರು, ಮಾದಿಗರು ಎಂದು ಏತಕ್ಕೆ ಕರೆಯಬೇಕು, ಅವರೆಲ್ಲರನ್ನೂ ಸಾಮೂಹಿಕವಾಗಿ ಹರಿಜನರೆಂದು ಕರೆಯಬೇಕೆಂದು ಮಹಾತ್ಮ ಗಾಂಧೀಜೀಯವರು ಇಚ್ಛೆಪಟ್ಟಿದ್ದರು. Now it is not at all a scheduled list.

ಶ್ರೀ ಎಸ್. ಬಂಗಾರಪ್ಪ.— ಇದು ನನಗೂ ಗೊತ್ತಿದೆ. ಒಂದು ರಾಜ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಪರಿಮಿತಿಯಲ್ಲಿ ಬರತಕ್ಕ ಜಾತಿಯವರು ಇನ್ನೊಂದು ರಾಜ್ಯದಲ್ಲಿ ಬರುವುದಿಲ್ಲ. ಆದರೆ ಅಸ್ಪೃಶ್ಯತೆ ಎಂಬುದು ಇಡೀ ದೇಶದಲ್ಲಿ ಇದೆ. ಇದರಲ್ಲಿ ಎ,ಬಿ,ಸಿ,ಡಿ, ಎಂದು ವರ್ಗ ಮಾಡಿರತಕ್ಕದ್ದು ಸರಿಯಲ್ಲ.

ಇದನ್ನು ನಾನು ಒಪ್ಪುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟನ್ನು ತೆಗೆದುಕೊಂಡರೆ ಇದರಲ್ಲಿ ಲಂಬಾಣಿಯವರು ಇನ್ನೂ ಬೇರೆ ಬೇರೆ ಜನರು ಸೇರುತ್ತಾರೆ. ನಾವು ಕೇವಲ ಒಂದೇ ಜಾತಿಯನ್ನು ಅಂದರೆ ಹರಿಜನರನ್ನ ಮೀಸಲಾತಿಗೆ ಸೇರಿಸುವುದರಿಂದ ಈ ಲೀಸ್ಟ್‌ನಲ್ಲಿ ಬರತಕ್ಕ ಬೇರೆ ಬೇರೆ ಜಾತಿಯವರೂ ಇದರ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ನಿಜವಾಗಿ ಯಾರಿಗೆ ಈ ಮೀಸಲಾತಿ ಸಿಕ್ಕಬೇಕೋ ಅದು ಅವರಿಗೆ ಸಿಕ್ಕುವುದಿಲ್ಲ. ಇದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ಕೆಲವು ಸ್ಥಾನಗಳನ್ನು ಏನು ಮೀಸಲಾತಿ ಕೊಡಬೇಕೋ ಅದನ್ನೂ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೬.೪ ಪರ್ಸೆಂಟ್ ಏನಿದೆ ಅದನ್ನು ಇನ್‌ಸಿಸ್ಟ್ ಮಾಡಲಿ.

ಶ್ರೀ ಎಸ್. ಬಂಗಾರಪ್ಪ.— ಮಂಡಲ್ ವರದಿಯನ್ನು ಜಾರಿಗೆ ಕೊಟ್ಟರೂ ಕೂಡ ಅನೇಕ ಜಾತಿಗಳು ಹಿಂದುಳಿದ ಲಿಸ್ಟ್‌ನಲ್ಲಿ ಬರುವುದರಿಂದ ಎಲ್ಲರನ್ನೂ ಸಮಾನವಾಗಿ ನೋಡುವುದಕ್ಕಾಗುತ್ತದೆಯೋ ಎನ್ನುವ ಬಗ್ಗೆ ವಾದ ಮಾಡುತ್ತಾ ಹೋದರೆ ಅದು ಬಹಳ ದೊಡ್ಡ ವಾದವಾಗುತ್ತದೆ. ಇವನ್ನು ಬೇಕಾದರೆ ಅನಂತರ ಚರ್ಚೆ ಮಾಡೋಣ. ಮಂಡಲ್ ವರದಿಯನ್ನು ಜಾರಿಗೆ ಕೊಡಲೇಬೇಕು. ನನಗೆ ತಿಳಿದಿರುವಂತೆ ಈ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ರಾಜೀವ್ ಗಾಂಧಿಯವರೂ ಕೂಡ ಇದರ ಬಗ್ಗೆ ಒಂದು ಉಪ ಸಮಿತಿಯನ್ನು ರಚನೆ ಮಾಡಿದ್ದರು...

ಶ್ರೀ ಬಸವರಾಜ ರಾಯರೆಡ್ಡಿ.— ಅವರು ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ.— ಮಂಡಲ್ ಆಯೋಗದ ಬಗ್ಗೆ ತಾವು ಮಾತನಾಡುತ್ತಿದ್ದೀರಿ, ಅದನ್ನು ರಚನೆ ಮಾಡಿದ್ದರ ಬಗ್ಗೆ ಮಾತನಾಡುತ್ತಿದ್ದೀರಿ, ಹಾಗಾದರೆ ಅವರು ವರದಿಯನ್ನು ಕೊಟ್ಟಿದ್ದು ಯಾವಾಗ? ಆ ವರದಿ ಇದುವರೆಗೂ ಎಲ್ಲಿತ್ತು? ಆ ವರದಿಯಲ್ಲಿ ಏನಿದೆ? ಎಂಬುದನ್ನು ದಯವಿಟ್ಟು ಹೇಳಿ. ಅದರಲ್ಲಿ ಏನಿದೆ ಎಂದು ನನಗಂತೂ ಗೊತ್ತಿಲ್ಲ. ಅದನ್ನು ಇಷ್ಟು ದಿವಸಕಾಲ ಕತ್ತಲಲ್ಲಿ ಇಟ್ಟಿದ್ದಕ್ಕೆ ಕಾರಣವೇನು? ಆ ವರದಿಯನ್ನು ಮೊದಲು ಜನರ ಮುಂದಿಟ್ಟು ಅನಂತರ ಜಾರಿಗೆ ತರಲು ಏನು ತೊಂದರೆ ಇತ್ತು? ಆ ರೀತಿ ಮಾಡಿದ ಶಕ್ತಿಗಳಾವುವು? ಆಗ ಇದ್ದಂಥ ಅಡಚಣೆಗಳೇನು? ಕೇಂದ್ರ ಸರ್ಕಾರದವರು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ?

ಶ್ರೀ ಎಸ್. ಬಂಗಾರಪ್ಪ.— ಮಂಡಲ್ ಆಯೋಗ ಯಾವಾಗ ಅಸ್ತಿತ್ವಕ್ಕೆ ಬಂತು? ಅದರ ವರದಿ ಯಾವಾಗ ಬಂತು ಏತಕ್ಕೆ ಆಗಲೇ ಜಾರಿಗೆ ಕೊಡಲಿಲ್ಲ ಎಂಬ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ.

ಛೇರ್ಮನ್.— ಅದು ಈಗ ಬೇಡ. ನೀವು ಉತ್ತರ ಕೊಡುವುದಕ್ಕೆ ಹೋದರೆ ಬಹಳ ಸಮಯವಾಗುತ್ತದೆ. ಇನ್ನೂ ೧೦ ಜನ ಮಾತನಾಡುವವರಿದ್ದಾರೆ. ಮಧ್ಯಾಹ್ನ ೩ ಗಂಟೆಯೊಳಗೆ ಇದರ ಚರ್ಚೆಯನ್ನು ಮುಗಿಸಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ ನನಗೆ ನೆನಪಿರುವಂತೆ ಜನತಾ ಸರ್ಕಾರ ಕೇಂದ್ರದಲ್ಲಿ ಇದ್ದಾಗ ಮಂಡಲ್ ಆಯೋಗ ರಚನೆಯಾಯಿತು. ಅದರ ವರದಿ ಬಂದ ಮೇಲೆ ಅಂತಿಮವಾಗಿ ತೀರ್ಮಾನ ಕೊಡುವುದಕ್ಕೆ ಕ್ಯಾಬಿನೆಟ್ ಉಪಸಮಿತಿಯನ್ನು ಮಾನ್ಯ ರಾಜೀವ್ ಗಾಂಧಿಯವರು ರಚನೆ ಮಾಡಿದರು. ಈಗ ನಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿಲ್ಲ. ಈಗ ಜನತಾ ದಳದ ಸರ್ಕಾರ ಕೇಂದ್ರದಲ್ಲಿದೆ. ಅವರು ಒಂದು ಉಪಸಮಿತಿಯನ್ನು ರಚನೆ ಮಾಡಿದ್ದಾರೆಂದು ನಾನು ತಿಳಿದಿದ್ದೇನೆ.

ಆದ್ದರಿಂದ ಅವರು ಸಾಧ್ಯವಾದಷ್ಟು ಶೀಘ್ರವಾಗಿ ಜಾರಿ ಮಾಡಲಿ ಎಂದು ಈ ಮಾತನ್ನು ಹೇಳುತ್ತೇನೆ. ಕ್ಯಾಬಿನೆಟ್ ಉಪಸಮಿತಿಯನ್ನು ಮಾನ್ಯ ರಾಜೀವ್ ಗಾಂಧಿಯವರ ಸರ್ಕಾರ ಇದ್ದಾಗ ಮಾಡಿದ್ದಂಥ ಸಂದರ್ಭದಲ್ಲಿ ನಾನು ಈ ಮಾತನ್ನು ಆಡಿದ್ದೆ. ಮುಂದೆ ಅದೆ ರೀತಿಯಲ್ಲಿ ಜನತಾ ಸರ್ಕಾರ ಇದ್ದಾಗಲೂ ಕೂಡ ಆಡಿದ್ದೇನೆ. ಶಾಸಕರ ಉಪಸಮಿತಿ ಇದ್ದಾಗ ತೀರ್ಮಾನ ಮಾಡಿದ್ದು ಎಂದು ತಿಳಿದುಕೊಳ್ಳಬೇಡಿ ಮಾನ್ಯ ಬೈರೇಗೌಡರೆ. ಇದು ಅಷ್ಟು ಸುಲಭವಾಗಿ ಇಲ್ಲ. ಏತಕ್ಕೆಂದರೆ ಅಂಟಿರಿಸರ್ವೇಷನ್ ಅಮೆಂಡ್‌ಮೆಂಟ್ ಆಗುವಂಥ ಕಾಲದಲ್ಲಿ ಯು. ಪಿ., ಬಿಹಾರ್ ಸರ್ಕಾರಗಳು ಅಷ್ಟು ಸುಲಭವಾಗಿ ವಿಚಾರ ಮಾಡುವುದಕ್ಕೆ ಬರುವುದಿಲ್ಲ. ರಾಜಕೀಯ ಪರಿಸ್ಥಿಯ ಹಿನ್ನೆಲೆಯಲ್ಲಿ ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎನ್ನುವುದು ಮುಖ್ಯ. ಯಾವರೀತಿ ಯಾವಾಗ ತೆಗೆದುಕೊಳ್ಳುತ್ತಾರೆನ್ನುವುದು ಮುಖ್ಯ. ಮತ್ತೆ ಯಾವ ರೀತಿ ಅದನ್ನು ಜಾರಿಗೆ ಕೊಡುತ್ತಾರೆನ್ನುವುದು ಅಷ್ಟೇ ಮುಖ್ಯವಾಗಿದೆ. ಇದಕ್ಕೆ ಉತ್ತರ ಇಲ್ಲಿ ಸಿಗುವುದಿಲ್ಲ. ಉತ್ತರ ಅಲ್ಲಿ ಸಿಗುತ್ತದೆ.

ಶ್ರೀ ಬಸಪ್ಪ ಬನ್ನಿಕೋಡ.—ಯು.ಪಿ. ಮತ್ತು ಬಿಹಾರ್‌ನಲ್ಲಿ ಆಂಟಿ ಮೂವ್‌ಮೆಂಟ್ ಇರುವುದರಿಂದ ಕಾಂಗ್ರೆಸ್‌ನವರು ಅದನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲವೆಂದು ಕಾಣಿಸುತ್ತದೆ,

ಶ್ರೀ ಎಸ್. ಬಂಗಾರಪ್ಪ.— ಈ ಒಂದು ಅಭಿಪ್ರಾಯವನ್ನು ಕೆಲವರು ಇಟ್ಟುಕೊಂಡಿರುತ್ತಾರೆ. ಕೆಲವರು ಇಲ್ಲಿ ಅಭಿಪ್ರಾಯಕ್ಕೆ ಮತ್ತೊಂದು ಅಭಿಪ್ರಾಯವಿಲ್ಲವೆಂದು ಹೇಳಿದ್ದಾರೆ. ನಾಳೆ ಅದೇ ಅಭಿಪ್ರಾಯ ಮತ್ತೊಂದು ಸಾರಿ ಜನತಾದಳದಲ್ಲಿ ಬರದ ಹಾಗೆ ನೋಡಿಕೊಳ್ಳುವುದು ಅವರ ಜವಾಬ್ದಾರಿಯಾಗಿದೆ. ಏತಕ್ಕೆಂದರೆ ನಿಮ್ಮ ಅಭಿಪ್ರಾಯ ಅವರಿಗೂ ಕೂಡ ಉಪಯೋಗವು ಆಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮತ್ತೊಂದು ವಿಚಾರ ಮಾತನಾಡುವುದು ಕೂಡ ಇದೆ. ಏನೆಂದರೆ, ಮುಸ್ಲೀಮರು ಕೂಡ ನಮ್ಮ ಸಹೋದರರೆ ಆಗಿದ್ದಾರೆ. ಅವರಿಗೂ ಕೂಡ ಈ ಸೌಲಭ್ಯವನ್ನು ಎಕ್ಸ್‌ಟೆಂಡ್ ಮಾಡಬೇಕಾದ ಪರಿಸ್ಥಿತಿ ಇದೆ. ಏತಕ್ಕೆಂದರೆ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಕರ್ನಾಟಕ ರಾಜ್ಯದಲ್ಲಿ ಹೇಳಿದಾಕ್ಷಣ ಅವರನ್ನು ಸೇರಿಸಿ ಮಾತನಾಡಬೇಕಾದರೆ ಮುಸ್ಲೀಮ್ ಮತ್ತು ಕ್ರಿಶ್ಚಿಯನ್ ರವರು ಕೂಡ ಇಂಥ ಒಂದು ಸೌಲಭ್ಯವನ್ನು ಕೊಡಿ ಎಂದು ಕೇಳುತ್ತಾರೆ ಎನ್ನುವ ಅಭಿಪ್ರಾಯವನ್ನು ನಾವು ಇಟುಕೊಂಡಿರುತ್ತೇವೆ. ಇದು ಸುಮಾರು ಜನರು ಗಮನಿಸತಕ್ಕಂಥ ವಿಚಾರ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಬಹಳ ಆಳವಾಗಿ ಅಭ್ಯಾಸ ಮಾಡಿ ಹೇಳತಕ್ಕಂಥ ವಿಚಾರ ಕೂಡ ಹೌದು. ಏತಕ್ಕೆಂದರೆ ಒಂದೊಂದು ವಿಚಾರವನ್ನು ಕೂಡ ಸಾಮಾನ್ಯವಾಗಿ ಅದರ ಚರಿತ್ರೆಯನ್ನು ವಿಸ್ತಾರ ಮಾಡಿಕೊಂಡು ಹೋಗತಕ್ಕಂಥ ಸಂದರ್ಭವಿರುವುದರಿಂದ ಅದಕ್ಕಿಲ್ಲ ಬಹಳಕಾಲ ಕೊಡಬೇಕಾಗುತ್ತದೆ, ಆದ್ದರಿಂದ ಈಗ ನಮ್ಮ ಮುಂದಿರತಕ್ಕಂಥ ೬೨ನೇ ತಿದ್ದುಪಡಿ ಏನು ಇದೆ, ಇದು ಒಂದು ವಿಚಾರಕ್ಕೆ ಮಾತ್ರ ಸೀಮಿತವಾಗಿರತಕ್ಕಂಥ ವಿಚಾರ. ಆದರೆ ಸಾಂದರ್ಭಿಕವಾಗಿ ನಾವು ಅಂದರೆ ಆ ಕಡೆ ಕುಳಿತಿರತಕ್ಕಂಥವರೇ ಇರಬಹುದು ಅಥವಾ ಈ ಕಡೆ ಕುಳಿತಿರತಕ್ಕಂಥವರೇ ಇರಬಹುದು, ನಾವು ನಮ್ಮ ಭಾವನೆಗಳನ್ನು ಕೆಲವೊಮ್ಮೆ ಇಲ್ಲಿ ಇಟ್ಟುಬಿಡುತ್ತೇವೆ. ಅದು ಅನಿವಾರ್ಯವೂ ಆಗಿದೆ. ಏತಕ್ಕೆಂದರೆ ಒಂದೊಂದು ಸಾರಿ ಈ ಸ್ಥಾನದಲ್ಲಿ ಹೇಳದಿದ್ದರೆ ಇನ್ನು ಎಲ್ಲಿ ಹೇಳಬೇಕು ಎನ್ನುವ ದೃಷ್ಟಿಯಿಂದ ಹೇಳಬೇಕಾಗುತ್ತದೆ. ಆದರೆ ಕಾನೂನುಬದ್ಧವಾಗಿ ಕೆಲವೊಮ್ಮೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಿ ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ಸಂಪೂರ್ಣವಾಗಿ ಬೆಂಬಲಿಸಿ ಮಾನ್ಯ ಸದಸ್ಯರು ಅನೇಕರು ತಮ್ಮ ಅಭಿಪ್ರಾಯವನ್ನು ಏನು ವ್ಯಕ್ತಪಡಿಸಿದ್ದಾರೆ ಅವರ ಜೊತೆಯಲ್ಲಿ ನಾನೂ ಕೂಡ ಇಂದು ಸರ್ಕಾರದವರು ಮಂಡಿಸಿರತಕ್ಕಂಥದ್ದು ರಾಜ್ಯಾಂಗ ಬದ್ಧವಾಗಿ ಶಾಸನ ಸಭೆಗಳಲ್ಲಿ ಅಂಗೀಕಾರವಾಗಲೇಬೇಕು ಎನ್ನುವ ವಿಚಾರ ಇರುವುದರಿಂದ, ನಾನು ಅದಕ್ಕೆ ಬೆಂಬಲವನ್ನು ಕೊಟ್ಟಿರುತ್ತೇನೆ. ಈ ಬೆಂಬಲವನ್ನು ಎಲ್ಲರೂ ಮುಂದುವರಿಸಿಕೊಂಡು ಹೋಗಬೇಕೆನ್ನುವ ಮಾತನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).— ಮಾನ್ಯ ಸಭಾಧ್ಯಕ್ಷರೇ, ಇಂಥ ಒಂದು ಒಲಾಢ್ಯವಾದ ವಿಚಾರದಲ್ಲಿ ಮಾತನಾಡಲು ನನಗೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ ಈ ಒಂದು ಸಂದರ್ಭದಲ್ಲಿ ೬೨ ನೇ ಸಂವಿಧಾನದ ತಿದ್ದುಪಡಿಗೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಾ ನಾಲ್ಕಾರು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಪ್ರಸ್ತಾವವನ್ನು ತಂದಿರತಕ್ಕಂಥದ್ದು ಬಹಳ ಗಂಭೀರವಾಗಿರುವುದಾಗಿದೆ ಮತ್ತು ಅಷ್ಟು ಸವಿಸ್ತಾರವಾಗಿಯೂ ಇದೆ. ಏತಕ್ಕೆಂದರೆ ಮಾನವ ಸಮಾಜದಲ್ಲಿ ಅನೇಕ ವರ್ಷಗಳಿಂದಲೂ ಸಹಿತ ವರ್ಗರಹಿತ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಅನೇಕ ಮಹಾಪುರುಷರು ಹೇಳಿದರೂ ಸಹಿತ ಅನೇಕ ವರ್ಗಗಳನ್ನು ಮಾಡಿ ಒಂದು ವರ್ಗದ ಜನರನ್ನು ಶೋಷಣೆ ಮಾಡಿ ಅವರಿಂದ ಉಪಯೋಗವನ್ನು ಪಡೆದುಕೊಂಡು ಅವರನ್ನು ಮಾನವೀಯತೆಯಿಂದ ದೂರ ಇಟ್ಟುಕೊಂಡು ಬಂದಿರತಕ್ಕಂಥ ಸನ್ನಿವೇಶಗಳನ್ನು ಸಮಾಜದ ಹಿರಿಯರು ನೋಡಿ ಇಂಥ ಒಂದು ತಿದ್ದುಪಡಿಯನ್ನು ಅಥವಾ ಕಾನೂನನ್ನು ರಚನೆ ಮಾಡಿದರು. ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಲೌಕಿಕವಾಗಿ ಮುಂದುವರಿಸಬೇಕೆಂಬ ಸದುದ್ದೇಶದಿಂದ ಇಂಥ ಒಂದು ತಿದ್ದುಪಡಿಗಳನ್ನು ಸಂವಿಧಾನದಲ್ಲಿ ತಂದಿರತಕ್ಕಂಥದ್ದು ಅತ್ಯಂತ ಅವಶ್ಯಕವಾಗಿರುತ್ತದೆ. ಏತಕ್ಕೆಂದರೆ ಹನ್ನೆರಡನೇ ಶತಮಾನದಲ್ಲಿಯೂ ಸಹಿತ ಸಮಾಜದಲ್ಲಿ ಶೋಷಿತರಾಗಿರತಕ್ಕಂಥ ಜನರನ್ನು ಮೇಲಕ್ಕೆ ಎತ್ತಲು ಆಗಿನ ಕಾಲದಲ್ಲಿ ಮಾನ್ಯ ಬಸವಣ್ಣನವರು ಕ್ರಾಂತಿಪುರುಷರಾಗಿ ಕೆಲಸ ಮಾಡಿದರೂ ಸಹಿತ ಅದು ಪ್ರಯೋಜನಕ್ಕೆ ಬರಲಿಲ್ಲ. ಏಕೆಂದರೆ ಆಗಿನ ಕಾಲದಲ್ಲಿ ಸ್ವಾರ್ಥಿಗಳು ಸಮಾಜದಲ್ಲಿ ಇದ್ದುದರಿಂದ ಈ ಜನತೆಯನ್ನು ದೂರ ಇಟ್ಟು ಅವರಿಗೆ ಪಟ್ಟಣಗಳ ಮುಖ್ಯ ರಸ್ತೆಗಳಲ್ಲಿ ಬರತಕ್ಕ ಅವಕಾಶವನ್ನು ಕೊಡಲಿಲ್ಲ. ಬೇರೆಯವರ ಮನೆಗಳ ಮುಂದೆ ಹೋಗತಕ್ಕ ಅವಕಾಶ ಇರಲಿಲ್ಲ. ಅವರನ್ನು ಒಂದು ಕಡೆ ಇಟ್ಟು ಪಶುಗಳಂತೆ ಕಾಣತಕ್ಕದ್ದು ಇತ್ತು. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ಹರಿಜನರ ಉದ್ಧಾರಕ್ಕೋಸ್ಕರ ಹರಿಜನರ

ಕಾಲೋನಿಗಳಲ್ಲಿ ವಾಸ ಮಾಡುತ್ತಾ ಬಂದರು. ನಾನು ಅಲ್ಲಿದ್ದರೆ ನನ್ನ ಹಿಂಬಾಲಕರು ನನ್ನ ತತ್ವವನ್ನು ಪರಿಪಾಲನೆ ಮಾಡತಕ್ಕ ಜನ ಇವರ ಉದ್ಧಾರಕೋಸ್ಕರ ಪ್ರಯತ್ನ ಮಾಡಬಹುದು ನನಗೆ ಆಗಿರತಕ್ಕ ನೋವನ್ನು ನೋಡಲಾರದೆ ಅವರನ್ನು ಬದಲಾವಣೆ ಮಾಡಬಹುದು ನಮ್ಮ ಜೊತೆಯಲ್ಲಿ ಅವರನ್ನು ತರಬಹುದೆಂಬ ಸದುದ್ದೇಶದಿಂದ ಮಹಾತ್ಮ ಗಾಂಧಿಯವರು ಆಗಿನ ಕಾಲದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಈ ಬಗ್ಗೆ ಹೋರಾಟ ಮಾಡುತ್ತಾ ಬಂದರು. ಡಾ; ಅಂಬೇಡ್ಕರ್‌ರವರು ಕೂಡ ಸ್ವಾತಂತ್ರ್ಯ ಪೂರ್ವದಲ್ಲೇ ಅಸ್ಪೃಶ್ಯರ ರಕ್ಷಣೆಯಾಗಬೇಕು, ಅವರನ್ನು ನಮ್ಮ ಮನೆಯವರಂತೆ ಬೆಳೆಸಿಕೊಂಡು ಬರಬೇಕೆಂಬ ದೃಷ್ಟಿಯಿಂದ ಸಂವಿಧಾನದಲ್ಲಿ ಈ ಸವಲತ್ತುಗಳನ್ನು ಕೊಡುತ್ತಾ ಬಂದರು. ಆದರೆ ಏನಾಯಿತು ? ಸಂವಿಧಾನದ ಅಂಗವಾಗಿ ಬಂದಂತಹ ಶಾಸಕರಾಗಲಿ. ಪಾರ್ಲಿಮೆಂಟಿನ ಸದಸ್ಯರಾಗಲಿ ಅಧಿಕಾರಕ್ಕೆ ಬಂದಾಗ ಈ ಜನತೆಯನ್ನು ಮರೆಯುತ್ತಾ ಬಂದರು. ಆ ಒಂದು ದುರ್ದೈವದಿಂದ ಈವತ್ತೂ ಈ ಸಮಾಜದಲ್ಲಿ ಅಸ್ಪೃಶ್ಯತೆ ಉಳಿದಿದೆ. ಮಾನ್ಯ ಬಂಗಾರಪ್ಪನವರು ಬಹಳ ಚೆನ್ನಾಗಿ ಈ ಬಗ್ಗೆ ವಿಶ್ಲೇಷಣೆ ಮಾಡಿದರು. ಅದೇ ರೀತಿ ಅನೇಕ ಹಿರಿಯ ಸದಸ್ಯರು ಹೇಳಿದರು. ನಮ್ಮ ಹಾಗೆ ಹರಿಜನರಿಗೂ ಎರಡು ಕಣ್ಣು. ಕಾಲು, ಕೈಗಳು ಇವೆ, ಅವರೇನು ಬೇರೆಯವರಿಗೆ ಕಡಿಮೆ ಇಲ್ಲವೆಂದು ಹೇಳಿದರು. ದೇವರು ನಮ್ಮ ಹಾಗೆ ಅವರನ್ನೂ ಸೃಷ್ಟಿ ಮಾಡಿದ್ದಾನೆ. ಆದರೆ ನಾವು ಅವರನ್ನು ದೂರ ಇಡುತ್ತಿದ್ದೇವೆ. ದೇವಸ್ಥಾನಗಳಿಗೆ ಸೇರಿಸುವುದಿಲ್ಲ. ಹರಿಜನರ ಮಕ್ಕಳು ಪಾಠಶಾಲೆಗಳಿಗೆ ಹೋಗತಕ್ಕ ಸೌಲಭ್ಯ ಇಲ್ಲ. ಯಾರ್ಯಾರು ಖಾಸಗಿ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ ಅಲ್ಲಿ ಹರಿಜನರ ಮಕ್ಕಳಿಗೂ ೧೮ ಪರ್ಸೆಂಟ್ ಸೀಟು ಕೊಡತಕ್ಕ ವ್ಯವಸ್ಥೆ ಆಗಬೇಕು. ದೊಡ್ಡ ದೊಡ್ಡ ಶ್ರೀಮಂತರು ತಮ್ಮ ಮಕ್ಕಳನ್ನು ಓದಿಸತಕ್ಕ ಕಾಲೇಜುಗಳು ಇವೆ, ಕಾನ್‌ವೆಂಟ್‌ಗಳು ಇವೆ, ಅಲ್ಲಿಯೂ ಕೂಡ ಹರಿಜನರ ಮಕ್ಕಳಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಇರಬೇಕು. ಆ ಮಕ್ಕಳು ನಮ್ಮ ಮಕ್ಕಳ ಜೊತೆ ಓದಿದರೆ ಇರುವಂತಹ ಭಿನ್ನಾಭಿಪ್ರಾಯಗಳು ಹೋಗಿ ಸಮಾಜದಲ್ಲಿ ಬದಲಾವಣೆಯಾಗಬಹುದೆಂದು ನನ್ನ ಅಭಿಪ್ರಾಯ. ಇವತ್ತಿನ ದಿವಸ ಈ ಒಂದು ವರ್ಗರಹಿತ ಸಮಾಜ ಸೃಷ್ಟಿಯಾಗಬೇಕಾದರೆ ರಾಜಕೀಯ ಮುಖಂಡರೆಲ್ಲರೂ ಒಂದಾಗಿರತಕ್ಕದ್ದು ಸಂತೋಷದ ಸಂಗತಿ. ಈ ಸಮಾಜದಲ್ಲಿ ದೇವರು ನಿರ್ಮಾಣ ಮಾಡಿದ ಜನರು ಸಮಬಾಳು ಬಾಳಿ ಸಮಪಾಲು ಹೊಂದಬೇಕೆಂಬ ಉದ್ದೇಶದಿಂದ ನಾವಿಲ್ಲಿ ಸೇರಿದ್ದೇವೆ. ಈ ದಿಸೆಯಲ್ಲಿ ಸಂವಿಧಾನದ ತಿದ್ದುಪಡಿ ಅವಶ್ಯಕವಾಗಿ ಆಗಿ ಈ ಒಂದು ವರ್ಗದ ಜನರ ರಕ್ಷಣೆಗೋಸ್ಕರ, ಅವರ ಕಲ್ಯಾಣಕ್ಕೋಸ್ಕರ ಹೋರಾಡತಕ್ಕದ್ದು ಎಲ್ಲರ ದೃಷ್ಟಿಯಲ್ಲಿ ಒಳ್ಳೆಯದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇವತ್ತು ಗಾಂಧೀಜಿಯವರ ನೇತೃತ್ವದಲ್ಲಿ, ಅಂಬೇಡ್ಕರ್‌ರವರ ನೇತೃತ್ವದಲ್ಲಿ ಈ ಒಂದು ಜನತೆಯ ರಕ್ಷಣೆಗೋಸ್ಕರ ಆಗಾಗ್ಗೆ ಸಂವಿಧಾನವನ್ನು ಮುಂದುವರಿಸಿಕೊಂಡು ಹೋಗಿ. ಅನ್‌ಟಚಬಿಲಿಟಿ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ಈ ಸಂವಿಧಾನದಲ್ಲಿ ಅವರಿಗೆ ಮೀಸಲಾತಿ ಇರಬೇಕೆಂದು ಹೇಳುತ್ತೇನೆ, ಮತ್ತು ಎಲ್ಲಾ ಜನರ ಪರವಾಗಿ ಬೆಂಬಲ ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯ ಮುಂದೆ ರಾಜ್ಯಾಂಗದ ೬೨ನೇ ತಿದ್ದುಪಡಿಯ ಒಪ್ಪಿಗೆಗಾಗಿ ಇಟ್ಟಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಮಾತನಾಡಿದ ನನ್ನ ಕೆಲವು ಸ್ನೇಹಿತರು ತಮ್ಮದೇ ಆದ ವಿಶ್ಲೇಷಣೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ

ಇಂದು ಸ್ವಾತಂತ್ರ್ಯ ಬಂದು ೪೩ ವರ್ಷಗಳ ನಂತರವೂ ಸಹ ೪೩ ವರ್ಷಗಳ ಹಿಂದೆ ಈ ಸಮಸ್ಯೆಗೆ ಯಾವ ಸ್ವರೂಪ ಇತ್ತು, ಯಾವ ಭಾವನೆ ಇತ್ತು ಅದು ಬದಲಾವಣೆಯಾಗತಕ್ಕ ಪರಿಸ್ಥಿತಿ ಇವತ್ತಿನ ದಿವಸವೂ ಇಲ್ಲ. ಈ ಕಾರಣದಿಂದ ಯಾವುದೇ ರಾಜಕೀಯ ಪಕ್ಷ ಆಡಳಿತಕ್ಕೆ ಬಂದಿದ್ದರೂ ಕೂಡ ಈ ಸಮಾಜದಲ್ಲಿರತಕ್ಕ ಅಸಮಾನತೆ ಏನಿದೆ, ಒಂದು ವರ್ಗದ ದೌರ್ಬಲ್ಯ ಏನಿದೆ ಅದನ್ನು ದುರುಪಯೋಗಪಡಿಸಿಕೊಳ್ಳತಕ್ಕ ಪ್ರಯತ್ನವನ್ನು ಸತತವಾಗಿ ಮಾಡಿಕೊಂಡು ಬರಲಾಗಿದೆ. ಇವತ್ತು ಇಲ್ಲಿ ತಂದಿರತಕ್ಕ ತಿದ್ದುಪಡಿಯೂ ಸಹ ಈ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳತಕ್ಕ ಉದ್ದೇಶದಿಂದ ತಂದಿದೆಯೇ ಹೊರತು ಬೇರೇನೂ ಅಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ೪೦ ವರ್ಷ ಎಂದು ಇದ್ದುದನ್ನು ೫೦ ವರ್ಷ ಎಂದು ಹೇಳುತ್ತಿದ್ದಾರೆ. ಇದಕ್ಕೆ ವೈಜ್ಞಾನಿಕವಾದ ಆಧಾರ ಏನಿದೆ? ರಾಜಕೀಯವಾಗಿ ಎಷ್ಟೆಷ್ಟು ದುರುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಆ ಎಲ್ಲ ಸಾಧ್ಯತೆಗಳನ್ನು ೪೩ ವರ್ಷಗಳಿಂದ ಈ ದೇಶದಲ್ಲಿ ಮಾಡಿಕೊಂಡು ಬಂದಿರತಕ್ಕದ್ದನ್ನು ನಮ್ಮ ಅನುಭವದಿಂದ ನೋಡುತ್ತಿದ್ದೇವೆ. ಇದು ಎಲ್ಲರಿಗೂ ಗೋಚರವಾಗುತ್ತಿದೆ. ಈ ತಿದ್ದುಪಡಿಯಲ್ಲಿ ಅಡಕವಾಗಿರತಕ್ಕದ್ದೂ ಇದೇ. ಈ ತಿದ್ದುಪಡಿಗಳು ಯಾವರೀತಿ ಬಳಕೆಯಾಗುತ್ತಿವೆ, ಇದರಿಂದ ನಮ್ಮ ಸಮಾಜ ಯಾವರೀತಿ ಮುಂದುವರೆಯುತ್ತಿದೆ ಎಂಬ ಅನುಭವದ ಆಧಾರದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದರೆ ಇನ್ನೂ ಸಂತೋಷ

ವಾಗುತ್ತಿತ್ತು. ಕೇವಲ ೪೦ ವರ್ಷವನ್ನು ೫೦ ವರ್ಷ ಎಂದು ಬದಲಾವಣೆ ಮಾಡತಕ್ಕ ಬೂಟಾಟಿಕೆಯ ಕ್ರಮ ಏನಿದೆ ಇದಕ್ಕೆ ಸಂಪೂರ್ಣವಾದ ವಿರಾಮವನ್ನು ಹಾಕುವುದಕ್ಕೆ ಸಾಧ್ಯವಿದೆ. ಆದರೆ ಆ ಇಚ್ಛಾಶಕ್ತಿ ಇವತ್ತು ಇಲ್ಲ. ಮೀಸಲಾತಿಯನ್ನು ಎಷ್ಟು ವರ್ಷದವರೆಗೆ ಮುಂದುವರೆಸಬೇಕು ಎಂಬುದಕ್ಕೆ ಒಬ್ಬೊಬ್ಬರು ಒಂದೊಂದು ವಿಧವಾದ ತರ್ಕಕ್ಕೆ ದೂರವಾಗಿರತಕ್ಕ ಅಂಶಗಳನ್ನು ಹೇಳುತ್ತಿದ್ದಾರೆ. ಅದನ್ನು ಬಿಟ್ಟು ವೈಜ್ಞಾನಿಕವಾದ ವಿಶ್ಲೇಷಣೆಗೆ ಈ ಸಮಸ್ಯೆಯನ್ನು ಒಳಪಡಿಸಿ ವೈಜ್ಞಾನಿಕ ಆಧಾರದ ಮೇಲೆ ಈ ಅವಧಿಯವರೆಗೆ ಮೀಸಲಾತಿ ಬೇಕಾಗುತ್ತದೆ ಎಂಬುದನ್ನು ಜಾರಿ ಮಾಡಬೇಕೆಂದು ಒತ್ತಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ತಂದಿರತಕ್ಕ ತಿದ್ದುಪಡಿ ಏನು? ಇವತ್ತು ಸಾಮಾಜಿಕವಾಗಿ, ರಾಜಕೀಯವಾಗಿ ಆರ್ಥಿಕವಾಗಿ ಈ ಮೂರೂ ಅಸಮಾನತೆಗಳಲ್ಲಿ ಕೇವಲ ಒಂದನ್ನು ಮಾತ್ರ ಈ ತಿದ್ದುಪಡಿಯಲ್ಲಿ ಸೀಮಿತ ಮಾಡಿದ್ದಾರೆ. ಈ ಮೂರರಲ್ಲೂ ಕೂಡ ಒಂದು ಪೂರಕವಾಗಿರತಕ್ಕದ್ದನ್ನು ಮರೆಯುವಂತಿಲ್ಲ. ಇವತ್ತು ಈ ವರ್ಗದಲ್ಲಿ ಸಾಮಾಜಿಕವಾಗಿ ಏನು ಹಿಂದುಳಿದಿದ್ದಾರೆ ಅವರು ಆರ್ಥಿಕವಾಗಿ ಕೂಡ ಹಿಂದುಳಿದಿದ್ದಾರೆ. ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಅವರು ರಾಜಕೀಯವಾಗಿಯೂ ಹಿಂದುಳಿದಿರುವುದನ್ನು ನಾವು ಮರೆಯಬಾರದು. ಆದ್ದರಿಂದ ಈ ತಿದ್ದುಪಡಿಯನ್ನು ಕೇವಲ ರಾಜಕೀಯ ಅಸಮಾನತೆಯನ್ನು ತೊಡೆದುಹಾಕುವುದಕ್ಕೆ ತಂದು ಈ ವರ್ಗಕ್ಕೆ ಅವಕಾಶ ಕಲ್ಪಿಸಿ ಕೊಡತಕ್ಕ ಪ್ರಯತ್ನ ನಡೆದಿದೆ. ಆದರೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳ ಬಗ್ಗೆ ಕೂಡ ಗಮನ ಹರಿಸಬೇಕಾಗಿರತಕ್ಕದ್ದು ಅತೀ ಅವಶ್ಯವಿದೆ. ಆರ್ಥಿಕ ಅಸಮಾನತೆ ಎಂದರೆ ನಮಗೆ ಗೊತ್ತಿರತಕ್ಕದ್ದು ನೌಕರಿ. ನೌಕರಿಯಲ್ಲಿ ಮೀಸಲಾತಿ ಎಂದು ಹೇಳುತ್ತೇವೆ. ನೌಕರಿ ಎಂದರೆ ಸರ್ಕಾರದ ಯಾವುದೇ ಇಲಾಖೆಯಲ್ಲಾಗಲೀ ಪಬ್ಲಿಕ್ ಸೆಕ್ಟರ್‌ನಲ್ಲಾಗಲೀ, ಇದಕ್ಕೆ ಸೀಮಿತವಾಗಿ ನೋಡುತ್ತೇವೆ. ಪ್ರೈವೇಟ್ ಸೆಕ್ಟರ್‌ನಲ್ಲಿ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಬಂಡವಾಳವನ್ನು ದೇಶದಲ್ಲಿ ತೊಡಗಿಸಿದ್ದಾರೆ. ಅಲ್ಲಿ ಇದರ ಸೊಲ್ಲೇ ಇಲ್ಲ. ಯಾವ ವಿಧವಾದ ರಿಸರ್ವೇಶನ್ ಆಗಲೀ ಅಲ್ಲಿಲ್ಲ. ಎಲ್ಲಿ ಹೆಚ್ಚು ಬಂಡವಾಳ ತೊಡಗಿಸಿದ್ದಾರೆ, ಎಲ್ಲಿ ಹೆಚ್ಚಿನ ಉತ್ಪತ್ತಿಯಾಗುತ್ತಿದೆ ಆ ವಲಯದಲ್ಲಿ ರಿಸರ್ವೇಷನ್ ಅನ್ನು ತೊಡಗಿಸದೇ ಇರತಕ್ಕ ಕಾರಣದಿಂದ ೪೩ ವರ್ಷಗಳಾದಮೇಲೂ ಸಹ ಈ ವರ್ಗಗಳಲ್ಲಿ ಅಸಮಾನತೆಯನ್ನು ಕಾಣುತ್ತಿದ್ದೇವೆ. ಇದು ಬಹಳ ಶೋಚನೀಯ ಎಂದು ನಾನಾದರೂ ಕೂಡ ಹೇಳಬೇಕಾಗುತ್ತದೆ.

೨-೦೦ ಪಿ. ಎಂ.

ಇನ್ನು ನಮ್ಮ ರಾಜ್ಯದ ಪಟ್ಟಿಗೆ ಹೇಳುವುದಾದರೆ ಈ ವರ್ಗಗಳಿಗೆ ಸೇರಬೇಕಾಗಿರತಕ್ಕ ಅರ್ಹತೆ ಇರತಕ್ಕ ಕೆಲವು ಜಾತಿಗಳು ಬಿಟ್ಟುಹೋಗಿವೆ. ನಮ್ಮ ಭಾಗದಲ್ಲಿ 'ನಾಯಕ ಬೇಡ' ಎಂದು ಕರೆಯತಕ್ಕ ಜಾತಿಗಳು ಹಾಗೂ ಇನ್ನಿತರ ಜಾತಿಗಳು ಈ ನಿಮ್ನ ವರ್ಗದ ಪಟ್ಟಿಯಲ್ಲಿ ಸೇರಬೇಕಾಗಿತ್ತು. ನಮ್ಮ ಭಾಗದಲ್ಲಿ ಇರುವ ಈ ಜನರ ಆಚಾರ ವ್ಯವಹಾರ ನೋಡುವುದಾದರೆ ನಿಮ್ನ ವರ್ಗದ ಪಟ್ಟಿಯಲ್ಲಿ ಯಾರಿದ್ದಾರೋ ಆ ವರ್ಗದವರಿಗೂ ಇವರಿಗೂ ಯಾವುದೇ ರೀತಿಯ ವ್ಯತ್ಯಾಸ ನನಗೆ ಕಾಣುತ್ತಾ ಇಲ್ಲ. ಯಾವುದೋ ಕಾರಣದಿಂದ ಈ ವರ್ಗದ ಪಟ್ಟಿಯಲ್ಲಿ ಆ ಜಾತಿಗಳು ಬಿಟ್ಟುಹೋಗಿವೆ. ಈ ರೀತಿ ಇನ್ನೂ ಕೆಲವು ಜಾತಿಗಳು ಬಿಟ್ಟುಹೋಗಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಈ ಜಾತಿಗಳನ್ನು ನಿಮ್ನ ವರ್ಗದ ಪಟ್ಟಿಯಲ್ಲಿ ಸೇರಿಸಬೇಕಾದ್ದು ಅವಶ್ಯ ಇದೆ. ಅದನ್ನು ಸರ್ಕಾರದವರು ಇವೊತ್ತು ಮನಗಾಣಬೇಕು. ಈ ಜಾತಿಗಳನ್ನು ನಿಮ್ನ ವರ್ಗದ ಪಟ್ಟಿಯಲ್ಲಿ ಸೇರಿಸಬೇಕಾದ ಅವಶ್ಯಕತೆ ಬಗ್ಗೆ ಕೇಂದ್ರ ಸರ್ಕಾರದ ಮನವೊಲಿಸತಕ್ಕ, ಗಮನ ಸೆಳೆಯತಕ್ಕ ಕೆಲಸ ಆಗಬೇಕಾಗಿದೆಯೆಂದು ಒತ್ತಿಒತ್ತಿ ಹೇಳುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಇವತ್ತು ಹೊಸದಾಗಿ ಕೆಲವು ಜಾತಿಗಳನ್ನು ಸೇರಿಸುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಹೊಸದಾಗಿ ಜಾತಿಗಳನ್ನು ಸೇರಿಸುವುದರ ಜೊತೆಗೆ ಮೀಸಲಾತಿಯ ಈಗಿನ ಶೇಕಡಾವಾರು ಪ್ರಮಾಣವನ್ನು ಆ ಜಾತಿಗಳಿಗೆ ಅನುಗುಣವಾಗಿ ಏರಿಸಬೇಕಾಗುತ್ತದೆ. ಇಲ್ಲದಿದ್ದರೆ ಜಾತಿಗಳು ಹೆಚ್ಚಾಗಿ ಯಾರಿಗೂ ಹೆಚ್ಚು ಪ್ರಯೋಜನವಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರು ಕೆಲವು ಜಾತಿಗಳನ್ನು ಹೊಸದಾಗಿ ಸೇರ್ಪಡೆ ಮಾಡುವುದರ ಜೊತೆಗೆ ಶೇಕಡಾವಾರು ಪ್ರಮಾಣವನ್ನೂ ಹೆಚ್ಚು ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಅದರ ಅವಶ್ಯಕತೆ ಇದೆ. ಈ ಎರಡೂ ಕೂಡಾ ಒಟ್ಟಿಗೇ ಆಗಬೇಕು. ಈಗ ಶೇಕಡ ೧೮ ಮತ್ತು ೩ ಎಂದು ಹೇಳಿ ೨೧ ಪರ್ಸೆಂಟ್ ಏನು ಇದೆ ಇದರ ಏರಿಕೆಯು ಕೆಲವು ಜಾತಿಗಳನ್ನು ಸೇರಿಸುವುದರ ಜೊತೆಯಲ್ಲೇ ಆಗಬೇಕು. ಈ ಬಗ್ಗೆ ನಾನು ನನ್ನ ಬೆಂಬಲವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಾನು ಹೇಳುತ್ತಿರುವ ಜಾತಿಯವರನ್ನು ಈ ವರ್ಗಕ್ಕೆ ಸೇರಿಸುವ ಅವಶ್ಯಕತೆ ಇದೆ. ಈ ವರ್ಗದ ಜನರು ಕಳೆದ

೪೩ ವರ್ಷಗಳಿಂದ ಮೀಸಲಾತಿಯಲ್ಲಿ ಸೇರದೆ ವಂಚಿತರಾಗಿದ್ದಾರೆ. ಇಂತಹ ಪರಿಸ್ಥಿತಿಯನ್ನು ಗಮನಿಸಿದಾಗ ಇಂತಹ ಜಾತಿಯವರು ಕಳೆದ ೪೩ ವರ್ಷಗಳಿಂದಲೂ ವಂಚಿತರಾಗಿರುವುದರಿಂದ ಇವರನ್ನು ತಕ್ಷಣ ಆ ವರ್ಗದಲ್ಲಿ ಸೇರಿಸಬೇಕೆಂದು ನಾನು ಪುನಃ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈ ಪಕ್ಷ ಆ ಪಕ್ಷ ಎನ್ನದೇ ಯಾವಾಗ ಅನುಕೂಲ ಆಗುತ್ತದೋ ಆಗ ಮಾತ್ರ ಈ ವರ್ಗಗಳನ್ನು ಈ ಜಾತಿಯನ್ನು ಜ್ಞಾಪಿಸಿಕೊಳ್ಳುವುದು ವಾಡಿಕೆಯಾಗಿದೆ. ಮಾನ್ಯ ಖರ್ಗೆಯವರು ಸ್ಪೆಷಲ್ ರೆಕ್ರೂಟ್‌ಮೆಂಟ್ ಡ್ರೈವ್ ನಡೆಸಿದೆವು ಎಂದು ಅವರು ಹೇಳಿದರು. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೋ ಎ.ಬಿ.ಸಿ.ಡಿ. ಎಂದು ಇಂಶಿಂತಹವರಿಗೆ ಇಂತಿಷ್ಟು ಪರ್ಸೆಂಟ್ ಎಂದು ಓದಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಪಾರ್ಲಿಮೆಂಟ್ ಡಿಬೇಟ್ ಓದಿದೆ.

ಶ್ರೀ ಸಿ. ಬೈರೇಗೌಡ.—ಇದು ಇವತ್ತು ನಿನ್ನೆ ಬಂದಿಲ್ಲ.

ಬಹಳ ವರ್ಷಗಳಿಂದ ಬಂದಿದೆ. ೪೩ ವರ್ಷಗಳಿಂದ ಬಂದಿದೆ. ಕೇಂದ್ರದಲ್ಲಿ ಕೇವಲ ಎರಡು—ಎರಡೂವರೆ ವರ್ಷಗಳ ಕಾಲ ಬಿಟ್ಟರೆ ಬೇರೆ ಯಾವ ಪಕ್ಷದ ಸರ್ಕಾರವೂ ಇರಲಿಲ್ಲ.

ಒಬ್ಬ ಮಾನ್ಯ ಸದಸ್ಯರು.—ರಾಜೀವ್‌ಗಾಂಧಿಯವರು ನಮ್ಮ ಮುಖಂಡರೆಂದು ಮರೆಯಬೇಡಿ...

ಶ್ರೀ ಸಿ. ಬೈರೇಗೌಡ.—ಇಲ್ಲಿ ಮೊದಲನೆಯ ಸ್ಥಾನದಲ್ಲಿ ಕುಳಿತಿರುವವರು ಸಹ ಕೇಂದ್ರ ಸರ್ಕಾರದಲ್ಲಿದ್ದರು. ಎರಡೂವರೆ ವರ್ಷಗಳ ಕಾಲ ಬಿಟ್ಟರೆ, ಈ ದೇಶವನ್ನು ಆಳುವ ಗುತ್ತಿಗೆಯನ್ನು ನೀವೇ ಪಡೆದಿದ್ದೀರಿ. ಆಗ ಈ ಮೀಸಲಾತಿಯ ಬಗ್ಗೆ ಯಾವ್ಯಾವ ವರ್ಗದಲ್ಲಿ ಎಷ್ಟೆಷ್ಟು ಪ್ರಾತಿನಿಧ್ಯವಿದೆ ಎನ್ನತಕ್ಕದ್ದು ನಿಮಗೆ ಏತಕ್ಕೆ ಜ್ಞಾಪಕ ಬರಲಿಲ್ಲ ? ಈಗ ಚುನಾವಣೆ ಹತ್ತಿರ ಬಂತು. ನಿಮ್ಮ ಸ್ಥಾನಕ್ಕೆ ಕುತ್ತು ಬರತಕ್ಕ ಚಿಹ್ನೆಗಳು ಅಲ್ಲಲ್ಲಿ ಗೋಚರವಾಯಿತು. ಪತ್ರಿಕೆಗಳಲ್ಲಿ ನಿಜಾಂಶಗಳು ಬರುವುದಕ್ಕೆ ಪ್ರಾರಂಭವಾಯಿತು. 'ಸಂಕಟ ಬಂದಾಗ ವೆಂಕಟರಮಣ' ಎನ್ನುವಂತೆ ನಿಮಗೆ ನಿಮ ವರ್ಗಗಳ ಜ್ಞಾಪಕ ಆಗ ಆಯಿತು. ಅದು ಸೆಪ್ಟೆಂಬರ್ ಒಳಗಾಗಿ ಆಯಿತು.

ಶ್ರೀ ಕೆ.ಹೆಚ್. ಪಾಟೀಲ್.—ತಮ್ಮ ಅಭಿಪ್ರಾಯ ಒಪ್ಪುವುದಾದರೆ ಇವತ್ತು ಶೇಕಡ ೫೦ರಷ್ಟು ಇಂತಹ ಜನರು ನಮ್ಮ ತಾಲ್ಲೂಕಿನಲ್ಲಿದ್ದಾರೆ. ಆದರೆ ನಾವು ಇಲ್ಲಿ ರ್‍ಯಾಟಿಫೈ ಮಾಡುವುದಕ್ಕೆ ಬರುವುದಿಲ್ಲ. ಸುಮ್ಮಸುಮ್ಮನೆ ಏನೋ ಕಲ್ಪರೆ ಮಾಡಬೇಡಿ, ಕಾಂಗ್ರೆಸ್ ಪಕ್ಷವು ರಾಜೀವ್‌ಗಾಂಧಿ ಅಧ್ಯಕ್ಷರಾಗುವದಕ್ಕಿಂತ ಮೊದಲಿನಿಂದಲೂ ಹಿಡಿದು ಅವರು ಬಿಡುವ ತನಕವೂ ನಿಶ್ಚಯವಾಗಿ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಕೊಡಬೇಕೆನ್ನುವ ಪಾಲಿಸಿಯನ್ನು ಇಟ್ಟಿದೆ. ಅವರಷ್ಟು ಖಚಿತವಾದ ಪಾಲಿಸಿಯನ್ನು ಯಾವ ಸರ್ಕಾರವೂ ಅಪೇಕ್ಷೆ ಮಾಡಿಲ್ಲ. ನಿಮ್ಮಲ್ಲಿ ಕೆಲವರು 'ಅ' ಅನ್ನುತ್ತಾರೆ ಮತ್ತೆ ಕೆಲವರು 'ಆ' ಎನ್ನುತ್ತಾರೆ. ಆದರೆ ನಮ್ಮಲ್ಲಿ ಎಲ್ಲಾ ಕಾಂಗ್ರೆಸ್ಸಿಗರು ಮೀಸಲಾತಿಗೆ ಒಪ್ಪಿದ್ದಾರೆ. ಇವತ್ತು ನಾವು ಅದಕ್ಕೆ ಒಪ್ಪಿಗೆ ಕೊಡುತ್ತೇವೆ. ನಾವು ಎರಡನೇ ಮಾತನಾಡುವುದಿಲ್ಲ. ನಾವು ಅನುಮೋದನೆ ಕೊಡುತ್ತೇವೆ. ಇದಕ್ಕಿಂತ ಹೆಚ್ಚು ಏನು ಬೇಕು.

ಶ್ರೀ ಸಿ. ಬೈರೇಗೌಡ.—ನೀವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಅವರು ಅಂಕಿ ಅಂಶವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾರ್ಲಿಮೆಂಟಿನ ಡಿಬೇಟ್‌ನಲ್ಲಿ ಪುಟ ೧೩೨ರಲ್ಲಿ ಇದರ ಬಗೆ ಸ್ಪಷ್ಟಪಡಿಸಿದ್ದಾರೆ. ಮೀಸಲಾತಿಯನ್ನು ಏತಕ್ಕೆ ಇನ್ನೂ ಎಕ್ಸ್‌ಟೆಂಡ್ ಮಾಡಬೇಕು. ಶೇಕಡ ೧೮ ರಷ್ಟು ಇರಬೇಕಾದ ಕಡೆ ಶೇಕಡ ೮.೩೨ ಮಾತ್ರ ಇದೆ. ''ಬಿ'' ಕ್ಯಾಟಗರಿಯಲ್ಲಿ ಶೇ. ೧.೪೮ ಆಗಿದೆ, ''ಸಿ'' ಕ್ಯಾಟಗರಿಯಲ್ಲಿ ೨.೮೫ ಆಗಿದೆ, ''ಡಿ'' ಕ್ಯಾಟಗರಿಯಲ್ಲಿ ಮಾತ್ರ ಶೇಕಡ ೨೦ ಆಗಿದೆ. ಅದಕ್ಕೇ ಇನ್ನೂ ಮೀಸಲಾತಿಯ ಅವಶ್ಯಕತೆ ಇದೆ. ಎನ್ನತಕ್ಕ ದೃಷ್ಟಿಯಿಂದ ಹೇಳಿದರು. ನೀವು ಏತಕ್ಕೆ ಮಾಡಲಿಲ್ಲ. ಬಹುಶಃ ನನ್ನನ್ನು ಅಲ್ಲಿ ಕೂರಿಸಿದರೆ ನಾನು ಮಾಡಿ ತೋರಿಸುತ್ತೇನೆ. ಏತಕ್ಕೆ ಅಂದರೆ ೧೯೭೬ರಲ್ಲಿ ನಾನು ಮಂತ್ರಿಯಾಗಿದ್ದಾಗ, ೧೮ ಸಾವಿರ ಟೀಚರ್ಸ್ ವೇಕನ್ಸಿ ಇತ್ತು, ಇಡೀ ದೇಶದಲ್ಲಿ ಯಾರು ಕೂಡ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ಪ್ರಾವಿಜನ್ ಮಾಡಿರಲಿಲ್ಲ. ನಾನು ಮತ್ತು ನಿಮ್ಮ ಜಿಲ್ಲೆಯ ವಕೀಲರಾದ ಬೈರಾರೆಡ್ಡಿಯವರು ಇಬ್ಬರು ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಲಿಕ್ಕೆ ರೂಲ್ಸ್ ಬದಲಾವಣೆ ಮಾಡಿಸಿ ೧೪ ಸಾವಿರ ಜನರಿಗೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿಸಿ ಉದ್ಯೋಗವನ್ನು ಕೊಟ್ಟಿದ್ದೇವೆ. ಮೊದಲನೆಯ ದರ್ಜೆಯಲ್ಲಿ ಪಾಸ್ ಮಾಡಿದವರಿಗೆ, ಕ್ಲಾಸ್ ೧, ಕ್ಲಾಸ್ ೨ ಹುದ್ದೆಗಳಿಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಂದು ಹೇಳಿದ್ದೀರಿ, ಆ ರೂಲ್ಸ್ ಎಲ್ಲಿದೆ ? ಅದನ್ನೂ ಕೂಡ ಮಾಡಲಿಲ್ಲ. ಬ್ಯಾಕ್‌ಲಾಗ್ ತುಂಬಲು ನೀವು ಪ್ರಯತ್ನ ಮಾಡಲಿಲ್ಲ. ನೀವು ಕೈ ಹಾಕಿದ್ದನ್ನು ಯಾವುದನ್ನು ಮಾಡಲಿಲ್ಲ, ಮತ್ತೆ ಬೇರೆಯದನ್ನು ಏಕೆ ಹೇಳುತ್ತೀರಿ ?

ಶ್ರೀ ಸಿ. ಬೈರೇಗೌಡ.—ಇದರ ನೆಸೆಸಿಟಿ ಬಗ್ಗೆ ನನಗಾಗಲೀ ಅಥವಾ ಈ ಕಡೆ ಕುಳಿತಿರುವ ಮಾನ್ಯ ಸದಸ್ಯರಿಗಾಗಲಿ ಚಕಾರ ಎತ್ತುವವರು ಇವತ್ತಿನ ದಿವಸ ಯಾರೂ ಇಲ್ಲ. ನಾನು ಹೇಳುವುದೇನೆಂದರೆ, ಈ ಸಮಸ್ಯೆಯು ಯಾವಾಗ ಗೋಚರವಾಗುತ್ತದೆ. ಆ ತಕ್ಷಣವೇ ಇದಕ್ಕೆ ಪರಿಹಾರ ಕಂಡುಹಿಡಿಯ ಬೇಕಾಗುತ್ತದೆ. ಎಲ್ಲಿ ಲೋಪವಾಗುತ್ತದೆ, ತಪ್ಪಾಗುತ್ತದೆ ಆಗಲೇ ತಕ್ಷಣ ಅದನ್ನು ಸರಿಪಡಿಸತಕ್ಕ ಕೆಲಸ ಆಗಬೇಕು. ಅದನ್ನು ವರ್ಷಾನುಗಟ್ಟಲೆ ಸರಿಪಡಿಸದೇ ಇದ್ದ ಕಾರಣ ಇವತ್ತಿನ ದಿವಸ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಇದನ್ನು ಬೆಳೆಸಲು ಯಾರು ಕಾರಣರು ? ನಾವು ಏಕೆ ಮಾಡಲಿಲ್ಲ ಅಂತ. ಇವತ್ತಿನ ದಿವಸ ನೀವು ಕೇಳುತ್ತೀರಿ ಇದಕ್ಕೆ ಕಾರಣ ಕೂಡ ತಮಗೆ ಗೊತ್ತಿದೆ. ನ್ಯಾಯಾಲಯದ ಮುಂದೆ ಈ ವಿಷಯ ಇದ್ದ ಕಾರಣ ಇದನ್ನು ಇತ್ಯರ್ಥ ಮಾಡಲಿಕ್ಕೆ ಆಗಲಿಲ್ಲ ಎನ್ನತಕ್ಕದ್ದು ತಮಗೆ ಗೊತ್ತಿದೆ ಇತ್ತೀಚೆಗೆ ಅದು ಏನಾಗಿದೆ ಗೊತ್ತಿಲ್ಲ, ನಾನು ಹೇಳತಕ್ಕದ್ದು ಇದರ ಉದ್ದೇಶ ಏನು ಎಂಬುದರ ಬಗ್ಗೆ. ಚುನಾವಣೆ ಬಂದಾಗ ಮಾತ್ರ ಇದು ಜ್ಞಾಪಕಕ್ಕೆ ಬರುತ್ತಿದೆ, ಬೇರೆ ಸಮಯದಲ್ಲಿ ಏಕೆ ಬರುವುದಿಲ್ಲ ? ಈ ಸಲ ನಿಮ್ಮ ಕಡೆಯ ೧೭೭ ಜನರನ್ನು ಜನರು ಆರಿಸಿ ಕಳಿಸಿದ್ದಾರೆ. ನಮ್ಮ ರಾಜ್ಯಪಾಲರ ಭಾಷಣವನ್ನು ಕೂಡ ನಾವು ಓದಿದ್ದೇವೆ. ಅದರ ಬಗ್ಗೆ ಇಲ್ಲಿ ಚರ್ಚೆಯಾಗಿದೆ ಮತ್ತು ನಾವು ಒಪ್ಪಿಗೆಯನ್ನು ಕೂಡ ಕೊಟ್ಟಿದ್ದೇವೆ. ಇದರಲ್ಲಿ ಎಲ್ಲಿಯಾದರೂ ಚಕಾರ ಎತ್ತಿದ್ದೀರಾ ? ನಿಮಗೆ ಅವಕಾಶ ಇದೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಗವರ್ನಮೆಂಟ್ ಆಫ್ ಇಂಡಿಯಾ ಲೆಜಿಸ್ಲೇಶನ್. ಅದು ಬೇರೆ ನೀವು ಹೇಳುತ್ತಿರುವುದು ಬೇರೆ ಇದು ಬೇರೆ. ಶ್ರೀ ರಾಜೀವ ಗಾಂಧಿಯವರು ೧೦ ವರ್ಷ ಎಕ್ಸ್‌ಟೆಂಡ್ ಮಾಡಬೇಕೆಂದು ಮೊದಲೇ ಹೇಳಿದ್ದರು. ಬಿಲ್ ಅನ್ನು ನೀವು ಇಂಟ್ರೋಡ್ಯೂಸ್ ಮಾಡಿದಿರಿ ಅಷ್ಟೆ

ಶ್ರೀ ಸಿ. ಬೈರೇಗೌಡ.—ನಾನು ಈ ಪ್ರಶ್ನೆಯನ್ನು ಎತ್ತಿದಾಗ ತಾವು ಇದು ಕೇಂದ್ರ ಸರ್ಕಾರದ ಲೆಜಿಸ್ಲೇಶನ್ ಎಂದು ಹೇಳುತ್ತೀರಿ. ಅದಕ್ಕೆ ಮೊದಲು ಸ್ಪೆಶಲ್ ರಿಕ್ರೂಟ್‌ಮೆಂಟ್‌ನಲ್ಲಿ, ಫಸ್ಟ್ ರ‍್ಯಾಂಕ್ ಬಂದವರಿಗೆ ಕೆಲಸ ಕೊಡಲಿಲ್ಲ, ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದನ್ನು ಮಾಡಲಿಲ್ಲ ಎಂದು ತಾವು ಹೇಳಿದಿರಿ. ಈ ಪ್ರಶ್ನೆಯನ್ನು ಇಲ್ಲಿ ಏಕೆ ಕೇಳುತ್ತೀರಿ ? ಅದನ್ನು ಪಾರ್ಲಿಮೆಂಟ್‌ನಲ್ಲಿ ಕೇಳಬೇಕಿತ್ತು ?

SRI M. MALLIKARJUNA KHARGE.—Sir, he is not understanding the Constitutional point. Any state can make special provisions in favour of backward classes or SCs and STs. Under that provision we have made it. Article 334 deals with extension of the facility, but it is nothing to do with Articles 16 (4) and 15 (4). I do not know why he says like this.

ಶ್ರೀ ಸಿ. ಬೈರೇಗೌಡ.—ನಾನು ಹೇಳಿದ್ದು ಸಂಕಟ ಬಂದಾಗ ವೆಂಕಟರಮಣ ಅಂತ ಯಾವಾಗ ಇವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ, ಆವಾಗ ಮಾತ್ರ ಉಪಯೋಗಿಸಿಕೊಳ್ಳುವ ಈ ಉದ್ದೇಶ ಏನಿದೆ, ಈ ಸಮಾಜದಲ್ಲಿರತಕ್ಕಂಥ ಈ ಲೋಪ ಏನಿದೆ, ಈ ಅಸಮಾನತೆ ಏನಿದೆ, ಇದನ್ನು ಹೋಗಲಾಡಿಸತಕ್ಕಂಥ ಪ್ರಾಮಾಣಿಕ ಪ್ರಯತ್ನ ಆಗಬೇಕು ಎನ್ನುವುದು ನನ್ನ ಮಾತಿನ ಉದ್ದೇಶ ಆಗಿದೆ. ಇದಕ್ಕೆ ಮಾನ್ಯ ಸ್ನೇಹಿತರಾದ ಶ್ರೀ ಖರ್ಗೆಯವರ ತಕರಾರು ಇಲ್ಲವೆಂದು ನನ್ನ ಭಾವನೆ, ಇದರಿಂದ ಏನೂ ಸಾಧನೆಯಾಗುವುದಿಲ್ಲ. ಮುಂದೆಯೂ ಇದೇರೀತಿಯಾಗಿ ನಡೆದರೆ, ಯಾವ ಪದವನ್ನು ಬಳಸಿ ಹೇಳಬಹುದೋ ಅದನ್ನು ಉಪಯೋಗಿಸುವುದಕ್ಕೆ ನಾನು ತಯಾರಿಲ್ಲ. ಇದು ಚಾಕಲೇಟ್ ಹಂಚತಕ್ಕ ಕೆಲಸದಂತೆ ನಡೆಯುತ್ತಿದೆ. ಈ ಚಾಕಲೇಟ್ ಹಂಚತಕ್ಕ ಕೆಲಸ ನಿಲ್ಲಬೇಕು ಎಂದು ನನ್ನ ಅಭಿಪ್ರಾಯವನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ವಿಧಾನ ಸಭೆಯಲ್ಲಿ ಈ ಮೀಸಲಾತಿ ಸೌಲಭ್ಯವನ್ನು ವಿಸ್ತರಿಸುವ ವಿಧೇಯಕವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಸಭೆಯ ಮುಂದಿಡುವುದಕ್ಕೆ ಬಯಸುತ್ತೇನೆ ಪ್ರಪ್ರಥಮವಾಗಿ ಈ ದೇಶದಲ್ಲಿ ಮೀಸಲಾತಿ ಪದ್ಧತಿ ಇರಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ನಮ್ಮ ರಾಷ್ಟ್ರೀಯರಂಗದ ಸರ್ಕಾರದವರು ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಕೂಡ ಸಂಪೂರ್ಣವಾದ ಈ ವಿಧೇಯಕವನ್ನು ಮಂಡಿಸಿ, ಅಲ್ಲಿ ಪಾಸಾದ ಮೇಲೆ ಇಲ್ಲಿಗೆ ಕಳಿಸಿಕೊಟ್ಟಿದ್ದಾರೆ. ಇದು ಬಹಳ ಸಂತೋಷಪಡುವಂತಹ ವಿಷಯ. ಎರಡನೇಯದಾಗಿ ನಮ್ಮ ದೇಶ ಬಹಳ ಪುರಾತನಕಾಲದ ದೇಶ

ವಾಗಿದ್ದು, ಹಲವಾರು ಜಾತಿ, ಧರ್ಮಗಳ ಬೀಡಾಗಿದೆ. ಈ ದೇಶದಲ್ಲಿ ಜಾತಿ ಪದ್ಧತಿ ಹೋಗಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಹಲವಾರು ರಾಷ್ಟ್ರ ಪುರುಷರು ಧಾರ್ಮಿಕ ಪುರುಷರು ಈ ಜಾತಿ ಪದ್ಧತಿಯನ್ನು ಹೋಗಲಾಡಿಸುವ ಪ್ರಯತ್ನ ಪಟ್ಟರೂ ಕೂಡ ಇದು ಸಾಧ್ಯವಾಗಲಿಲ್ಲ ಎನ್ನುವ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಮೀಸಲಾತಿ ಪದ್ಧತಿ ಅವಶ್ಯಕ ಎಂಬ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ.

ಎರಡನೆಯದಾಗಿ, ನಮ್ಮ ದೇಶದ ಧಾರ್ಮಿಕ ಮುಖಂಡರುಗಳಾದ ಬಾಬಾ ಸಾಹೇಬ, ಅಂಬೇಡ್ಕರ್, ಬಸವೇಶ್ವರರು ಮತ್ತು ಬುದ್ಧ ಮುಂತಾದ ಕ್ರಾಂತಿಕಾರಿ ಮಹಾಪುರುಷರು ಈ ಜಾತೀಯ, ಪದ್ಧತಿಯನ್ನು ಹೋಗಲಾಡಿಸಬೇಕು, ಎಂದು ಹಲವಾರು ನಿರೂಪಣೆಗಳನ್ನು ನೀಡಿ ಈ ಸಮಾಜದಲ್ಲಿ ಆಗಿಹೋಗಿದ್ದಾರೆ. ಇವರುಗಳು ಎಷ್ಟೇ ಪ್ರಯತ್ನಪಟ್ಟರೂ ಕೂಡ ಈ ಕಾರ್ಯದಲ್ಲಿ ಯಶಸ್ವಿಯಾಗುವುದಕ್ಕೆ ಆಗಲಿಲ್ಲ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ರಾಷ್ಟ್ರೀಯ ರಂಗದ ಸರ್ಕಾರದವರು ಸಂಸತ್ತಿನಲ್ಲೇ ಈ ವಿಧೇಯಕವನ್ನು ಮಂಡಿಸಿದ್ದಾರೆ. ಅದೇರೀತಿ, ವಿಧಾನ ಸಭೆಯಲ್ಲೂ ಈ ವಿಧೇಯಕದ ಬಗ್ಗೆ ಚರ್ಚೆ ಮಾಡುತ್ತಿರುವುದು ತುಂಬಾ ಸಂತೋಷವಾದ ವಿಚಾರ ಎಂದು ಹೇಳುತ್ತೇನೆ. ಇವತ್ತು ಸಮಾಜದಲ್ಲಿರತಕ್ಕ ಕಡುಬಡವರು, ಶೋಷಿತ ವರ್ಗದವರು, ದೀನದಲಿತರು ಯಾರಿದ್ದಾರೆ ಅವರ ಏಳಿಗೆಗೋಸ್ಕರ, ೪೩ ವರ್ಷಗಳಿಂದ ಸರ್ಕಾರದವರು ಸಾಕಷ್ಟು ಪ್ರಯತ್ನಪಟ್ಟರೂ ಕೂಡ ಇವತ್ತಿನವರೆಗೂ ಈ ಜಾತಿ ಪದ್ಧತಿ ಬೆಳೆಯುತ್ತಾ ಇರುವುದು ಖಂಡನೀಯ. ನಮ್ಮ ರಾಜ್ಯದಲ್ಲೂ ಈ ಮೀಸಲಾತಿ ಪದ್ಧತಿ ಇದ್ದರೆ ಒಳ್ಳೆಯದು, ಅದಕ್ಕಾಗಿಯೇ ಇವತ್ತು ವಿಧಾನ ಸಭೆಯ ಎಲ್ಲಾ ಪಕ್ಷದ ಸದಸ್ಯರೂ ಕೂಡ ತಮ್ಮ ಸಂಪೂರ್ಣವಾದ ಬೆಂಬಲವನ್ನು ಇದಕ್ಕೆ ವ್ಯಕ್ತಪಡಿಸಿದ್ದಾರೆ ನಾನೂ ಕೂಡ ಈ ವಿಧೇಯಕಕ್ಕೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತ ಪಡಿಸುತ್ತೇನೆ. ಕಳೆದ ಹಲವಾರು ವರ್ಷಗಳಿಂದಲೂ ನಮ್ಮ ದೇಶದಲ್ಲಿ ಈ ಮೀಸಲಾತಿ ಪದ್ಧತಿಯನ್ನು ಸಂಪೂರ್ಣವಾಗಿ. ಕಟ್ಟುನಿಟ್ಟಾಗಿ ಜಾರಿಗೆ ತರಲಿಲ್ಲ. ಮಾನ್ಯ ಭೈರೇಗೌಡರೂ ಕೂಡ ಇದರ ಬಗ್ಗೆ ನಿಜವಾದ ಕಳಕಳಿ ತೋರಿಸುತ್ತಾ ಇಲ್ಲವೆಂದು ಹೇಳಿದರು. ಚುನಾವಣೆಗಳು ಬರುವಂಥ ಸಂದರ್ಭದಲ್ಲಿ ಇಂತಹ ವಿಷಯಗಳನ್ನು ತರುವಂಥ ಪದ್ಧತಿಯನ್ನು ನಾವು ಅಳವಡಿಸಿಕೊಂಡು ಬಂದಿದ್ದೇವೆ. ನಾವು ಇದೇರೀತಿ ಹೋದರೆ ಇನ್ನು ನೂರು ವರ್ಷಗಳೂ ಕಳೆದರೂ ಈ ಮೀಸಲಾತಿ ಪದ್ಧತಿ ಸರಿಯಾಗಿ ಜಾರಿಗೆ ಬರುವುದಿಲ್ಲ. ಈ ಸಂದರ್ಭದಲ್ಲಿ, ನಮ್ಮ ದೇಶದ ಸಂಸತ್ತಿನಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಿದ್ದಾರೆ. ಆದರೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಇದಕ್ಕೆ ವಿರುದ್ಧವಾಗಿ ಚಳುವಳಿಯನ್ನು ಮಾಡುತ್ತಿರುವುದು ಖಂಡನೀಯ. ಇದು ರಾಜಕೀಯ ದುರುದ್ದೇಶದಿಂದ ಕೂಡಿದ್ದು ಎಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಈ ಮೀಸಲಾತಿ ಪ್ರಮಾಣ ಇನ್ನೂ ಹೆಚ್ಚಬೇಕು. ಈ ಬಗ್ಗೆ ಪ್ರಮುಖವಾಗಿ, ಶಾಸನಸಭಾ ಸದಸ್ಯರು, ಮತ್ತು ಮಂತ್ರಿಗಳೂ ಕೂಡ ಮಾತನಾಡಿದ್ದಾರೆ. ಸರ್ಕಾರದ ಕೆಲಸ ದೇವರ ಕೆಲಸ ಎಂದು ಹೇಳಿದ್ದಾರೆ. ಇದರ ಬಗ್ಗೆ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಸರ್ಕಾರದವರು ಮೀಸಲಾತಿಯ ವಿಷಯದಲ್ಲಿ, ಹಾಗೂ ಜಾತೀಯ ಮನೋಭಾವನೆಗಳನ್ನು ಹೋಗಲಾಡಿಸುವ ಸಲುವಾಗಿ, ಕಟ್ಟುನಿಟ್ಟಾಗಿ, ಕಠಿಣ ಕಾರ್ಯಕ್ರಮ ತೆಗೆದುಕೊಂಡು ಈ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಜಾರಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ೪೩ ವರ್ಷಗಳು ಕಳೆದರೂ ಮತ್ತು ಈ ಮೀಸಲಾತಿ ಪದ್ಧತಿಯನ್ನು ಜಾರಿಗೆ ತಂದರೂ ಕೂಡ ಇವತ್ತು ಎಷ್ಟೋ ಜನರಿಗೆ ಈ ಸೌಲಭ್ಯವನ್ನು ಕೊಡುವುದಕ್ಕಾಗಿಲ್ಲ. ಈ ದಿಸೆಯಲ್ಲಿ ಇನ್ನು ಮುಂದೆಯಾದರೂ ನಮ್ಮ ದೇಶದ ಪ್ರಧಾನ ಮಂತ್ರಿಗಳು, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ವಿಚಾರದ ಕಡೆಗೆ ಗಮನಹರಿಸಿ, ಮೀಸಲಾತಿ ಪದ್ಧತಿಯನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕು. ಸಂಬಂಧಪಟ್ಟ ಮಂತ್ರಿಗಳು ಸಹ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡಿ, ಸಂಬಂಧಪಟ್ಟ ಇಲಾಖೆಯನ್ನು ಹತೋಟಿಯಲ್ಲಿಟ್ಟುಕೊಂಡು, ಬಿಗಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ಸರ್ಕಾರದವರು ಕೂಡ ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಜಾರಿಗೆ ಬರುವಂತೆ ಮಾಡಿ, ಸಂಬಂಧಪಟ್ಟವರಿಗೆ ಇದರ ಲಾಭ ಮುಟ್ಟುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಾನು ಈ ವಿಷಯದಲ್ಲಿ ವಿಶೇಷವಾಗಿ ಹೆಚ್ಚು ಮಾತನಾಡುವುದಕ್ಕೆ ಬಯಸುವುದಿಲ್ಲ. ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಮೀಸಲಾತಿ ಪದ್ಧತಿಯನ್ನು ಇನ್ನೂ ೧೦ ವರ್ಷಗಳ ಕಾಲ ಮುಂದುವರೆಸಿದರೆ ಪ್ರಯೋಜನವಾಗುವುದಿಲ್ಲ. ಎಲ್ಲಿಯವರೆಗೆ ಈ ಜಾತಿ ಪದ್ಧತಿ ಇರುತ್ತದೋ, ಅಲ್ಲಿಯವರೆಗೆ ಈ ಮೀಸಲಾತಿ ಪದ್ಧತಿ ಇರಬೇಕೆಂದು ಹೇಳುತ್ತೇನೆ. ಇವತ್ತು ಈ ಮೀಸಲಾತಿ ವಿಧೇಯಕಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಪರ್ಯಾರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು, ಈ ಮೀಸಲಾತಿಯ 62ನೇ ತಿದ್ದುಪಡಿ ವಿಧೇಯಕಕ್ಕೆ ಭಾರತೀಯ ಜನತಾ ಪಕ್ಷದ ಪರವಾಗಿ ಬೆಂಬಲವನ್ನು ಘೋಷಣೆ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿಯವರೆಗೆ ಈ ಜಾರಿಗೆ ಮೀಸಲಾತಿಯನ್ನು ಮುಂದುವರಿಸಬೇಕು, ಎಲ್ಲಿಯವರೆಗೆ ಈ ಮೀಸಲಾತಿ ಹರಿಜನ ಗಿರಿಜನರಿಗೆ ಹಾಗೂ ದುರ್ಬಲವರ್ಗದವರಿಗೆ ಇದೇ ರೀತಿಯಾಗಿ ಮುಂದುವರೆಯಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಕೇವಲ ಕೆಲವು ಸವಲತ್ತುಗಳನ್ನು ಕೊಟ್ಟು, ಮತ್ತೆ ಮತ್ತೆ ಅವರು ಇದೇ ಸ್ಥಿತಿಯಲ್ಲಿ ಮುಂದುವರಿಯುವುದಕ್ಕೆ ಯಾರು ಕಾರಣ ? ಈ ಬಗ್ಗೆ ಸ್ವಲ್ಪ ಗಮನ ಕೊಡಬೇಕಾಗಿದೆ. ಇವರಿಗೆ ಸರ್ಕಾರ ಕೆಲವು ಸವಲತ್ತುಗಳನ್ನು ಕೊಟ್ಟು, ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೆ ಈ ಜನರನ್ನು ಇದೇರೀತಿ ಇಟ್ಟುಕೊಂಡು ಹೋಗುತ್ತಿರುವುದು ತುಂಬಾ ದುರ್ದೈವ. ದುರ್ಬಲ ವರ್ಗದವರು ಏನು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಅದನ್ನು ನಿವಾರಣೆ ಮಾಡಿ ಸಮಾಜದಲ್ಲಿ ಅವರೂ ಕೂಡಾ ತಲೆ ಎತ್ತುವ ರೀತಿಯಲ್ಲಿ, ಅವರೂ ಸಹ ಬಲಿಷ್ಠರಾಗಿ ಸಮಾಜದಲ್ಲಿ ಸಮಾನ ರೀತಿಯಲ್ಲಿ ಬಾಳುವುದಕ್ಕೆ ನಾವೆಲ್ಲಾ ಗಮನ ಕೊಟ್ಟರೆ ಇದು ಸಾರ್ಥಕವಾಗುತ್ತದೆ. ಕೇವಲ ಹತ್ತು ವರ್ಷ ಇಪ್ಪತ್ತು ವರ್ಷ ಎಂದು ಈ ರೀತಿ ಮೀಸಲಾತಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಏನೂ ಸುಧಾರಣೆ ಆಗುವುದಿಲ್ಲ. ಅವರಿಗೆ ಕೊಡಬೇಕಾದ ಸವಲತ್ತುಗಳನ್ನು ಕೊಡದೇ, ಸಮಾಜದಲ್ಲಿ ಅವರನ್ನು ಸಮಾನ ರೀತಿಯಲ್ಲಿ ಕಾಣುವುದರಲ್ಲಿ ನಮ್ಮ ಹಿಂದಿನ ಕಾಂಗ್ರೆಸ್ ಸರಕಾರ ಸಾಕಷ್ಟು ವಿಫಲವಾಗಿತ್ತು. ಇದು ಸರಕಾರದ ವಿಫಲತೆಯನ್ನು ಎತ್ತಿತೋರಿಸುತ್ತಿದೆ ಎಂದು ಹೇಳಿ, ಈ ದೃಷ್ಟಿಯಲ್ಲಿ ಇದನ್ನು ಖಂಡನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಲಹೊರುವ ಪದ್ಧತಿ ಇರಲಿ, ತೆಂಗಿನ ಚಿಪ್ಪಿನಲ್ಲಿ ಕಾಫಿ ಕೊಡತಕ್ಕಂಥ ಪದ್ಧತಿ ಇರಬಹುದು ಅನೇಕ ಹೋಟೆಲ್‌ಗಳಲ್ಲಿ ಅವರನ್ನು ಒಳಗಡೆ ಸೇರಿಸದೇ ಹೊರಗೆ ಇಟ್ಟು ಅಲ್ಯೂಮಿನಿಯಂ ಲೋಟಾಗಳಲ್ಲಿ ಕಾಫಿ ಕೊಟ್ಟು, ಅವರಿಗೆ ತೊಂದರೆ ಕೊಡುತ್ತಿರುವ ಪದ್ಧತಿ ನೋಡಿದರೆ, ನಮ್ಮ ಸಮಾಜ ಯಾವ ರೀತಿಯಲ್ಲಿದೆ ಎಂಬುದನ್ನು ನಾವು ನೋಡಬಹುದು. ಇದನ್ನು ಎಲ್ಲ ಶಾಸಕರು ಗಮನಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಚುನಾವಣೆಯ ಸಂದರ್ಭದಲ್ಲಿ ನಾವು ಹರಿಜನ ಕಾಲೋನಿಗಳಿಗೆ ಹೋದಾಗ ಅಲ್ಲಿ ನೀರೂ ಕೂಡಾ ಸಿಗದಿರುವಂತಹ ಸಂದರ್ಭ ನೋಡುತ್ತಿದ್ದೇವೆ. ಅಲ್ಲಿ ಕುಡಿಯುವ ನೀರೂ ಕೂಡಾ ಸಿಗುವುದಿಲ್ಲ. ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹನುಮಘಟ್ಟ ಎಂಬ ಒಂದು ಹಳ್ಳಿಯಲ್ಲಿ ಗಂಗಾಕಲ್ಯಾಣ ಯೋಜನೆ ಕೆಳಗೆ ತೆಗೆದ ಬಾವಿಯಲ್ಲಿ ನೀರು ಸಿಕ್ಕಿದೆ. ಈ ರೀತಿ ಸಿಕ್ಕಿರತಕ್ಕಂಥ ನೀರನ್ನೂ ಕೂಡಾ ಹರಿಜನರು ಬಳಸಿಕೊಳ್ಳಕೂಡದು ಎಂಬ ಸಂದರ್ಭ ಇವತ್ತಿಗೂ ಕೂಡಾ ಜಾರಿಯಲ್ಲಿರುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಚುನಾವಣೆ ಬಂದಾಗ ಈ ಒಂದು ದುರ್ಬಲವರ್ಗದವರನ್ನು ಬಳಸಿಕೊಂಡು, ಯಾರೋ ಒಬ್ಬರು ಮಂತ್ರಿಗಳಾಗುವುದಕ್ಕೆ ಪ್ರಯತ್ನಿಸುತ್ತಾರೆ. ಈ ರೀತಿಯಾಗಿ ಈ ವರ್ಗದವರನ್ನು ಬಳಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಒಬ್ಬ ವ್ಯಕ್ತಿ ದೊಡ್ಡವನಾಗುವುದಕ್ಕೆ ಮಾಡುತ್ತಿರುವ ಪ್ರಯತ್ನ ಇದಾಗಿದೆ. ಈ ದೃಷ್ಟಿಯಿಂದ ಸಮಾಜದಲ್ಲಿರುವ ಅದೇ ವರ್ಗದ ಕೆಲವು ಜನರು, ಅದೇ ವರ್ಗದ ಜನರನ್ನು ಇದೇರೀತಿ ತುಳಿದಿಟ್ಟುಕೊಂಡು ತಾವು ಮಾತ್ರ ದೊಡ್ಡವರಾಗುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ, ಇದು ತುಂಬಾ ಖಂಡನೀಯವಾದುದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮಾಜ ಒಂದಾಗಬೇಕು ಯಾರು ಯಾರು ತುಳಿಯಲ್ಪಟ್ಟಿದ್ದಾರೆ ಅಂತಹ ವ್ಯಕ್ತಿಗಳನ್ನು ಮೇಲಕ್ಕೆತ್ತಿ ಅವರನ್ನು ಸಮಾನವಾಗಿ ನೋಡಿಕೊಂಡು ಹೋಗಬೇಕು. ಹಿಂದೂ ಸಮಾಜ ಒಂದಾಗಬೇಕು. ಈ ದೃಷ್ಟಿಯಿಂದ ಸ್ವಾಮಿ ಚಿನ್ಮಯಾನಂದ ಅವರು, ಪೇಜಾವರ ಮಠಾಧೀಶರು ಮಾಡುತ್ತಿರುವ ಪ್ರಯತ್ನವನ್ನು ರಾಜಕೀಯ ದೃಷ್ಟಿಯಿಂದ ನೋಡದೆ ಅವರಿಗೆ ನಮ್ಮ ಬೆಂಬಲವನ್ನು ಕೊಟ್ಟರೆ ಈ ನಮ್ಮ ಸಮಾಜಕ್ಕೆ ಲಾಭವಾಗುತ್ತದೆ ಸಮಾಜದಲ್ಲಿ ಸಮಾನತೆ ಬರಬೇಕೆ ಬುದನ್ನು ನಾನು ಈ ದೃಷ್ಟಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯರಾದಂಥ ಬಂಗಾರಪ್ಪನವರು ಹಾಗೂ ಖರ್ಗೆಯವರು ಮಾತನಾಡುತ್ತಾ ಈ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿಸಿದರು. ಜ್ಯುಡಿಷಿಯರಿನಲ್ಲಿ ಸಮಾನತೆ ಇಲ್ಲ, ರಾಜ್ಯಸಭೆಯಲ್ಲಿ ಇವರಿಗೆ ಪ್ರಾತಿನಿಧ್ಯ ಇಲ್ಲ, ಎಜುಕೇಷನ್‌ನಲ್ಲಿ ಇಲ್ಲ ಎಂಬ ಮಾತನ್ನು ಒತ್ತೊತ್ತಿ ಹೇಳಿದರು. ಇದೇ ರೀತಿ ಎಲ್ಲಾ ರಾಜಕಾರಣಿಗಳು ಹೇಳುತ್ತಾ ಹೋದರೆ ಸಾಲದು. ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನ ವರೆಗೂ ಪ್ರಮುಖವಾಗಿ ಕಾಂಗ್ರೆಸ್ ಪಕ್ಷ ಈ ದೇಶವನ್ನು ಆಳುತ್ತಾ ಬಂದಿದೆ. ಈ ದೃಷ್ಟಿಯಿಂದ ಸಮಾಜ ಈ ರೀತಿ, ಈ ಸ್ಥಿತಿಯಲ್ಲಿರುವುದಕ್ಕೆ ಕಾಂಗ್ರೆಸ್ ಪಕ್ಷವೇ ಪ್ರಮುಖ ಕಾರಣ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಂಗ್ರೆಸ್ ಪಕ್ಷ ಮಾಡಿದ ತಪ್ಪನ್ನು ಜನತಾದಳ ಸರಕಾರ ಮಾಡುತ್ತದೆ ಎನ್ನುವುದನ್ನು ನಾನು ಹೇಳದೇ ಇದು ಪೂರ್ತಿಯಾಗಿ ಹೋಗಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.— ಈ ನಮ್ಮ ಸಮಾಜದ ಜನರಲ್ಲಿ ಹೆಚ್ಚಿನ ತಿಳುವಳಿಕೆ ಇಲ್ಲದೆ, ನಮ್ಮ ಸಮಾಜದ ವ್ಯವಸ್ಥೆ ಈ ರೀತಿ ನಡೆದುಕೊಂಡು ಬಂದಿದೆ. ಅವರನ್ನು ಈ ರೀತಿ ಇಟ್ಟಿದ್ದಾರೆ. ಸಮಾಜದಲ್ಲಿ ಬದಲಾವಣೆಯಾಗದೆ ಸಮಾನತೆ ಸಿಗುವುದಿಲ್ಲ. ಅದನ್ನು ಮೊದಲು ಮಾಡಬೇಕು ಸಮಾಜದಲ್ಲಿ ಬದಲಾವಣೆಯಾಗಬೇಕು, ಅದನ್ನು ಬಿಟ್ಟು ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ. ಜನತಾ ಪಕ್ಷ ಎಂದು ಹೇಳಿದರೆ ಆಗುವುದಿಲ್ಲ. ಅವರು ವಾಸ್ತವವಾಗಿ ಮಾತನಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಈಶ್ವರಪ್ಪ.— ನಾನು ಏತಕ್ಕೆ ಈ ಅಂಶವನ್ನು ಒತ್ತಿ ಒತ್ತಿ ಹೇಳುತ್ತಿದ್ದೇನೆ ಎಂದರೆ, ಈ ರೀತಿ ಆಗಿದೆ ಎಂಬ ಅಂಶವನ್ನು ಮತ್ತೆಮತ್ತೆಹೇಳುತ್ತಿರುವವರು ಕಾಂಗ್ರೆಸ್ ಪಕ್ಷದವರು. ದುರ್ಬಲವರ್ಗದವರು ಏನು ಕಷ್ಟ ಅನುಭವಿಸುತ್ತಿದ್ದಾರೆ ಎಂಬುದನ್ನು ಅವರೇ ಹೇಳಿದರು. ಇದಕ್ಕೆ ಪ್ರಮುಖ ಕಾರಣ ಅವರೇ ಯಾರು ಕಾನೂನಿಗೆ ವಿರುದ್ಧವಾಗಿ ಹೋಗುತ್ತಿದ್ದಾರೆ ಅವರನ್ನು ಕಾನೂನು ಪ್ರಕಾರ ಶಿಕ್ಷೆ ಮಾಡುವ ಹಕ್ಕು ಮತ್ತು ಅಧಿಕಾರ ಇವರಿಗೆ ಇತ್ತು. ಆಗ ಅದನ್ನು ಬಳಸದೇ ಈಗ ಇವತ್ತು ಇಲ್ಲಿ ಬಂದು ಭಾಷಣ ಮಾಡುವುದು ಶೋಚನೀಯ ಎಂದು ಹೇಳುತ್ತೇನೆ. ಎಲ್ಲರೂ ಸೇರಿ ಒಟ್ಟಾಗಿ ಬದಲಾವಣೆ ಮಾಡಿದರೆ ಇದು ಆಗುತ್ತದೆ ಎಂದು ಹೇಳಿ, ಭಾರತೀಯ ಜನತಾಪಕ್ಷದ ಪರವಾಗಿ ಈ ತಿದ್ದುಪಡಿಗೆ ಬೆಂಬಲವನ್ನು ಸೂಚಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಸರ್ಕಾರ ತಂದಿರತಕ್ಕಂಥ ತಿದ್ದುಪಡಿಗೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತಾ, ಈ ಒಂದು ಬಹಳ ಗಹನವಾದ ವಿಚಾರವನ್ನು ಚರ್ಚೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ. ಈ ಸಭೆಯಲ್ಲಿ ಕೇವಲ ೫೦ ಜನ ಸದಸ್ಯರು ಮಾತ್ರ ಇದ್ದಾರೆ. ಇನ್ನುಳಿದ ೧೫೦ ಜನ ಸದಸ್ಯರು ಎಲ್ಲಿ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಪರಿಣಾಮಕಾರಿಯಾದಂಥ ವಿಷಯ ಚರ್ಚೆ ಆಗುತ್ತಿರಬೇಕಾದರೆ ಎರಡೂ ಕಡೆ ಸೇರಿ ಐವತ್ತು ಜನ ಸದಸ್ಯರು ಮಾತ್ರ ಇದ್ದಾರೆ. ಉಳಿದವರು ಊಟಕ್ಕೆ ಹೋಗಿರಬಹುದು. ಅವರಿಗೆ ಈ ಸಮಸ್ಯೆ ಬಗ್ಗೆ ಕಳಕಳಿ ಇಲ್ಲ ಎನ್ನುವುದು ವ್ಯಕ್ತವಾಗುತ್ತದೆ. ನಾನಂತೂ ಬಹಳ ನೋವಿನಿಂದ ಈ ಮಾತನ್ನು ಹೇಳಬೇಕಾಗುತ್ತದೆ ಈ ಒಂದು ತಿದ್ದುಪಡಿ ಬಗ್ಗೆ ಬಹುಶಃ ಯಾರದೂ ಭಿನ್ನಾಭಿಪ್ರಾಯ ಇಲ್ಲ. ಬಹುಶಃ ಇದರಲ್ಲಿ ನೀವು ಮಾಡಿದಿರಿ ಕಾಂಗ್ರೆಸ್‌ನವರು ಮಾಡಿದರು, ನಾವು ಮಾಡಿದೆವು ಎನ್ನುವ ಭಿನ್ನಾಭಿಪ್ರಾಯಗಳು ಬಿಟ್ಟರೆ ಬೇರೆ ಏನೂ ಇಲ್ಲ. ಈ ತಿದ್ದುಪಡಿ ತಂದು ಇನ್ನು ೧೦ ವರ್ಷಗಳ ಕಾಲ ಮೀಸಲಾತಿಯನ್ನು ಮುಂದುವರಿಸಿ ಕೊಂಡು ಹೋಗುವುದನ್ನು ಸ್ವಾಗತ ಮಾಡುತ್ತಾ ಈ ಮೀಸಲಾತಿಯಲ್ಲಿರತಕ್ಕಂಥ ಜನಾಂಗದ ಬಗ್ಗೆ ಪರಿಣಾಮಕಾರಿಯಾಗಿ ಎಲ್ಲಾ ರಾಜಕೀಯ ಪಕ್ಷಗಳು ಒಂದು ರೀತಿಯಲ್ಲಿ ಒಮ್ಮತಾಭಿಪ್ರಾಯದಲ್ಲಿಯೇ ಕೆಲಸ ಮಾಡಿಕೊಂಡು ಬಂದಿವೆ. ಅದೇ ರೀತಿಯಲ್ಲಿ ಈ ಜನಾಂಗದ ಅಭಿವೃದ್ಧಿಗೆ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ನಮ್ಮ ಕರ್ತವ್ಯ. ಈ ಜನಾಂಗಕ್ಕೆ ಕೇವಲ ಮೀಸಲಾತಿ ಯನ್ನು ೧೦ ವರ್ಷಗಳ ಕಾಲ ಮುಂದುವರಿಸಿದರೆ ಸಾಲದು. ಮೀಸಲಾತಿ ಜಾರಿ ಮಾಡುವುದರಲ್ಲಿ ಸರ್ಕಾರ ಆತ್ಮಶೋಧನೆ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಎಲ್ಲಾ ರಾಜಕೀಯ ಪಕ್ಷಗಳೂ ಒಮ್ಮತಾಭಿಪ್ರಾಯದಿಂದ ಕೆಲಸ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮೀಸಲಾತಿಯಲ್ಲಿ ಸೇರಲು ಇನ್ನೂ ಕೆಲವು ವರ್ಗಗಳು, ಜಾತಿಗಳು ಒತ್ತಾಯವನ್ನು ತರುತ್ತಿವೆ, ಇದರಲ್ಲಿ ನಾಯಕ ಜನಾಂಗ ಕೂಡ ಒಂದು ಇದೆ. ನಾಯಕ ಜನಾಂಗವನ್ನು ಎಸ್.ಟಿ. ಗುಂಪಿಗೆ ಸೇರಿಸಬೇಕೆನ್ನುವ ಅಭಿಪ್ರಾಯಕ್ಕೆ ಕಾಂಗ್ರೆಸ್ ಪಕ್ಷ ಕೂಡ ಬಂದಿದೆ. ನಮ್ಮ ರಾಜ್ಯದಲ್ಲಿ ಈ ಜನಾಂಗದ ಒತ್ತಾಯ ಕೂಡ ಇದೆ. ಈ ಬಗ್ಗೆ ನಮ್ಮ ರಾಜ್ಯ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಈ ವರ್ಗವನ್ನು ಎಸ್.ಟಿ. ಗುಂಪಿಗೆ ಸೇರಿಸಲು ಪ್ರಯತ್ನ ಮಾಡಬೇಕಾಗುತ್ತದೆ, ಈ ಜನಾಂಗದವರು ಸಹ ಬಹಳ ತೊಂದರೆಯಲ್ಲಿ ಇದ್ದಾರೆ. ಅದೇ ರೀತಿ ಇನ್ನು ಉಪ್ಪಾರ ಜನಾಂಗದವರು ಸಹ ನಮ್ಮ ಮೈಸೂರು ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಇದ್ದಾರೆ. ಅವರು ಕಡುಬಡವರು ಹಾಗೂ ತೊಂದರೆಯಲ್ಲಿದ್ದಾರೆ, ಆದ್ದರಿಂದ ಆ ಜನಾಂಗವನ್ನು ಈ ಗುಂಪಿನಲ್ಲಿ ಸೇರಿಸುವುದು ಬಹಳ ಒಳ್ಳೆಯದು.

ಶ್ರೀ ಜಿ.ಎಸ್. ಶಿವನಂಜಪ್ಪ.—ನಮ್ಮ ಕಡೆ ಸಹ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಎಲ್ಲಾ ಕಡೆ ಇದ್ದಾರೆ, ಈ ಜನಾಂಗ ಬಹಳ ತೊಂದರೆ ಯಲ್ಲಿದ್ದಾರೆಂದು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ನಂತರ ಬೇಕಾದರೆ ತಾವು ಈ ಜನಾಂಗದ ಬಗ್ಗೆ ಒಂದು ತಿದ್ದುಪಡಿ ತಂದು ನಾವೆಲ್ಲ ಸೇರಿ ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಈ ಜನಾಂಗವನ್ನು ಎಸ್.ಟಿ. ಗುಂಪಿಗೆ ಸೇರಿಸತಕ್ಕಂಥ ಒತ್ತಾಯ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಎನ್. ಬಿ. ಸಂಜಪ್ಪ (ಶ್ರವಣ ಬೆಳಗೊಳ) —ಮಾನ್ಯ ಅಧ್ಯಕ್ಷರೇ ಬಹಳ ಗಹನವಾದ ವಿಚಾರವನ್ನು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥಾದ್ದನ್ನು ಈಗಾಗಲೇ ನಾವು ಕೇಳಿದ್ದೇವೆ, ಆರ್ಟಿಕಲ್ ೩೩೪ಕ್ಕೆ ತಂದಿರತಕ್ಕಂಥ ತಿದ್ದುಪಡಿ ಬಗ್ಗೆ ನಾವು ಇಲ್ಲಿ ಚರ್ಚೆ ನಡೆಸುತ್ತಿದ್ದೇವೆ. ಈ ಬಗ್ಗೆ ಚರ್ಚೆ ನಡೆಸತಕ್ಕಂಥ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ನಾನು ಕೇಳಿದಾಗ Most of us are wandering about ಎಂದು ನನಗನಿಸಿತು.

೨-೩೦ ಪಿ.ಎಂ.

ಈಗ ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರುಗಳನ್ನು ಸಹಸ್ರಾರು ವರ್ಷಗಳಿಂದ ತುಳಿಯಲ್ಪಟ್ಟಿವೆ. ಅವರಿಗೆ ಒಂದು ಒಳ್ಳೆಯ ಅವಕಾಶವನ್ನು ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ಅವರಿಗೆ ಸಲ್ಲಬೇಕಾದ ಹವಿಭಾಗಗಳನ್ನು ಕೊಡತಕ್ಕಂತದ್ದು ಒಳ್ಳೆಯದೆಂದು ಎಲ್ಲರೂ ಒಪ್ಪಿಕೊಂಡು ರಾಜ್ಯಾಂಗದಲ್ಲಿ ಅವರುಗಳಿಗೆ ಮೀಸಲಾತಿಯ ಸೌಲಭ್ಯಗಳನ್ನು ಕೊಡಲಾಯಿತು. ಅದರಂತೆ, ಪ್ರಾರಂಭದಲ್ಲಿ ೧೦ ವರ್ಷಗಳವರೆಗೆ ಕೊಡಲಾಗಿತ್ತು. ಪುನಃಪುನಃ ಅದನ್ನು ಅಮೆಂಡ್‌ಮೆಂಟ್ ಮಾಡಿ ಈಗ ೪ನೇ ಸಾರಿಯ ಹಂತಕ್ಕೆ ಬಂದಿದ್ದೇವೆ. ಈ ಸಾರಿಯೂ ಸಹ ಮೀಸಲಾತಿಯ ಸೌಲಭ್ಯವನ್ನು ಮುಂದುವರಿಸುವುದಕ್ಕೆ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ನಾವು ಇಲ್ಲಿ ಬಹಳ ಮುಖ್ಯವಾದ ವಿಚಾರ ಮಾಡತಕ್ಕಂತಾದ್ದು ಎಂದರೆ, ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟ ವರ್ಗ ಏನಿದೆಯೋ ಅದಕ್ಕೆ ಇದು ಸಿಕ್ಕಿರತಕ್ಕಂಥ ಒಂದು ಸದಾವಕಾಶವನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಮುಂದುವರಿಸುವ ಬಗ್ಗೆ ಇವತ್ತಿನ ದಿವಸ ಮಾತನಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ೧೦ ವರ್ಷಗಳ ಕಾಲ ಮತ್ತೆ ಮೀಸಲಾತಿ ಕೊಟ್ಟರೂ ಇನ್ನು ೫೦ ವರ್ಷ ಮುಂದುವರಿಯಬಹುದು. ಏತಕ್ಕೆಂದರೆ, ನಮ್ಮಲ್ಲಿರತಕ್ಕಂಥ ಸಮಸ್ಯೆಗಳು ಹಾಗೂ ತುಳಿತಕ್ಕೆ ಸಿಕ್ಕಿದ್ದಂತಹ ಈ ಜನಾಂಗವನ್ನು ಮೇಲೆತ್ತುವುದು ಅಷ್ಟು ಸುಲಭವಲ್ಲ. ಅದರಲ್ಲಿ ಸಹಸ್ರಾರು ವರ್ಷಗಳ ಸಮಸ್ಯೆಗಳು ಇವೆ. ಸ್ವಾತಂತ್ರ್ಯ ಬಂದ ನಂತರ ನಾವು ಸಹಸ್ರಾರು ಸಮಸ್ಯೆಗಳನ್ನು ಬಗೆಹರಿಸಿದ್ದೇವೆ, ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸುವ ದಾರಿಯಲ್ಲಿ ನಾವು ನಡೆಯುತ್ತಿದ್ದೇವೆಂದು ಒಪ್ಪಿಕೊಳ್ಳಬೇಕಾಗಿದೆ, ಈ ದೇಶದಲ್ಲಿ ಈ ಜನಾಂಗದವರಿಗೆ ಬಹಳ ಅನ್ಯಾಯವಾಗಿದೆ ಎನ್ನತಕ್ಕ ಮಾತನ್ನು ಹೇಳುವುದು ಬರೀ ಮೊಸಳೆ ಕಣ್ಣೀರಿನ ಮಾತು ಎಂದು ನಾನು ಹೇಳುತ್ತಿದ್ದೇನೆ. ನಿಷ್ಪಕ್ಷಪಾತವಾಗಿ ನಾನು ಹೇಳಬೇಕಾದರೆ ಈ ದೇಶದಲ್ಲಿ ಎಲ್ಲಾ ಜನಾಂಗದ ಬಡವರುಗಳನ್ನು ಗುರುತಿಸಿ ಅವರಿಗೆ ಸಲ್ಲಬೇಕಾದ ಹವಿಭಾಗಗಳನ್ನು ಕೊಡಬೇಕು. ಇವತ್ತು ನಮ್ಮ ದೇಶದಲ್ಲಿ ಮತ್ತು ನಮ್ಮ ಸಮಾಜದಲ್ಲಿ ಕೆಟ್ಟ ಗುಂಪುಗಳು ಹೆಚ್ಚಾಗಿವೆ. ಅವುಗಳನ್ನು ಎದುರಿಸಬೇಕಾದದು ನಮ್ಮ ಕರ್ತವ್ಯ. ಇವತ್ತಿನ ದಿವಸ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ೧೮ ಪರ್‌ಸೆಂಟ್ ಮೀಸಲಾತಿಯನ್ನು ಮುಂದುವರಿಸುವುದು ಧರ್ಮ ಎಂದು ಎಲ್ಲರೂ ಒಪ್ಪಿಕೊಂಡಿದ್ದೇವೆ. ಇದನ್ನು ಪರಿಶೀಲಿಸತಕ್ಕ ಸಂದರ್ಭದಲ್ಲಿ ಇನ್ನೂ ಬೇರೆ ಯಾವುದಾದರು ವರ್ಗಗಳು ನಮ್ಮ ದೇಶದಲ್ಲಿ ಹಿಂದುಳಿದಿವೆಯೇ ಎಂದು ಯೋಚನೆ ಮಾಡುವುದು ಸಹ ಈ ಸದನದ ಕರ್ತವ್ಯ. ಈ ಸಂದರ್ಭದಲ್ಲಿ ಯೋಚನೆ ಮಾಡುವುದಾದರೆ, ಇವತ್ತಿನ ದಿವಸ ಸಂವಿಧಾನದ ೬೨ನೇ ಅಮೆಂಡ್‌ಮೆಂಟ್‌ನ್ನು ಎಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ೧೦ ವರ್ಷ ಮುಂದುವರಿಯಬೇಕಾಗುತ್ತದೆ. ಇದನ್ನು ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ಗೊತ್ತಿದ್ದ ಹಾಗೆ ಎಷ್ಟು ಜಾತಿಗಳಲ್ಲಿ ಅದೇ ಒಂದು ಮಟ್ಟಕ್ಕೆ ಸೇರಿದಂಥ ಮತ್ತು ತುಳಿಯಲ್ಪಟ್ಟ ಜನಾಂಗ ಇಲ್ಲ ? ಎಂದು ಯೋಚನೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಇವತ್ತಿನ ದಿವಸ ಮಾನ್ಯ ಬಸವಲಿಂಗಪ್ಪನವರು ಸಭೆಯಲ್ಲಿದ್ದಾರೆ. ಜಾತಿ ವಿಷಯ ಮಾತನಾಡತಕ್ಕಂಥ ಸಂದರ್ಭದಲ್ಲಿ ಬರೀ ರಾಜಕೀಯವಾಗಿ, ಯಾವುದೋ ಒಂದು ಪಕ್ಷದ ಮೇಲೆ ದೂರನ್ನು ಹೊರಿಸುವುದಕ್ಕಾಗಿ ಇಲ್ಲವೇ ಗೂಬೆಯನ್ನು ಕೂರಿಸುವುದಕ್ಕಾಗಿ ಮಾತನಾಡತಕ್ಕಂಥ ಸಂದರ್ಭವನ್ನು ನಾವು ಆಗಾಗ ನೋಡುತ್ತಿದ್ದೇವೆ. ನಮ್ಮ ದೇಶದ ಸಮಾಜದ ಬಗ್ಗೆ ಚಿಂತನೆ ಮಾಡುವುದಾದರೆ, ಮಾನ್ಯ ಬಸವಲಿಂಗಪ್ಪನವರು ಫಾರ್ವರ್ಡ್ ಕಮ್ಯುನಿಟಿಗೆ ಸೇರುತ್ತಾರೆ, ನಮ್ಮ ಊರಿನಲ್ಲಿ ಪೂಜೆ ಮಾಡತಕ್ಕಂಥ ಬ್ರಾಹ್ಮಣರಾದ ನರಸಿಂಹಮೂರ್ತಿ ಎನ್ನುವವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕಾಗುತ್ತದೆ. ನನ್ನನ್ನೂ ಫಾರ್ವರ್ಡ್ ಕಮ್ಯುನಿಟಿಗೆ ಸೇರಿಸಬೇಕಾಗುತ್ತದೆ. ಆದರೆ ನನ್ನ ಹೊಲ ಉಳುವ ತಮ್ಮನನ್ನು ಪರಿಶಿಷ್ಟ ಜಾತಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡಬೇಕು. ರಾಜ್ಯಾಂಗದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಹವಿಭಾಗಗಳನ್ನು ಕೊಡಲಾಗಿದೆ. ಮತ್ತು ಅದನ್ನು ಮುಂದುವರಿಸಬೇಕಾಗುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಮೇಲೆ ಬರುವುದು ಅವರ

ಕರ್ತವ್ಯವೆಂದು ಅವರು ತಿಳಿದುಕೊಳ್ಳಬೇಕಾಗುತ್ತದೆ. ಕೊಟ್ಟ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವುದು ಅವರವರಿಗೆ ಸೇರಿದ್ದೇ ವಿನಃ ಯಾರ ಮೇಲೂ ಅಲ್ಲ. ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ ಇದರ ಬಗ್ಗೆ ನಾನು ವಿಶದವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಮಾತನಾಡತಕ್ಕಂಥ ಸಂದರ್ಭದಲ್ಲಿ ಇನ್ನೂ ಬೇರೆ ಬೇರೆ ಜಾತಿಗಳಲ್ಲಿ ಇವತ್ತಿನ ದಿವಸ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗಿಂತ ಕೀಳುಮಟ್ಟದಲ್ಲಿ ವಾಸ ಮಾಡುತ್ತಿರತಕ್ಕವರು ಸಹಸ್ರಾರು ಇಲ್ಲವೇ ಲಕ್ಷಾಂತರ ಜನ ಇದ್ದಾರೆ.

ಹೀಗೆ ಪರಿಶಿಷ್ಟ-ಜಾತಿ ಮತ್ತು ಪಂಗಡಗಳಲ್ಲಿ ಇಂದಿಗೂ ಕೀಳು ಮಟ್ಟದಲ್ಲಿರತಕ್ಕಂಥ ಲಕ್ಷಾಂತರ ಜನರಿದ್ದಾರೆ. ಅಂಥಹವರನ್ನು ಮೇಲಕ್ಕೆ ತರುವ ಬಗೆ ಇವತ್ತು ಎಲ್ಲರೂ ಚಿಂತನೆ ಮಾಡಬೇಕಾಗಿದೆ ಇವೊತ್ತಿನ ದಿವಸ ೧೯೮೯ರಲ್ಲಿ ಹಿಂದಿನ ಕಾಂಗ್ರೆಸ್ ಸರಕಾರದವರು ಮಾನ್ಯ ರಾಜೀವಗಾಂಧಿಯವರ ನೇತೃತ್ವದಲ್ಲಿ ಈ ಒಂದು ತಿದ್ದುಪಡಿಯನ್ನು ಮಾಡಬೇಕೆಂದು ತೀರ್ಮಾನ ಮಾಡಿತ್ತು. ಅದೇ ತಿದ್ದುಪಡಿಯನ್ನು ಇವೊತ್ತು ಈಗ ಆಡಳಿತಕ್ಕೆ ಬಂದಂಥ ಸರಕಾರದವರು ನಮಗೆ ಕಳುಹಿಸಿ ಕೊಟ್ಟಿದ್ದಾರೆ. ಇದನ್ನು ಅನುಮೋದನೆ ಮಾಡತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ಇದನ್ನು ವಿರೋಧ ಮಾಡುವುದಕ್ಕೆ ಯಾರಿಗೂ ಧೈರ್ಯವಿಲ್ಲ, ಏತಕ್ಕೆಂದರೆ, ಮುಂದೆ ಓಟು ಕೇಳುವುದಕ್ಕೆ ಆ ಜನರ ಬಳಿಗೆ ಇವರು ಹೋಗಲೇ ಬೇಕು. ಒಂದು ವೇಳೆ ಈ ಮತದಾನದ ಪದ್ಧತಿಯು ಇಲ್ಲದೇ ಹೋಗಿದ್ದರೆ ಇದನ್ನು ವಿರೋಧ ಮಾಡುವುದಕ್ಕಾಗಿ ಬೇರೆ ಬೇರೆ ಹಿನ್ನಲೆಯಲ್ಲಿ ಪಟ್ಟಭದ್ರಹಿತಾಸಕ್ತಿಗಳು ಪ್ರಯತ್ನಗಳನ್ನು ಮಾಡುತ್ತಿದ್ದವು. ಒಂದು ವೇಳೆ ಇಂಥ ಒಂದು ತಿದ್ದುಪಡಿ ಮಾಡುವುದಕ್ಕೆ ವಿರೋಧ ಮಾಡಿದರೆ ಆ ಜನರ ಬಳಿಗೆ ಓಟುಗಳ ಯಾಚನೆಗೆ ಹೋದಾಗ ಇವರಿಗೆ ಸರಿಯಾಗಿ ಬುದ್ಧಿಯನ್ನು ಕಲಿಸುತ್ತಾರೆ ಎಂಬ ಅನುಭವವೂ ಇದ್ದುದರಿಂದ ಯಾರೂ ಇದನ್ನು ವಿರೋಧ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಈ ಮಾತನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂಬುದನ್ನು ಎಲ್ಲರೂ ತಿಳಿದು ಕೊಂಡಿದ್ದಾರೆ. ಒಟ್ಟಿನಲ್ಲಿ ದೀರ್ಘಕಾಲದಿಂದಲೂ ಈ ದೇಶದಲ್ಲಿ ತುಳಿತಕ್ಕೆ ಸಿಕ್ಕಲ್ಪಟ್ಟ ಜನಾಂಗಕ್ಕೆ ಈಗಲಾದರೂ ಒಂದು ಸೂಕ್ತ ರೀತಿಯಲ್ಲಿ ಸೌಲಭ್ಯಗಳು ಸಿಗಲಿ ಮತ್ತು ಈ ಮೀಸಲಾತಿಯು ಮುಂದುವರಿಯಲಿ ಎಂದು ಹೇಳಿ ಈ ತಿದ್ದುಪಡಿಯನ್ನು ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಸಂವಿಧಾನದ ೬೨ನೇ ತಿದ್ದುಪಡಿ ವಿಧೇಯಕವನ್ನು ನಾನು ಬೆಂಬಲಿಸುತ್ತಾ ಕೆಲವಾರು ವಿಚಾರಗಳನ್ನು ಈ ಕುರಿತು ಪ್ರಸ್ತಾಪಿಸ ಬಯಸುತ್ತೇನೆ.

ಈಗ ನಾವು ಮಾಡುತ್ತಿರುವ ಚರ್ಚೆಯಲ್ಲಿ ಪ್ರಸಕ್ತ ಮೀಸಲಾತಿಯ ನೀತಿಯು ಎಲ್ಲಿಯವರೆಗೆ ಮುಂದುವರಿಯಬೇಕೆಂಬ ಪ್ರಶ್ನೆ ಇದೆ. ಇದರಲ್ಲಿ ಎಲ್ಲರೂ ಕೂಡ ಈ ಮೀಸಲಾತಿಯು ಮುಂದು ವರಿಯಲಿ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಈಗ ಈ ಮೀಸಲಾತಿಯು ಏಕೆ ಮುಂದುವರಿಯ ಬೇಕೆಂಬ ಬಗ್ಗೆ ಕೆಲವು ವಿಚಾರಗಳ ಮೂಲಕ ನಾನು ವಿಶ್ಲೇಷಣೆ ಮಾಡಬಯಸುತ್ತೇನೆ. ಇವೊತ್ತು ಈ ನಿಮ್ನವರ್ಗಗಳವರಿಗೆ ಏತಕ್ಕಾಗಿ ಮೀಸಲಾತಿ ಸೌಲಭ್ಯ ಮುಂದುವರಿಯಬೇಕೆಂಬ ಬಗ್ಗೆ ಚರ್ಚೆ ಪ್ರಾರಂಭ ವಾಗಿರುವುದನ್ನು ನಾವುಗಳು ಪತ್ರಿಕೆಗಳಲ್ಲಿ ನೋಡುತ್ತಾ ಇದ್ದೇವೆ. ಈ ದೇಶದಲ್ಲಿ ಮೀಸಲಾತಿ ಸೌಲಭ್ಯವನ್ನು ತೆಗೆದುಹಾಕಿದರೆ ಹೇಗೆ ಇರುತ್ತದೆ ಮತ್ತು ಇದ್ದರೆ ಹೇಗೆ ಇರುತ್ತದೆ ಎಂಬ ಬಗ್ಗೆ ನನ್ನ ಕೆಲವು ವಿಚಾರಗಳನ್ನು ಇಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಈ ಅಸ್ಪೃಶ್ಯತೆ ಎನ್ನುವುದು ಹೇಗೆ ಬಂತು ಮತ್ತು ಏತಕ್ಕಾಗಿ ಬಂತು ಎನ್ನುವುದು ನಾವು ಮೊದಲು ತಿಳಿದುಕೊಳ್ಳಬೇಕಾದ ವಿಚಾರ. ಕಡು ಬಡತನ, ಅಪಿದ್ಯಾವಂತರ ಪರಿಸ್ಥಿತಿ ಮತ್ತು ನಮ್ಮಲ್ಲಿನ ಸಾಮಾಜಿಕ ವ್ಯವಸ್ಥೆಗಳು ಈ ಒಂದು ಪರಿ ಸ್ಥಿತಿಗೆ ನಿಮ್ನ ವರ್ಗದವರನ್ನು ತಳ್ಳಿದವು. ಈ ರೀತಿಯಲ್ಲಿ ಸಮಾಜದ ಪರಿಸರದ ಮೂಲಕ ತುಳಿತಕ್ಕೆ ಈಡಾಗಿರತಕ್ಕಂಥ ಒಂದು ಪರಿಸ್ಥಿತಿಯನ್ನು ನಾವು ಅವಲೋಕನ ಮಾಡಿದಾಗ, ಅವರ ಸ್ಥಿತಿಗತಿಗಳನ್ನು ಅರಿತುಕೊಂಡಾಗ, ಅಂಥಹವರನ್ನು ಏನಾದರೂ ಮಾಡಿ ಮೇಲಕ್ಕೆತರಬೇಕೆಂಬ ಬಗ್ಗೆ ಹಲವಾರು ಕಾರ್ಯ ಕ್ರಮಗಳನ್ನು ಹಾಕಿಕೊಳ್ಳಬೇಕಾದಂಥ ಸಂದರ್ಭಗಳು ನಮಗೆ ಬಂದವು ಸಹಸ್ರಾರು ವರ್ಷಗಳಿಂದ ಈ ಸಮಾಜದ ತುಳಿತಕ್ಕೆ ಸಿಲುಕಿ ನರಕಯಾತನೆಯನ್ನು ಅನುಭವಿಸಿಕೊಂಡು ಬಂದ ಜನರು, ತಮ್ಮ ಮಟ್ಟನಲ್ಲಿ ಸಾಕಷ್ಟು ಹೋರಾಟಗಳನ್ನು ಮಾಡಿಕೊಂಡು ಬಂದಿದ್ದಾರೆ. ಇವೊತ್ತಿಗೂ ಅವರು ತಮ್ಮ ಪ್ರಯತ್ನ ಗಳನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಇನ್ನೂ ಈ ದೇಶದಲ್ಲಿ ತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿ ಕೊಳ್ಳಲಾಗದ ಈ ಜನರ ಬಗ್ಗೆ ಸಂಬಂಧ ಪಟ್ಟವರು ಮಾತನಾಡುವಾಗ ಬಹಳಷ್ಟು ಹಗುರವಾಗಿ, ನಿಕೃಷ್ಟ ವಾಗಿ, ಕುಚೇಷ್ಟೆಪೂರಿತವಾಗಿ ಮಾತನಾಡುತ್ತಾ ಇದ್ದಾರೆ. ಈ ಮೀಸಲಾತಿಯು ಬೇಡ ಎಂದು ಹಲವಾರು ಮಾತನಾಡತಕ್ಕಂಥಾದ್ದನ್ನು ನಾವು ಕಂಡಿದ್ದೇವೆ, ಕೇಳಿದ್ದೇವೆ, ಹಾಗೂ ಅನುಭವ ಪಡೆದಿದ್ದೇವೆ. ಎಲ್ಲಿಯವರೆಗೆ ಈ ಜನರಿಗೆ ಅವಹೇಳನಕಾರಿಯಾದ ರೀತಿಯಲ್ಲಿ ಬೇರೆಯವರು ನಡೆದುಕೊಳ್ಳುತ್ತಾರೆ,

ಎಲ್ಲಿಯವರೆಗೆ ಈ ಜನರ ಮೇಲೆ ದಬ್ಬಾಳಿಕೆ ಮಾಡಿಕೊಂಡು ಹೋಗುವುದನ್ನು ಮುಂದುವರಿಸಿಕೊಂಡು ಹೋಗುತ್ತಾರೆ, ಎಲ್ಲಿಯವರೆಗೆ ನಿಮ್ನ ವರ್ಗದವರು ಸಮಾನರು ಎನ್ನುವ ಪರಿಕಲ್ಪನೆ ಈ ಸಮಾಜದಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಈ ಮೀಸಲಾತಿ ಸೌಲಭ್ಯವು ಮುಂದುವರಿಯ ಬೇಕೆಂದು ನಾನು ಪ್ರತಿಪಾದಿಸುತ್ತೇನೆ.

ಈಗ ಇಲ್ಲಿ ಹಲವಾರು ಜನರು ಈ ಮೀಸಲಾತಿಯ ಸೌಲಭ್ಯಗಳನ್ನು ಸಂಬಂಧಪಟ್ಟವರು ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಹಾಗಿದ್ದಲ್ಲಿ ಈ ಸೌಲಭ್ಯಗಳ ದುರುಪಯೋಗ ಯಾವ ರೀತಿಯಲ್ಲಿ ನಡೆದುಕೊಂಡು ಬಂದಿದೆ ಮತ್ತು ನಡೆಯುತ್ತಿದೆ ಎಂಬ ಬಗ್ಗೆ ನಾವು ವಿಚಾರ ಮಾಡಬೇಕು. ಈ ಮೀಸಲಾತಿ ಸೌಲಭ್ಯಗಳನ್ನು ಹೊಂದಿದ ಈ ಜನರು ಮೇಲೆತ್ತಲ್ಪಟ್ಟಿದ್ದಾರೆಯೋ ಎಂಬ ಬಗ್ಗೆ ಅವಲೋಕನೆ ಮಾಡಬೇಕಾಗುತ್ತದೆ. ಅವರಿಗೆ ಕೊಟ್ಟಿರತಕ್ಕಂಥ ಸೌಲಭ್ಯಗಳನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರಲಾಗುತ್ತಿದೆಯೋ ಎಂಬುದನ್ನು ಕೂಡ ನಾವು ಆಲೋಚಿಸಬೇಕು. ಇವರ ಏಳಿಗೆ ಬಗ್ಗೆ ಕಾರ್ಯಕ್ರಮಗಳನ್ನು ಮಾತ್ರ ಹಾಕಿಕೊಂಡು ಸುಮ್ಮನೆ ಕುಳಿತರೆ ಅದರಿಂದ ಉದ್ದೇಶ ಸಾಧನೆಯಾಗಲಾರದು. ಇವೊತ್ತು ಯೂನಿವರ್ಸಿಟಿಗಳಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಒಂದು ಮಾತನ್ನು ಹೇಳ ಬಯಸುತ್ತೇನೆ. ಅಲ್ಲಿ ಅಭ್ಯಸಿಸತಕ್ಕಂಥ ಮೀಸಲಾತಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಮಾರ್ಕ್ಸ್‌ಗಳನ್ನು ಕೊಡುವಾಗ ಸಂಬಂಧಪಟ್ಟ ಅತೀ ಬುದ್ಧಿವಂತರು ಎಂದು ಕರೆಯಿಸಿಕೊಳ್ಳತಕ್ಕಂಥ ಜನರು, ಪಾಂಡಿತ್ಯವನ್ನು ಗಳಿಸಿಕೊಂಡು ಈ ನಿಮ್ನ ವರ್ಗದವರಿಗಿಂತ ಮೇಲ್ತರಗತಿಯವರು ಎಂದು ಹೇಳಿಕೊಳ್ಳುವ ಜನರು ಮೀಸಲಾತಿಯಡಿಯಲ್ಲಿ ಬರುವವರ ಬಗ್ಗೆ ಏನು ಹೇಳುತ್ತಾರೆ ಎಂದು ನಾವು ತಿಳಿದುಕೊಳ್ಳಬೇಕು. ಈ ಮೀಸಲಾತಿಯಲ್ಲಿ ಬರುವ ಹುಡುಗರಿಗೆ ಫಸ್ಟ್‌ಕ್ಲಾಸ್, ಸೆಕೆಂಡ್ ಕ್ಲಾಸ್, ರ್‍ಯಾಂಕ್ ಮುಂತಾಗಿ ಮಾರ್ಕ್ಸ್ ಕೊಡಬೇಕಾಗಿಲ್ಲ, ಅವರಿಗೆ ಎಷ್ಟು ಮಾರ್ಕ್ಸ್ ಸಿಕ್ಕಿದರೂ ಕೂಡ ಮೀಸಲಾತಿಯಡಿಯಲ್ಲಿ ಕೆಲಸ ಸಿಕ್ಕಿಯೇ ಸಿಗುತ್ತದೆ ಎಂದು ದೋಷಾರೋಪವಾಗಿ ಹೇಳುತ್ತಾ ಇದ್ದಾರೆ. ಅಂಥ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆಗಳನ್ನು ಮಾಡಿ, ಮಾರ್ಕ್ಸ್ ಕೊಡುವಾಗ ಉದ್ದೇಶಪೂರ್ವಕವಾಗಿಯೇ ಥರ್ಡ್‌ಕ್ಲಾಸ್ ಅಂಕಗಳನ್ನು ಕೊಡುತ್ತಾರೆ. ಈ ವರ್ಗದ ಜನರಿಗೆ ಕೆಲಸ ಕೊಟ್ಟರೆ ಅವರಲ್ಲಿ ಎಫಿಶಿಯನ್ಸಿ ಇಲ್ಲ ಎಂದು ಹೇಳುತ್ತಾರೆ. ಯಾವ ಅರ್ಥದಲ್ಲಿ ಆ ಜನರು ಎಫಿಶಿಯನ್ಸಿ ಇಲ್ಲ ಎಂದು ಹೇಳುತ್ತಾರೆ ಮತ್ತು ಏತಕ್ಕಾಗಿ ಹೇಳುತ್ತಾರೆ ? ಹಾಗೆ ಹೇಳುತ್ತಿರುವವರ ದೃಷ್ಟಿಕೋನ ಏನು ಎಂಬ ಬಗ್ಗೆ ನಾವು ಗಂಭೀರವಾಗಿ ಆಲೋಚನೆ ಮಾಡಬೇಕು. ಈ ನಿಮ್ನ ವರ್ಗದವರನ್ನು ಇಂದಿಗೂ ನೀವುಗಳು ಯಾವ ದೃಷ್ಟಿಯಲ್ಲಿ ಅಳತೆ ಮಾಡುತ್ತಾ ಇದ್ದೀರಿ ? ಆ ವರ್ಗದವರನ್ನು ಸುಧಾರಿಸಲು ನೀವು ಏನು ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಿದ್ದೀರಿ ಎಂದು ಪ್ರಶ್ನಿಸಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಡತನದ ಮತ್ತು ಪರಿಸರದ ಕಾರಣದಿಂದಾಗಿ ದನಗಳನ್ನು ಕಾದು, ಸೆಗಣಿ ಹೊತ್ತು ಸಮಯ ಸಿಕ್ಕಿದಾಗ ಶಾಲೆಗಾಗಿ ಹೋಗಿ ಓದಿದವರಿಂದ ನೀವು ಯಾವ ರೀತಿಯ ಎಫಿಶಿಯನ್ಸಿಯನ್ನು ನಿರೀಕ್ಷಿಸಿದ್ದೀರಿ ಎಂದು ಕೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯ—ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಹರಿಜನ ವಿದ್ಯಾರ್ಥಿಯನ್ನು ಅಂತಿಮ ಪರೀಕ್ಷೆಯಲ್ಲಿ ಫೈಲ್ ಮಾಡಿದರು. ಆತನು ನರ್ಸರಿಯಿಂದ ಹಿಡಿದು ಮೆಡಿಕಲ್ ವಿದ್ಯಾಭ್ಯಾಸದ ಹಂತದವರೆಗೂ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಆಗುತ್ತಾ ಬಂದಿದ್ದನು. ಆದರೆ ಅವನನ್ನು ಕೊನೆಯಲ್ಲಿ ಅನುತ್ತೀರ್ಣನನ್ನಾಗಿ ಮಾಡಿದರು.

ಯಾರು ಈ ದೇಶದಲ್ಲಿ ಹಿಂದಿನಿಂದಲೂ ತುಳಿತಕ್ಕೊಳಗಾಗಿದ್ದಾರೆ ಅಂಥವರಿಗೆ ಇರುವ ಮೀಸಲಾತಿಯನ್ನು ಹಾಗೂ ಇತರೇ ಸೌಲಭ್ಯಗಳನ್ನು ಇಂದು ಖಂಡಿಸುತ್ತಿರುವವರ ಬಗ್ಗೆ ಓಪನ್ ಆಗಿ ಇದು ಸರಿಯಲ್ಲ ಎಂದು ಹೇಳತಕ್ಕಂಥ ಕೆಲಸವನ್ನು ಯಾರೂ ಸೂಕ್ತವಾಗಿ ಮಾಡುತ್ತಾ ಇಲ್ಲ. ಅವರ ಮೇಲಿನ ದೌರ್ಜನ್ಯಗಳನ್ನು ನಮ್ಮ ಸಮಾಜ ಖಂಡಿಸುತ್ತಾ ಇಲ್ಲ. ಹೀನಾಯವಾಗಿ ಮಾತನಾಡುವವರ ಬಗ್ಗೆ ಮಾತನಾಡಲಿ ಬಿಡಿ ಎಂದು ಹೇಳಿಕೊಂಡು ಸುಮ್ಮನಾಗಿದ್ದಾರೆ ಇಂಥ ಒಂದು ಮೇಲುಕೀಳು ಭಾವನೆಯನ್ನು ಸಾಮಾಜಿಕ ಅಂತರವನ್ನು ಅಸ್ಪೃಶ್ಯತೆಯ ರೋಗವನ್ನು ತೊಡೆದು ಹಾಕುವುದರ ಬದಲು ಅದನ್ನು ಹೆಚ್ಚು ಮಾಡುತ್ತಿದ್ದಾರೆ ಎಂಬ ಭಾವನೆ ನಿಮ್ನ ವರ್ಗದವರಲ್ಲಿ ಬರುವಂತಾಗಿದೆ. ಇವೊತ್ತಿಗೂ ಕೆಲವು ಕಡೆಗಳಲ್ಲಿ ಹರಿಜನರು ಹೋಟೆಲ್‌ಗಳಿಗೆ ಹೋದರೆ ಅವರಿಗಾಗಿಯೇ ಇರಿಸಲಾದ ಲೋಟ್‌ಗಳನ್ನು ಕೊಟ್ಟು ಕಾಫಿ ಕುಡಿದ ಮೇಲೆ ಅದನ್ನು ಅವರಿಂದಲೇ ತೊಳಿಸಿಟ್ಟು, ಹಣ ಕೊಟ್ಟು ದೀನನಾಗಿ ಬರುವಂಥ ಒಂದು ಪರಿಸ್ಥಿತಿಯು ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಆ ಜನರು ಇದ್ದಾರೆ. ಅವರಿಗೆ ಆಸ್ತಿಪಾಸ್ತಿಗಳು ಬೇಡ, ಐಶ್ವರ್ಯಾದಿಗಳು ಬೇಡ, ಅವರಿಗೆ ಮಾನಸಿಕವಾಗಿ ಸ್ವಾತಂತ್ರವಾಗಿ ಮಾತನಾಡತಕ್ಕಂಥ ಒಂದು ಹಕ್ಕನ್ನು ನಾವುಗಳು ಕೊಟ್ಟಿದ್ದೇವೆಯೇ ಎಂದು ನಮ್ಮಲ್ಲಿ ನಾವೇ ಪ್ರಶ್ನಿಸಿಕೊಳ್ಳಬೇಕು ಆ ಒಂದು ಸ್ವಾತಂತ್ರ್ಯವನ್ನು ಕೊಡಬೇಕೆಂಬ ಮನೋಭೂಮಿಕೆಯನ್ನು ಸೃಷ್ಟಿಸಲು

ನಾವು ಸಿದ್ಧರಾಗಿದ್ದೇವೆಯೋ ಎಲ್ಲಿಯವರೆಗೆ ಈ ನರಕಯಾತನೆಯನ್ನು ಅನುಭವಿಸಿಕೊಂಡು ಬಂದಿರುವ ಜನರ ಬಗ್ಗೆ ಬೇರೆಯವರಲ್ಲಿ ಒಂದು ಸಮಾನ ಭಾವನೆಯು ಬರುವುದಿಲ್ಲವೋ ಅಲ್ಲಿಯವರೆಗೆ ಈ ಜನರ ಉದ್ಧಾರವಾಗುವ ಮಾತು ಸಾಧ್ಯವಿಲ್ಲದೀತು. ಆ ಒಂದು ಸದ್ಭಾವನೆಯು ನಮ್ಮ ಸಮಾಜದಲ್ಲಿ ಮೂಡಿ ಬರಬೇಕಾದ ಅವಶ್ಯಕತೆ ಇದೆ. ಈ ಜನರನ್ನು ಮೇಲೆತ್ತುವ ಕಾರ್ಯಕ್ರಮಗಳಲ್ಲಿ ಹರಿಜನ ಕೇರಿಗಳಿಗೆ ಬೋರ್‌ವೆಲ್ ಹಾಕಿಸತಕ್ಕಂಥಾದ್ದು ಇದೆ. ಆದರೆ ನಮ್ಮ ಅಧಿಕಾರಿಗಳು ಆ ಒಂದು ಸಂದರ್ಭ ಬಂದಾಗ ಹರಿಜನ ಕೇರಿಯಲ್ಲಿ ಬೋರ್‌ವೆಲ್ ಹಾಕಿದರೆ ನೀರೆ ಬರುವುದಿಲ್ಲ ಎಂದು ಹೇಳಿ ಅಲ್ಲಿಗೆ ಬರುವ ಬೋರ್‌ವೆಲ್ ಅನ್ನು ತಪ್ಪಿಸಿಬಿಡುತ್ತಾರೆ. ನಂತರ ಅದನ್ನು ಬೇರೆ ಕಡೆ ಹಾಕಿಸಿಬಿಡುತ್ತಾರೆ. ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ವಂಚಿಸಿ ಬಿಡುತ್ತಾರೆ. ಹಾಗಾದರೆ ಈ ಸಂವಿಧಾನಾತ್ಮಕವಾಗಿ ಈ ಹರಿಜನ-ಗಿರಿಜನರಿಗೆ ಸಿಗಬೇಕಾದ ೧೮ ಪರ್‌ಸೆಂಟ್‌ನಷ್ಟು ಹಣದ ಉಪಯೋಗ ಆ ಜನರಿಗೆ ಸಿಗುತ್ತದೆಯೋ ಅದು ಎಲ್ಲಿಗೆ ಹೋಗಿದೆ ಎಂದು ವಿಚಾರ ಮಾಡಬೇಕು.

ಇನ್ನು ಪ್ರಮೋಷನ್ ವಿಚಾರವನ್ನು ತೆಗೆದುಕೊಂಡಾಗ ನಮ್ಮಲ್ಲಿಯ ಕೆಲವು ಐಎಎಸ್ ಅಧಿಕಾರಿಗಳು ತಾವೇ ಸಾರ್ವಭೌಮರು, ತಾವೇ ಸರ್ವಪಂಡಿತರು ಎಂಬ ದಾಟಿಯಲ್ಲಿ ಮಾತನಾಡುತ್ತಾರೆ. ಆದರೆ ಈ ಸಮಾಜ ಅಂಥ ಒಂದು ಶಿಕ್ಷಣವನ್ನು ನಮ್ಮ ಜನರಿಗೆ ಕೊಟ್ಟಿದ್ದರೆ, ಅಂಥ ಒಂದು ಪರಿಸರವನ್ನು ನಮ್ಮ ಜನರಿಗೆ ಕೊಟ್ಟಿದ್ದರೆ ನಿಮಗಿಂತಲೂ ನಮ್ಮ ಜನರು ಹೆಚ್ಚಿನ ರೀತಿಯ ಪಂಡಿತರಾಗಿರುತ್ತಿದ್ದರು ಎಂದು ಹೇಳಬೇಕಾಗುತ್ತದೆ. ನೀವು ಅಂಥ ಒಂದು ಸಾಮಾಜಿಕ ಪರಿಸರವನ್ನು ಕಲ್ಪಿಸಿಕೊಟ್ಟಿದ್ದೀರಾ ? We are not coming with a begging bowl. We are demanding. This is our right. ಇವೊತ್ತು ಹರಿಜನ ಗಿರಿಜನರಿಗೆ ಮೀಸಲಾತಿ ಇರಬೇಕೆಂಬುದನ್ನು ಎಲ್ಲರೂ ತತ್ವಶಃ ಒಪ್ಪಿಕೊಳ್ಳುತ್ತಾರೆ. ರಿಸರ್ವೇಶನ್ ಪಾಲಿಸಿ ಬಗ್ಗೆ ದೇಶದಲ್ಲಿ ವಿರೋಧದ ಕೂಗುಗಳು ಪ್ರಾರಂಭವಾಗಿವೆ.

ಇವತ್ತು ಇಲ್ಲಿ ಮೀಸಲಾತಿ ಬಗ್ಗೆ ಚರ್ಚೆ ನಡೆಯುತ್ತಿದೆ. ಒಬ್ಬರು ಒಂದು ರೀತಿಯಲ್ಲಿ ಹೇಳುತ್ತಾರೆ. ಇನ್ನೊಬ್ಬರು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ, ಆ ರೀತಿಯಲ್ಲಿ ವಿಷಯವನ್ನು ಕ್ರಿಯೇಟ್ ಮಾಡುತ್ತಾರೆ, ಇನ್‌ಸ್ಟಿಗೇಟ್ ಮಾಡುತ್ತಾರೆ. ಅದರ ವಿಚಾರವಾಗಿ ಸ್ಟಾಟಿಸ್ಟಿಕ್ ಸರ್ವೆ ಮಾಡುತ್ತಾರೆ. ಈ ರಿಸರ್ವೇಷನ್ ಬೇಕೇ ಎನ್ನುವ ವಿಚಾರದಲ್ಲಿ ಮನೆ ಮನೆಯಲ್ಲಿಯೂ ಹೋಗಿ ಸರ್ವೆಯನ್ನು ಮಾಡುತ್ತಾರೆ ನಮಗೆ ಗೊತ್ತಿರುವಂತೆ ಈ ರೀತಿಯ ಒಂದು ತಂತ್ರ ನಡೆಯುತ್ತಿದೆ. ಇದರ ಬಗ್ಗೆ ಯಾವ ರೀತಿಯ ಸಂಚು ನಡೆಯುತ್ತಿದೆ ಎನ್ನುವುದು ನಮಗೆ ಗೊತ್ತಿದೆ. ಆದರೆ ನಿಮಗೆ ಕೇಳುತ್ತಿದ್ದೇವೆ, ನಮಗೆ ಈ ಸಮಾಜದಲ್ಲಿ ಮನುಷ್ಯರಾಗಿ ಬಾಳಲಿಕ್ಕೆ, ಮನುಷ್ಯರಾಗಿ ಇರಲಿಕ್ಕೆ ತಾವು ಸಮಾನತೆಯನ್ನು ಎಲ್ಲಿಯತನಕ ಕೊಡುವುದಿಲ್ಲವೋ, ಎಲ್ಲಿಯವರೆಗೆ ಆ ರೀತಿಯ ಪರಿಸರವನ್ನು ಕೊಡುವುದಿಲ್ಲವೋ, ಅಲ್ಲಿಯತನಕ ಮೀಸಲಾತಿ ಬೇಕು. ಈ ಮೀಸಲಾತಿ ಹೆಸರಿನಲ್ಲಿ ಪ್ರೊಮೋಷನ್ ಕೊಡತಕ್ಕಂಥ ವಿಚಾರದಲ್ಲಿ ಹೇಳಬೇಕೆಂದರೆ ಮ್ಯಾನೇಜಿಂಗ್ ಡೈರೆಕ್ಟರ್ ಲೆವೆಲ್‌ನಲ್ಲಿ ಪ್ರಮೋಷನ್ ಇಲ್ಲವೇ ಇಲ್ಲ. ದೊಡ್ಡ ದೊಡ್ಡ ಹುದ್ದೆಗಳಲ್ಲಿಯಂತೂ ಮೀಸಲಾತಿಯನ್ನು ಕೇಳಲೇಬೇಡಿ, ಇನ್ನು ಸುಪ್ರೀಂ ಕೋರ್ಟ್ ಜಡ್ಜ್ ಆಗಿಬಿಟ್ಟರೆ ಪೇಪರ್‌ನಲ್ಲಿ ಫಸ್ಟ್ ಹರಿಜನ ಎಂದು ಹೆಸರು ಬರುತ್ತದೆ. ಜುಡಿಷಿಯರಿ ಸಿಸ್ಟಂನಲ್ಲಿ ಏನು ಮಾಡಿದ್ದೀರಿ ? Scheduled Caste lawyer are not efficient. This is an open talk. Are we not efficient? Efficiency comes from you only. Was Babasaheb Ambedkar not efficient ? Are our people not efficient ? ನಮಗೆ ಆ ವಾತಾವರಣವನ್ನು ಕೊಟ್ಟಿಲ್ಲ. ಆ ವಿದ್ಯೆಯನ್ನೂ ಕೊಟ್ಟಿಲ್ಲ. ಆ ರೀತಿಯ ಒಂದೇ ಸವಲತ್ತನ್ನು ನಮಗೆ ಕೊಟ್ಟಿಲ್ಲ. ನಮ್ಮ ತಂದೆ ತಾಯಿ ನಮ್ಮನ್ನು ಕೆಲಸಕ್ಕೆ ಇಟ್ಟಾಗ ನಾವು ಹೇಗೆ ಓದಲಿಕ್ಕೆ ಸಾಧ್ಯವಾಗುತ್ತದೆ ? ಯಾವ ರೀತಿ ಕಾಂಪೀಟ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮೀಸಲಾತಿ ರೀತಿನೀತಿಯಲ್ಲಿ ಇಂಪ್ಲಿಮೆಂಟೇಷನ್ ಸರಿಯಾಗಿ ಆಗದೇ ಈ ರೀತಿಯ ತೊಂದರೆಗಳಾಗುತ್ತಿದೆ. ಇವತ್ತು ನಮ್ಮ ಜಿಲ್ಲೆಯ ಬಗ್ಗೆ ಮಾತನಾಡುವುದಾದರೆ ಮಂಡಲ ಪಂಚಾಯಿತಿಯಲ್ಲಿರತಕ್ಕಂಥ ಹದಿನೆಂಟು ಪರ್‌ಸೆಂಟ್ ಹಣ ಸರಿಯಾಗಿ ಸದ್ವಿನಿಯೋಗ ಮಾಡಿಲ್ಲ. They do not have a courtesy to make a provision in the Budget. That 18% fund is there. They are not bothered. ಅದರ ಬಗ್ಗೆ ಸರ್ಕ್ಯುಲರ್ ಮಾಡಿಲ್ಲ. ಹದಿನೆಂಟು ಪರ್‌ಸೆಂಟ್ ಹಣವನ್ನು ಇದುವರೆಗೂ ಕೊಟ್ಟಿಲ್ಲ. ಎಲ್ಲಿದೆ ಗ್ಯಾರಂಟಿ ? ಆ ಹಣ ಎಲ್ಲಿದೆ ? ಏನು ಕೊಟ್ಟಿದ್ದೀರಿ ? ಮೀಸಲಾತಿ ಜಾರಿಯಲ್ಲಿದೆಯೋ ? ನಾವೂ ಮಾನವರಾಗಿ ಬಾಳಬೇಕೆಂದರೆ ನಮ್ಮನ್ನು ನಿಮ್ಮ ಈಕ್ವಲ್ ಆಗಿ ಟ್ರೀಟ್ ಮಾಡಿ. ನಮಗೆ ಜಾಬು, ಐಶ್ವರ್ಯ ಸಂಪತ್ತು ಯಾವುದೂ ಬೇಡ. You must treat us as equals. ಎಲ್ಲಿಯತನಕ ಈಕ್ವಲ್ ಆಗಿ ನಮ್ಮನ್ನು ಟ್ರೀಟ್ ಮಾಡುವುದಿಲ್ಲವೋ ಎಲ್ಲಿಯವರೆಗೆ ಸುಪೀರಿಯಾರಿಟಿ ಇರುತ್ತದೋ ಅಲ್ಲಿಯವರೆಗೆ ನಮಗೆ ಮೀಸಲಾತಿ ಬೇಕು. ಆದುದರಿಂದ ನಾನು ಈ ಮೀಸಲಾತಿಯ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಇದರ ಬಗ್ಗೆ

ಯಾದೇ ತಕರಾರು ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಈ ಮೀಸಲಾತಿ ಅಡಿಯಲ್ಲಿ ಏನು ಮಿಸ್-ಮ್ಯಾನೇಜ್ ಆಗುತ್ತಿದೆ. ಕೋಟಿಗಟ್ಟಲೆ ಹಣವನ್ನು ಏನು ಖರ್ಚು ಮಾಡುತ್ತಿಲ್ಲ, ಇದನ್ನು ಸರಿಪಡಿಸಬೇಕು. ಖರ್ಚು ಮಾಡತಕ್ಕಂಥ ಮನಸ್ಸೂ ಕೂಡಾ ಇಲ್ಲ. Special Component Plan fund they have locked up. We know who are those people. The time has come. You have to warn them. In turn, I also request them not to do so. It will go worse if you treat us like that. You provoke us. I request you not to provoke us by telling anti-slogans. You come out. Challeng us. Take the statistics. ಆ ರೀತಿ ಮಾತನಾಡುವ ಹಾಗಿದ್ದರೆ, ನಮ್ಮ ಜೊತೆಯಲ್ಲಿ ಚರ್ಚೆ ಮಾಡುವ ಹಾಗಿದ್ದರೆ ಅಂಕಿಸಂಖ್ಯೆ ಇಟ್ಟು ಮಾತನಾಡೋಣ. ಯಾರು ನಮ್ಮ ಈ ಮೀಸಲಾತಿ ನೀತಿಯನ್ನು ವಿರೋಧ ಮಾಡುತ್ತಿದ್ದಾರೋ ಅವರು ನಮ್ಮ ಜೊತೆಯಲ್ಲಿ ಚರ್ಚೆ ಮಾಡಲಿಕ್ಕೆ ಬನ್ನಿ ಎಂದು ಈ ಸದನದ ಮೂಲಕ ಸ್ಪಷ್ಟಪಡಿಸುತ್ತೇನೆ. ಇದು ಮೂಲಭೂತವಾಗಿ ಸಮಾಜದಲ್ಲಿ ತುಳಿತಕ್ಕೆ ಈಡಾಗಿರತಕ್ಕಂಥ ವ್ಯಕ್ತಿಗೆ ಕೊಟ್ಟಿರತಕ್ಕಂಥ ಸವಲತ್ತು, ಇದು ಕಾನ್‌ಸ್ಟಿಟ್ಯೂಷನಲ್ ಗ್ಯಾರಂಟಿ ಸ್ಕೀಮ್. ಇದರಲ್ಲಿ ಮಿಸ್-ಮ್ಯಾನೇಜ್ ಆಗುತ್ತಿದೆ. ಇದರಿಂದ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ, ಇದರಲ್ಲಿ laughing stock ಆಗಿದೆ ಓದತಕ್ಕಂಥ ಮಕ್ಕಳಿಗೆ ಸರ್ಕಾರದವರು ಹಾಸ್ಟೆಲ್ ಅನುಕೂಲ ಕೊಟ್ಟರೆ ಆ ಹುಡುಗರನ್ನು ಸರ್ಕಾರದ ಮಕ್ಕಳು ಎಂದು ಹೇಳಿಕೊಳ್ಳುವರು. ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿ ಇಂಗ್ಲೀಷ್‌ನಲ್ಲಿ ೭೭ ಅಂಕ ತೆಗೆದುಕೊಂಡು ಪಾಸಾಗಿದ್ದಕ್ಕೆ ಆ ಮಾಸ್ತರರು ಆ ವಿದ್ಯಾರ್ಥಿ ಕೈಯ ಗಿಣ್ಣಿಗೆ ಹೊಡೆದಿದ್ದಾರೆ. ಅದನ್ನು ನಾನು ಕಣ್ಣಾರೆ ನೋಡಿರತಕ್ಕಂಥವನು, ಕಿವಿಯಾರೆ ಕೇಳಿತಕ್ಕಂಥವನು, ಆದುದರಿಂದ ಈ ಮೀಸಲಾತಿ ಸೌಲಭ್ಯ ಈ ದೇಶದಲ್ಲಿ ಕಂಟಿನ್ಯೂ ಆಗಬೇಕು. ಮೀಸಲಾತಿ ಸೌಲಭ್ಯ ಎಲ್ಲಿಯುವರೆಗೆ ಕಂಟಿನ್ಯೂ ಆಗಬೇಕು ಎಂದರೆ ಎಲ್ಲಿಯುವರೆಗೆ ನಮಗೆ ಸಮಾನತೆ ಇರುವುದಿಲ್ಲವೋ, ಎಲ್ಲಿಯುವರೆಗೆ ಇನ್-ಈಕ್ವಾಲಿಟಿ ಎಕ್ಸಿಸ್ಟೆನ್ಸ್ ಆಗುತ್ತದೋ ಅಲ್ಲಿಯವರೆಗೂ ಈ ಮೀಸಲಾತಿ ಬೇಕು. ಆದುದರಿಂದ ಈ ಮೀಸಲಾತಿ ನೀತಿ ಮುಂದುವರೆಯಬೇಕು. ಸಮಾಜದಲ್ಲಿ ಈಕ್ವಾಲಿಟಿ ಬರುವ ಹಾಗೆ ನಾವು ನೀವು ಎಲ್ಲರೂ ರಾಜಕೀಯವನ್ನು ಬದಿಗೊತ್ತಿ ಕೆಲಸಮಾಡಬೇಕು. ಇವತ್ತು ಅಧಿಕಾರದಲ್ಲಿ ರಾಜೀವ್‌ಗಾಂಧಿ ಇರಬಹುದು, ಅಥವಾ ವಿ.ಪಿ. ಸಿಂಗ್ ಇರಬಹುದು ಅಥವಾ ಇನ್ಯಾರೇ ಇರಬಹುದು, ಮುಖ್ಯವಾಗಿ ಈ ಒಂದು ಸಮಾಜದಲ್ಲಿರತಕ್ಕ ಮೂಲಭೂತ ಸಮಸ್ಯೆಯ ಬಗ್ಗೆ ಪರಿಹಾರವನ್ನು ಕಂಡು ಹಿಡಿಯಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಕ್ರಾಂತಿ ಆಗುತ್ತದೆ ಎಂಬ ಮುನ್ನೆಚ್ಚರಿಕೆ ಇಟ್ಟುಕೊಳ್ಳಬೇಕಾಗುತ್ತದೆ. ನಾವು ಮೀಸಲಾತಿ ಮುಂದುವರಿಕೆಯ ಬಗ್ಗೆ ವಿರೋಧ ವ್ಯಕ್ತಮಾಡುತ್ತಿಲ್ಲ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇವೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಗೆ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಒಂದೆರಡು ಅನಿಸಿಕೆಗಳನ್ನು ಹೇಳಲು ಬಯಸುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದವು. ಸ್ವಾತಂತ್ರ್ಯ ಬಂದಾಗಿನಿಂದಲೂ ಸಹ ಈ ಮೀಸಲಾತಿ ಪದ್ಧತಿ ಇದೆ ನಾವು ೨೧ನೇ ಶತಮಾನಕ್ಕೆ ಹೋಗುತ್ತಿದ್ದೇವೆ ಎಂಬ ಕೂಗು ಇದೆ. ಈ ಸಿಟ್ಟಿನಲ್ಲಿ ನಾವು ಯೋಚನೆ ಮಾಡಿದಾಗ ಹಳ್ಳಿಗಳಲ್ಲಿ ಈ ಒಂದು ಮೀಸಲಾತಿಯ ಫಲ ಯಾರಿಗೆ ತಲುಪಿದೆ? ರಾಜ್ಯ ಮತ್ತು ರಾಷ್ಟ್ರದ ಶ್ರೀಮಂತ ಹರಿಜನರಿಗೆ, ಶ್ರೀಮಂತ ಪರಿಶಿಷ್ಟರಿಗೆ ಇದು ತಲುಪುತ್ತಿದೆಯೇ ವಿನಹ ನಮ್ಮ ಹಳ್ಳಿಗಳಲ್ಲಿ ಚಪ್ಪಲಿ ಹೊಲಿಯುತಕ್ಕ, ಜಮೀನಿನಲ್ಲಿ ಕೂಲಿ ಕೆಲಸ ಮಾಡತಕ್ಕ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಈ ಮೀಸಲಾತಿಯ ಫಲ ತಲುಪಿಲ್ಲ ಎನ್ನತಕ್ಕ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಈ ಮಸೂದೆಯ ಬಗ್ಗೆ ಸದನದಲ್ಲಿ ಮಾತನಾಡುತ್ತಾ ಎಲ್ಲ ಮಾನ್ಯ ಸದಸ್ಯರು ಒಕ್ಕೊರಲಿನಿಂದ ಈ ಮಸೂದೆಗೆ ಒಪ್ಪಿಗೆ ಕೊಡಬೇಕು ಎಂದು ಬೆಳಿಗ್ಗೆಯಿಂದ ಹೇಳಿರುವುದನ್ನು ನಾವು ನೋಡಿದ್ದೇವೆ. ಕಳೆದ ೪೦ ವರ್ಷಗಳಿಂದ ಯಾರು ಈ ಮೀಸಲಾತಿ ಫಲವನ್ನು ಅನುಭವಿಸುತ್ತಿದ್ದಾರೆ, ಅವರಿಗೆ ಈ ಮೀಸಲಾತಿ ಮುಂದುವರಿಕೆಯ ಫಲ ತಲುಪುತ್ತಿದೆಯೇ ವಿನಹ ಗ್ರಾಮಾಂತರ ಪ್ರದೇಶದಲ್ಲಿ ಈ ಮೀಸಲಾತಿ ತಲುಪುತ್ತಿಲ್ಲ ಎನ್ನುವ ವಿಚಾರವನ್ನು ಸಹ ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ. ಈ ಮೀಸಲಾತಿ ನಿಯಮವನ್ನು ಬದಲಾವಣೆ ಮಾಡಬೇಕು. ಇದುವರೆಗೆ ಮೀಸಲಾತಿ ಪಡೆದುಕೊಂಡಿರುವವರು ತ್ಯಾಗ ಮನಸ್ಸು ಮಾಡಿ ಹಳ್ಳಿಗಳಲ್ಲಿ ಮೀಸಲಾತಿಯನ್ನು ಪಡೆದುಕೊಳ್ಳದಿರೆ

ತಕ್ಕಂಥವರಿಗೆ ಇದು ತಲುಪುವ ಹಾಗೆ ಒಂದು ಅವಕಾಶವನ್ನು ಮಾಡಿಕೊಡಬೇಕು. ಹೀಗೆ ಆದರೆ ಈಗಿನ ಪರಿಸ್ಥಿತಿ ಸರಿಹೋಗುತ್ತದೆ ಎಂದು ನನ್ನ ಭಾವನೆ. ಇಷ್ಟು ಹೇಳಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಂದಿರತಕ್ಕ ಈ ಮಸೂದೆಗೆ ಬೆಂಬಲವನ್ನು ವ್ಯಕ್ತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಾಟೀಲ್ ಬಾಬಾಗೌಡ ರುದ್ರಗೌಡ (ಕಿತ್ತೂರು). - ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ೩೩೪ನೇ ಕಲಮ್, ೭೯ನೇ ತಿದ್ದುಪಡಿ ಪ್ರಕಾರ ಇನ್ನೂ ಹತ್ತು ವರ್ಷಗಳ ಕಾಲ ಮೀಸಲಾತಿ ಇರಬೇಕು ಎನ್ನುವ ವಿಚಾರವನ್ನು ಚರ್ಚೆಗೆ ಇಟ್ಟಿದ್ದಾರೆ. ಕರ್ನಾಟಕ ಎಲ್ಲಾ ಗ್ರಾಮೀಣ ಪ್ರದೇಶದ ಜನರ ಪರವಾಗಿ ನಾವು ಇದನ್ನು ಅನುಮೋದಿಸುತ್ತಿದ್ದೇವೆ. ಆದರೆ ಈ ಜಾತಿ ಪದ್ಧತಿಯಿಂದ ಬೆಳೆದು ಬಂದಂತಹ ಅಸಮಾನತೆಯನ್ನು ೧೦ ವರ್ಷಗಳಲ್ಲಿ ನೀಗಿಸುತ್ತೇವೆ ಎನ್ನುವ ಮಾತನ್ನು ನಾವು ತಿಳಿದುಕೊಂಡರೆ ಅದು ಬಹುಶಃ ಆತ್ಮ ವಂಚನೆ ಆಗುತ್ತದೆ ಎನ್ನುವುದು ನನ್ನ ಭಾವನೆ. ಈ ಒಂದು ಸಂಪ್ರದಾಯದಂತೆ ೧೦ ವರ್ಷಗಳಿಗೊಮ್ಮೆ ತಿದ್ದುಪಡಿ ಮಾಡಿದರೆ ಅದು ಒಂದು ಸಂಪ್ರದಾಯಸ್ಥ ಕ್ರಮದಂತೆ ಅಸಮಾನತೆಯನ್ನು ಬದಲಾಯಿಸದೆ ಅದನ್ನು ಇನ್ನೂ ೧೦ ವರ್ಷಗಳ ಕಾಲ ಎಕ್ಸ್‌ಟೆನ್‌ಷನ್ ಮಾಡುವುದು ಆಗಿದೆ. ಎಕ್ಸ್‌ಟೆನ್‌ಷನ್ ಮಾಡುವ ಮೂಲಕ ಅಸಮಾನತೆಯನ್ನು ಹೋಗಲಾಡಿಸುತ್ತೇವೆ ಎನ್ನುವ ವಿಶ್ವಾಸ ನಮಗೆ ಇಲ್ಲ. ಇದಕ್ಕೆ ಕಾರಣ ಏನು ಅಂದರೆ ಸರ್ಕಾರಗಳು ರೂಪಿಸಿಕೊಂಡಿರತಕ್ಕ ಸೋಷಿಯೋ ಎಕನಾಮಿಕ್ ಪ್ರೋಗ್ರಾಮ್‌ಗಳು ಏನಿವೆ, ಈ ಎಲ್ಲ ಕಾರ್ಯಕ್ರಮಗಳಲ್ಲೂ ಇವರು ಸೋತಿದ್ದಾರೆ ಈ ಕಾರ್ಯಕ್ರಮಗಳು ಅಷ್ಟೊಂದು ಯಶಸ್ವಿ ಕಾರ್ಯಕ್ರಮಗಳಲ್ಲ. ಈ ಕಾರ್ಯಕ್ರಮಗಳಿಂದ ಒಂದು ಅಸಮಾನತೆಯನ್ನು ನೀಗಿಸುವಲ್ಲಿ ಸರ್ಕಾರ ಫಲಕಾರಿ ಆಗಿಲ್ಲ ಎನ್ನುವ ವಿಚಾರ ನಮ್ಮದು. ಈಗಲಾದರೂ ಈ ಕಾರ್ಯಕ್ರಮಗಳನ್ನು ಬದಲಾವಣೆ ಮಾಡಬೇಕು ಒಂದು ಸಂಪ್ರದಾಯದಂತೆ ಈ ಕಾರ್ಯಕ್ರಮಗಳು ಬೆಳೆದು ಬಂದಿವೆ. ಇವುಗಳನ್ನು ಬದಲಾವಣೆ ಮಾಡಿ ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಒಂದು ಬದಲಾವಣೆ ತಂದಾಗ ಮಾತ್ರ ಈ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ. ಈ ಬದಲಾವಣೆ ಶಾಸನಸಭೆಗಳ ಮತ್ತು ಸರ್ಕಾರಗಳ ಗುಣಮಟ್ಟದ ಮೇಲೂ ಅವಲಂಭಿಸಿದೆ. ಯಾವುದೇ ಸರ್ಕಾರ ಇದನ್ನು ಬಗೆಹರಿಸುವುದಕ್ಕೆ ಸಮರ್ಥವಾಗಿರಬೇಕು. ಶಾಸನಸಭೆ ಮತ್ತು ಸರ್ಕಾರ ಈ ಒಂದು ಅಸಮಾನತೆಯನ್ನು ನೀಗಿಸಲಿಲ್ಲ ಎಂದರೆ ನಾವು ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಮರ್ಥರಲ್ಲ ಎಂಬುದನ್ನು ಸಾಬೀತು ಮಾಡಿಕೊಂಡಂತೆ ಆಗುತ್ತದೆ. ಆದಕಾರಣ ಈಗಲಾದರೂ ಈ ಒಂದು ಸಾಂಪ್ರದಾಯಿಕ ಬೇವಣಿಗೆಯಾಗದೆ ನಾವು ಮೂಲಭೂತವಾಗಿ ಬದಲಾವಣೆ ಮಾಡುವಂಥ ವಿಚಾರಗಳಲ್ಲಿ ತೊಡಗಬೇಕು ಎನ್ನುವುದು ನನ್ನ ವಿಚಾರ. ಜೊತೆಗೆ ನಮ್ಮ ಸ್ನೇಹಿತರು ಈಗತಾನೆ ಸರ್ಕಾರ ಕೊಡುವಂಥ ಈ ಅವಕಾಶಗಳನ್ನು ಪಟ್ಟಣ ಪ್ರದೇಶದ ಹಿಂದುಳಿದ ವರ್ಗ ಕಬಳಿಸಬಹುದು ಎಂದು ಹೇಳಿದರು. ಆದಕಾರಣ ಪರ್ಸೆಂಟೇಜ್ ನಿಗದಿ ಮಾಡಿ. ಗ್ರಾಮೀಣ ಪ್ರದೇಶದಲ್ಲಿರತಕ್ಕ ಈ ವರ್ಗಕ್ಕೆ ಎಷ್ಟು, ಮತ್ತು ಪಟ್ಟಣ ಪ್ರದೇಶದಲ್ಲಿರುವಂಥ ವರ್ಗಕ್ಕೆ ಇಷ್ಟಿರಬೇಕು ಎಂದು ನಿಗದಿ ಮಾಡಿ. ೧೮ ಪರ್ಸೆಂಟ್ ಮೀಸಲಾತಿ ಏನಿದೆ ಇದನ್ನು ಪ್ರತ್ಯೇಕ ಮಾಡಿ ಗ್ರಾಮಾಂತರ ಪ್ರದೇಶಕ್ಕೆ ಇಷ್ಟಿರಬೇಕು ಮತ್ತು ಪಟ್ಟಣ ಪ್ರದೇಶಕ್ಕೆ ಇಷ್ಟಿರಬೇಕು ಎಂದು ನಿಗದಿಮಾಡಬೇಕು ಎನ್ನುವಂಥ ವಿಚಾರ ನಮ್ಮದು. ಇದರ ಜೊತೆಗೆ ಖಾಸಗಿ ಉದ್ಯಮಗಳು. ಸರ್ಕಾರ ಕೋಟ್ಯಾಂತರ ರೂಪಾಯಿಗಳ ಪ್ರೋತ್ಸಾಹಧನವನ್ನು ಈ ಖಾಸಗಿ ಉದ್ಯಮಕ್ಕೆ ಕೊಡುತ್ತಿದೆ, ಆದರೆ ಈ ಉದ್ದಿಮೆಗಳಲ್ಲಿ ಪರಿಶಿಷ್ಟ ವರ್ಗದವರ ಪಾರ್ಟಿಸಿಪೇಷನ್ ಇಲ್ಲ ಇವರಿಗೆ ಮೀಸಲಾತಿ ಇಲ್ಲ. ಖಾಸಗಿ ಉದ್ದಿಮೆಗಳಿಗೆ ನಮ್ಮ ಸರ್ಕಾರ ಏನು ಆರ್ಥಿಕವಾಗಿ ಸಹಾಯ ಮಾಡುತ್ತಿರುವುದರಿಂದ ಅಲ್ಲಿಯೂ ಕೂಡ ಈ ವರ್ಗದವರಿಗೆ ಅವಕಾಶಗಳನ್ನು ಕೊಡುವಂತೆ ಶಾಸನಗಳನ್ನು ಮಾಡಬೇಕು ಎನ್ನತಕ್ಕಂಥ ಸಲಹೆಯೊಂದಿಗೆ ಮಾನ್ಯ ಸಚಿವರು ತಂದಂಥ ಈ ತಿದ್ದುಪಡಿಯನ್ನು ಅನುಮೋದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಮಂತ್ರಿಗಳು ತಂದಿರತಕ್ಕಂಥ ರ್‍ಯಾಟಿಫಿಕೇಷನ್ ಏನಿದೆ ಇದಕ್ಕೆ ನಾನು ಸ್ವಾಗತವನ್ನು ಬಯಸುತ್ತಾ ಕೆಲವು ವಿಷಯಗಳನ್ನು ತಮ್ಮ ಮುಂದೆ ಹಾಗೂ ಸದನದ ಮುಂದೆ ಇಡಲು ಇಚ್ಛಿಸುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಮೀಸಲಾತಿಯನ್ನು ರಾಜಕೀಯ ಕ್ಷೇತ್ರದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರದಲ್ಲೂ ಸಹ ಕೊಟ್ಟಿದ್ದಾರೆ. ಇದನ್ನು ನಮ್ಮ ರಾಜ್ಯಾಂಗದ ೧೫ ಮತ್ತು ೧೬ನೇ ಆರ್ಟಿಕಲ್‌ನಲ್ಲಿ ತಿಳಿಸಿದ್ದಾರೆ. ಮತ್ತು ೪೬ನೇ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನಲ್ಲೂ ಸಹ ಹೇಳಿದ್ದಾರೆ. ಇದರ ಅವಶ್ಯಕತೆ ಏನೆಂದರೆ, ರಾಜ್ಯಾಂಗ ರಚನೆ ಕಾಲದಲ್ಲಿ ಪ್ರಿಯಾಂಬಲ್‌ನಲ್ಲಿ ಹೇಳಿರುವ ರೀತಿಯಲ್ಲಿ ಈ ದೇಶದ ಸರ್ವ ಜನಗಳಿಗೂ ರಾಜಕೀಯ ಕ್ಷೇತ್ರದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರದಲ್ಲೂ ಸಹ ನ್ಯಾಯ, ನೀತಿ, ಧರ್ಮ, ಸಮಾನತೆ ಎಲ್ಲವನ್ನೂ ಒದಗಿಸಿಕೊಡುತ್ತೇವೆ. ಸೋಶಿಯಲ್ ಜಸ್ಟೀಸ್, ಪೊಲಿಟಿಕಲ್ ಜಸ್ಟೀಸ್ ಎಕನಾಮಿಕ್ ಜಸ್ಟೀಸ್ ಎಲ್ಲಾ

ಕೊಡುತ್ತೇವೆ ಎಂದು ನಾವು ಪ್ರಾಮಾಣೀಕರಿಸಿ ಈ ರಾಜ್ಯಾಂಗವನ್ನು ರಚಿಸಿಕೊಂಡಿದ್ದೇವೆ. ಈ ಉದ್ದೇಶದಿಂದ ನಾವು ಈ ವರ್ಗದವರಿಗೆ ರಾಜಕೀಯ ಕ್ಷೇತ್ರದಲ್ಲಿ ಕೊಟ್ಟಿರತಕ್ಕ ಜಸ್ಟಿಫಿಕೇಷನ್ ಏನಿದೆ, ಅದರ ಸಮರ್ಥನೆ ಏನೆಂದರೆ ಹಿಂದುಳಿದಿರತಕ್ಕ ಜನಗಳಿಗೆ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ ಶಾಸನಸಭೆಗಳಿಗೆ ಅವಕಾಶ ಇರಬೇಕು, ರಾಜಕೀಯದಲ್ಲೂ ಅವರಿಗೆ ಪಾಲು ಇರಬೇಕು, ಒಂದು ಸಮ ಪಾಲು, ಸಮಭಾಗಿತ್ವಬೇಕು, ರಾಜಕೀಯದಲ್ಲಿ, ದೇಶದ ಆಡಳಿತದಲ್ಲಿ ಇವರಿಗೂ ಅವಕಾಶ ಇರಬೇಕು ಎನ್ನುವ ದೃಷ್ಟಿಯಿಂದ ರಾಜಕೀಯ ಕ್ಷೇತ್ರದಲ್ಲಿ ರಿಸರ್ವೇಷನ್ ಕೊಟ್ಟಿರತಕ್ಕಂಥಾದ್ದು ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ, ಈಗ ಇದನ್ನು ಮಾಡುವ ಕಾಲದಲ್ಲಿ ನಾವು ಪ್ರಜಾಪ್ರಭುತ್ವದ ಮಾದರಿಯನ್ನು ಅನುಸರಿಸಿದ್ದೇವೆ. ಪ್ರಜಾಪ್ರಭುತ್ವ ಜಾರಿ ಆಗಬೇಕಾಗಿದ್ದರೆ ಅದರಲ್ಲಿ ಡಿಕ್ಟೇಟರ್‌ಶಿಪ್ ಎನ್ನತಕ್ಕಂಥಾದ್ದು ಇರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಸರ್ವಾಧಿಕಾರ ಇರುವುದಿಲ್ಲ, ಒಂದುವೇಳೆ, ಈ ದೇಶದಲ್ಲಿರತಕ್ಕಂಥ ನಾನಾವರ್ಗಗಳ, ಕೋಮುಗಳ ಮತ್ತು ಮತಗಳ ಹಾಗೂ ಕ್ಷೇತ್ರಗಳಲ್ಲೂ ನಾನಾ ಭಾಗದ ಜನ ವಿಭಜನೆಯಾಗಿರತಕ್ಕ ಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಹಿಂದುಗಳು ಇರತಕ್ಕಂಥ ಕ್ಷೇತ್ರಗಳಲ್ಲಿ ಒಂದನೇ ವರ್ಗದ, ಎರಡನೇ ವರ್ಗದ, ಮೂರನೇ ವರ್ಗದ ಜನ ಒಂದುವೇಳೆ ರಾಜಕೀಯ ಕ್ಷೇತ್ರದಲ್ಲಿ ಬರದೇಹೋಗಿದ್ದರೆ ಬೇರೆಯವರಿಗೆ ಇದರಲ್ಲಿ ಅವಕಾಶವಿರುತ್ತಿರಲಿಲ್ಲ.

೩-೦೦ ಪಿ. ಎಂ.

ಒಂದೆರಡು ಕಮ್ಯುನಿಟಿಗಳು ಇಲ್ಲವೇ ವರ್ಗಗಳು ಶಾಶ್ವತವಾಗಿ ಅಧಿಕಾರವನ್ನು ಹಿಡಿದುಕೊಂಡರೆ, ಅದು ಅಧಿಕಾರಶಾಹಿಯಾಗುತ್ತದೆ. ಅದು ಪ್ರಜಾಪ್ರಭುತ್ವವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಸರ್ವಾಧಿಕಾರಕ್ಕೆ ದಾರಿಯಾಗುತ್ತದೆ. ಇವತ್ತು ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಇರುತ್ತದೋ ಅಲ್ಲಿಯವರೆಗೆ ಮೀಸಲಾತಿ ವ್ಯವಸ್ಥೆ ಇರಬೇಕು. ಸಮಾನತೆ ಎಲ್ಲ ಕ್ಷೇತ್ರಗಳಲ್ಲಿಯೂ ಬರಬೇಕು. ಅದು ನ್ಯಾಯ ಎಂದು ಕರೆಯಬಹುದು. ನಾವು ರಾಜ್ಯಾಂಗದಲ್ಲಿ ಕೂಡ ಸೋಷಿಯಲಿಸಂ ಎನ್ನುವ ಪದವನ್ನು ಒಪ್ಪಿಕೊಂಡಿದ್ದೇವೆ. ಸೋಷಿಯಲಿಸಂ ಬಗ್ಗೆ ವ್ಯಾಖ್ಯಾನ ಮಾಡುವುದಾದರೆ, ಯಾವುದೇ ಒಂದು ವರ್ಗ ಸಿಂಹಪಾಲನ್ನು ಅನುಭವಿಸಬಾರದು. ಅದು ಸೋಷಿಯಲಿಸಂ. ಇವತ್ತು ಪ್ರಜಾಪ್ರಭುತ್ವದಲ್ಲಿ ಮನಾಪಲಿಸ್ಟಿಕ್ ಟೆಂಡೆನ್ಸಿ ಹೋಗಬೇಕು. ಅದೇರೀತಿ ಸರ್ವಿಸ್ ಮ್ಯಾಟರ್ಸ್‌ನಲ್ಲಿ ಕೂಡ ಹೇಳಿದ್ದಾರೆ. ಇದರ ಬಗ್ಗೆ ವರಿಷ್ಠ ನ್ಯಾಯಾಲಯ ಕೂಡ ಟೆಂಡೆನ್ಸಿ ಎನ್ನುವ ಪದಕ್ಕೆ ವ್ಯಾಖ್ಯಾನ ನೀಡಿದೆ. ಸ್ಟ್ಯಾಚ್ಯುಟರಿ ಬಾಡಿಗಳಲ್ಲಿ, ಬೋರ್ಡುಗಳಲ್ಲಿ ಯಾವುದಾದರೊಂದು ಸೀಮಿತವಾದ ವರ್ಗ ಜಾಸ್ತಿ ಅವಕಾಶಗಳನ್ನು ತೆಗೆದುಕೊಂಡರೆ ಅದು ಮನಾಪಲಿಯಾಗುತ್ತದೆ. ಇದರ ಬಗ್ಗೆ ಸರ್ಕಾರ ಸರ್ವ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಯಾವುದೇ ಒಂದು ವರ್ಗಕ್ಕೆ ಸರ್ಕಾರಿ ಸೇವೆಯಲ್ಲಿ ಹೆಚ್ಚಿನ ಅವಕಾಶ ಕೊಟ್ಟರೂ ಅದು ಮನಾಪಲಿಸ್ಟಿ ಟೆಂಡೆನ್ಸಿಯಾಗುತ್ತದೆ. ಇದನ್ನು ತಪ್ಪಿಸುವ ಪ್ರಯತ್ನ ಮಾಡಬೇಕು. ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ನ್ಯಾಯಬದ್ಧವಾದ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಇವತ್ತು ಸರ್ಕಾರಿ ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾಗುತ್ತದೆ. ಸೇವೆಗಳಲ್ಲಿರುವವರಿಗೆ ಎಫಿಷಿಯನ್ಸಿಯನ್ನು ಪ್ರಧಾನವಾಗಿ ಕನ್ಸೀಡರ್ ಮಾಡಬೇಕೆಂದು ರಾಜ್ಯಾಂಗದಲ್ಲಿದೆ. ಯಾವ ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುತ್ತಾರೋ, ಆ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ವಿದ್ಯಾಭ್ಯಾಸದ ಮಟ್ಟ ಯಾವುದು ಇರಬೇಕೆಂಬುದನ್ನು ಗೊತ್ತು ಮಾಡಲಾಗಿದೆ. ಗುಮಾಸ್ತರ ಹುದ್ದೆಗೆ ಎಸ್.ಎಸ್.ಎಲ್.ಸಿ. ಇದೆ. ಆದರೂ ಇದು ಸಾಕಾಗುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಜಾಸ್ತಿ ಅಂಕಗಳನ್ನು ತೆಗೆದುಕೊಂಡು ಪಾಸಾಗಬೇಕು.

ಈ ವಿಚಾರದ ಬಗ್ಗೆ ತಾವು ಆಯಾಯ ಡಿಪಾರ್ಟ್‌ಮೆಂಟುಗಳಲ್ಲಾಗಲಿ ಅಥವಾ ಬೇರೆ ಕಡೆಗಳಲ್ಲಿ ಗಮನಹರಿಸಿ ನೋಡುವುದು ಬಹಳ ಒಳ್ಳೆಯದು. ನಿಜವಾಗಿ ಸೇವೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮತ್ತು ಬೇರೆ ವರ್ಗದ ಜನಗಳಿಗೆ ಅವಕಾಶ ಸಿಕ್ಕಬೇಕಾದರೆ ಅದರ ಬಗ್ಗೆ ಹೆಚ್ಚು ಗಮನಹರಿಸಿ ನೋಡಬೇಕಾಗುತ್ತದೆ, ಇಲ್ಲದೇ ಹೋದರೆ ಫ್ರಾಡ್ ಆಗತಕ್ಕ ಪರಿಣಾಮ ಉಂಟಾಗುತ್ತದೆ. ಆದ್ದರಿಂದ, ಅದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಈಗ ಸಚಿವಾಲಯದ ಸ್ಟಾಫ್ ಬಗ್ಗೆಯೇ ತೆಗೆದುಕೊಂಡರೆ ಸೆಕೆಂಡ್ ಡಿವಿಜನ್ ಕ್ಲರ್ಕ್, ಫಸ್ಟ್ ಡಿವಿಜನ್ ಕ್ಲರ್ಕ್, ಕ್ಲಾಸ್ ಒನ್ ಆಫೀಸರ್ ಕ್ಲಾಸ್ ಟು ಆಫೀಸರ್ ಎಂದು ಇರುತ್ತಾರೆ. ಅವರುಗಳಲ್ಲಿರತಕ್ಕ ಎಫಿಷಿಯೆನ್ಸಿ ನೋಡಬೇಕಾಗುತ್ತದೆ. ಒಬ್ಬ ಟೈಪ್ ಮಾಡುವವನಾಗಲಿ, ಒಬ್ಬ ಗುಮಾಸ್ತನಾಗಲಿ ಅವನು ಎಸ್. ಎಸ್. ಎಲ್, ಸಿ. ಪಾಸ್ ಮಾಡಿದರೆ ಸಾಕೆ ? ಶೇಕಡಾ ೮೦ ಅಂಕಗಳನ್ನು ತೆಗೆದುಕೊಂಡವನು ಮಾಡುತ್ತಾನೆಯೇ ಹೊರತು ಬೇರೆಯವರು ಮಾಡುವುದಿಲ್ಲ. ಆದ್ದರಿಂದ, ಈ ವಿಷಯಗಳ ಬಗ್ಗೆ ಬಹಳ ಪಾಯಿಂಟೆಡ್ ಅಟೆನ್‌ಷನ್ ತೆಗೆದುಕೊಂಡು ಸರ್ಕಾರ ಪರಿಶೀಲನೆ ಮಾಡಬೇಕೆಂದು ಮತ್ತೊಂದು ಸಲಹೆಯನ್ನು ತಮಗೆ ಕೊಡುತ್ತೇನೆ. ಇನ್ನು ಈ ಜನರು ಸೇವೆಗಳಲ್ಲಿ

ಏತಕ್ಕಾಗಿ ಇಷ್ಟರ ಮಟ್ಟಿಗೆ ಕಡಿಮೆಯಾಗುತ್ತಾರೆ ಎಂಬರೆ ನಾವು ಈ ಸೇವೆಗಳ ಬಗ್ಗೆ ರೆವ್ಯೂ ಮಾಡತಕ್ಕ ಕೆಲಸ ಮಾಡುವುದಿಲ್ಲ. ಈ ಜನರಿಗೆ ಈ ಸೇವೆಗಳು ಸಿಕ್ಕಿದೆಯೇ, ಈ ಜನಗಳಿಗೆ ಕೊಟ್ಟಿರತಕ್ಕ ಸೇಫ್‌ಗಾರ್ಡ್, ರಕ್ಷಣೆ ಏನಿವೆ ಅವು ಪರಿಣಾಮಕಾರಿಯಾಗಿ ಜಾರಿ ಆಗಿವೆಯೇ ಆಗದೇ ಇದ್ದರೆ ಏನೇನು ಕುಂದುಕೊರತೆಗಳು ಇವೆ, ಅವುಗಳನ್ನು ಯಾವರೀತಿ ನಿವಾರಣೆ ಮಾಡಬೇಕು ಎಂಬ ದೆಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿಲ್ಲವೆಂಬುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದ ಸೇವೆಗಳಲ್ಲಿ ಎಲ್ಲವೂ ಸರಿಯಾಗಿದೆಯೇ, ಇಲ್ಲವೇ ಎನ್ನುವುದನ್ನು ನೋಡುವುದಕ್ಕೆ ಒಂದು ಸಬ್ ಕಮಿಟಿ ಇತ್ತು. ಅಥವಾ ಇನ್ನಾವುದೋ ಒಂದು ಏಜೆನ್ಸಿ ಇರುತ್ತಿತ್ತು. ಈಗ ಯಾವ ಯಾವ ದಿಕ್ಕಿನಲ್ಲಿ ಎಷ್ಟರಮಟ್ಟಿಗೆ ರೆವ್ಯೂ ಆಗಿದೆ ಎನ್ನತಕ್ಕದ್ದನ್ನು ಸಭೆಗೆ ತಿಳಿಸಿದರೆ ಅದರಲ್ಲಿ ಇನ್ನೂ ಏನಾದರೂ ನ್ಯೂನತೆಗಳಿದ್ದರೆ, ಸದಸ್ಯರು ತಮ್ಮ ಸಲಹೆಗಳನ್ನು ಕೊಡಲಿಕ್ಕೆ ಅನುಕೂಲ ಇರತ್ತದೆ. ಬಹುಶಃ ಇದನ್ನು ನಾವು ಏತಕ್ಕಾಗಿ ಕೇಳಬೇಕಾಗಿದೆ. ಎಂದರೆ ರೆಪ್ರಸೆಂಟೇಟೀವ್ ಕ್ಯಾರೆಕ್ಟರ್ ಅಥವಾ ಎಲೆಕ್ಟೋರಲ್ ಸಿಸ್ಟಮ್‌ನಲ್ಲಿ ಸ್ವಲ್ಪ ಕೊರತೆ ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಹೀಗಾಗಿ ನಮಗೆ ಕೊಟ್ಟಿರತಕ್ಕ ಜಾಯಿಂಟ್ ಎಲೆಕ್ಟೋರಲ್ ಸಿಸ್ಟಮ್ ಸೆಪರೇಟ್ ಆಗಬೇಕೆಂದು ಹೇಳುವುದಿಲ್ಲ ಆ ಸಿಸ್ಟಮ್‌ನಲ್ಲಿರತಕ್ಕ ಕೊರತೆ ಏನು ಎಂದು ಹೇಳುತ್ತೇನೆ ಈ ಜಾಯಿಂಟ್ ಎಲೆಕ್ಟೋರಲ್ ಸಿಸ್ಟಮ್‌ನಲ್ಲಿ ನಿಜವಾಗಿ ಬಹಳ ಹೆಚ್ಚಿನ ಜನ ಪ್ರತಿನಿಧಿಗಳು ನಾನ್-ಷೆಡ್ಯೂಲ್ಡ್ ಕ್ಯಾಸ್ಟ್; ಆದ್ದರಿಂದ ಅವರು ರಿಯಲ್ ರೆಪ್ರೆಸೆಂಟೇವ್ ಆಗುವುದಿಲ್ಲ. ಚಿಂತೆಯಿಲ್ಲ, ರಿಯಲ್ ರೆಪ್ರಸೆಂಟೇಟೀವ್ ಆಗದೇ ಇದ್ದರೂ ಚಿಂತೆಯಿಲ್ಲ; ಈ ಸದನದಲ್ಲಿ ಸಹ ತಮಗೆ ಸೇರಿರತಕ್ಕ ಜನಗಳ ಕುಂದುಕೊರತೆಗಳನ್ನು ಧೈರ್ಯವಾಗಿ ಮನಬಿಚ್ಚಿ ಹೇಳುವ ಪರಿಸ್ಥಿತಿಯಲ್ಲಿ ಯಾರು ಇರುವುದಿಲ್ಲ. ಏತಕ್ಕೆ ಎನ್ನುವ ಪ್ರಶ್ನೆ ಬರುತ್ತದೆ. ಅದನ್ನು ಹೇಳುವುದಾದರೆ, ರಾಜಕೀಯದ ಕೆರಿಯರ್. ನಮಗೆ ಇರತಕ್ಕಂಥ ಪ್ರಾಸ್ಪೆಕ್ಟ್ಸ್ ಕಡಿಮೆ ಎನ್ನುವ ಹೆದರಿಕೆ ಅವರಲ್ಲಿರುವುದರಿಂದ ಮಾತನಾಡುವುದಿಲ್ಲ ಆದ್ದರಿಂದ, ಈ ಸಿಸ್ಟಮ್‌ನಲ್ಲಿರತಕ್ಕ ಕೊರತೆಯಿಂದ ನಿಧಾನವಾಗಿದೆ ಎಂದು ಹೇಳಬಹುದು. ಈ ರಿಸರ್ವೇಷನ್ ೧೦ ವರ್ಷ ಇದ್ದುದು ಮತ್ತೆ ಮುಂದೆ ಹೋಗುವುದಕ್ಕೆ ಇವೆಲ್ಲಾ ಕಾರಣ ಎಂದು ತಿಳಿಸುತ್ತೇನೆ, ಇದರ ಬಗ್ಗೆ ಸದನದ ಸದಸ್ಯರು ಸಾರ್ವಜನಿಕರು ಈ ದಿಕ್ಕಿನಲ್ಲಿ ವಿಚಾರವಿನಿಮಯ ಮಾಡಿಕೊಂಡರೆ ಬಹಳ ಒಳ್ಳೆಯದು ರಿಸರ್ವೇಷನ್ ಹೋಗಬೇಕು ಎನ್ನುವುದರಲ್ಲಿ ನಾನು ಒಬ್ಬ ನಮಗೆ ಯಾವ ರಿಸರ್ವೇಷನ್ನೂ ಬೇಡ ಈ ಸದನದಲ್ಲಿರತಕ್ಕ ಮಾನ್ಯ ಸದಸ್ಯರು ಹಿಂದೆ ಹೇಳಿದ ರೀತಿಯಲ್ಲಿ ನಮ್ಮಲ್ಲಿರತಕ್ಕ ಈ ಜಾತಿ ಪದ್ಧತಿ, ವರ್ಣಪದ್ಧತಿ ದೆಸೆಯಿಂದ ಪ್ರಾರಂಭ ಆಯಿತು ಆಗಿದ್ದ ಮೇಲೆ ಅನ್‌ಟಚಬಿಲಿಟಿ ಅನ್ನು ಅಬಾಲಿಷ್ ಮಾಡುವ ರೀತಿಯಲ್ಲಿ ಈ ಕ್ಯಾಸ್ಟ್ ಸಿಸ್ಟಮ್ ಸಹ ಏತಕ್ಕೆ ಅಬಾಲಿಷ್ ಮಾಡಬಾರದು. ಆ ರೀತಿ ಆದರೆ ಯಾವ ರಿಸರ್ವೇಷನ್ ಬೇಡ, ನಮಗೆ ಬೇಕಾಗಿರುವುದು ಏನು? ದೇಶಕ್ಕೆ, ಹಾಗು ಸರ್ವರಿಗೆ ಬೇಕಾಗಿರುವಂಥಾದ್ದು ಮೊದಲು ಶಾಂತಿ, ಸುಖ ಬೇಕು. ಇವೆರಡು ಇದ್ದರೆ ಸಾಕು ಇದನ್ನು ಕಲ್ಪನೆ ಮಾಡಿಕೊಂಡು ಯಾವ ಮೆಥಡ್ ಆದರೂ ಮಾಡಿಕೊಳ್ಳಿ. ಆದ್ದರಿಂದ, ಈ ದಿಕ್ಕಿನಲ್ಲಿ ನಾವು ಮನಬಿಚ್ಚಿ ಕೆಲವು ವಿಷಯಗಳನ್ನು ತಿಳಿಸಿದರೆ, ಕುಂದುಕೊರತೆಗಳ ಬಗ್ಗೆ ಸಲಹೆಗಳನ್ನು ಕೊಡುವುದರಿಂದ ದೇಶದ ಜನತೆಗೆ ಕಲ್ಯಾಣವಾಗುತ್ತದೆ. ಜೊತೆಗೆ ಎಲ್ಲರೂ ನೇಷನ್, ಇಂಟಿಗ್ರಿಟಿ, ಯೂನಿಟಿ ಸಾಲಿಡ್ಯಾರಿಟಿ ಎಂದು ಏನು ಹೇಳುತ್ತೇವೆ, ಅದು ಬರಲಿಕ್ಕೆ ಸಾಧ್ಯ ಇದರಿಂದ ಕೆಲವು ಸದಸ್ಯರಿಗೆ ಮನಸ್ಸಿನಲ್ಲಿ ನೋವು ಆಗಬಹುದು. ಆದರೂ ಸಹ ನಾನು ಹೇಳುತ್ತಿರುವುದು ಸರಿ ಇದೆ. ಇದು ಕ್ವೆಶ್ಚನ್ ಇದ್ದ ಹಾಗೆ ನಿಧಾನವಾದರೂ ಪೂರ್ಣಗೊಳಿ ಆಗುತ್ತದೆ. ಇದರ ಬಗ್ಗೆ ಗಮನಹರಿಸಿ ಒಳ್ಳೆಯ ಸಲಹೆಗಳನ್ನು ಕೊಡುತ್ತಾ ಬಂದರೆ ನಾನು ಹೇಳುವುದು ಸರಿ. ನಾನು ಹೇಳತಕ್ಕಂಥಾದ್ದನ್ನು ಸರಕಾರ ದಯವಿಟ್ಟು ಕೇಳಬೇಕು, ಪ್ರಜಾಪ್ರಭುತ್ವ ಪದ್ಧತಿ ಚೆನ್ನಾಗಿ ಕೆಲಸ ಮಾಡಬೇಕಾಗಿದ್ದರೆ ಯಾವಾಗಲೂ ಫ್ರೀ ಡಿಸ್ಕಷನ್, ಫುಲ್ ಡಿಸ್ಕಷನ್ ಫೇರ್‌ಲೆಸ್ ಡಿಸ್ಕಷನ್ ಆಗಬೇಕು. ಹಾಗಾದರೆ ಮಾತ್ರ ನಾವು ನಮ್ಮ ಮನೆ ಬಿಚ್ಚಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಈ ರೀತಿ ಮಾಡಿದ್ದೇ ಆದರೆ ಈ ದೇಶದ ಜನರ ಕಲ್ಯಾಣವಾಗುವ ಕಾಲ ಬಹಳ ದೂರ ಇರುವುದಿಲ್ಲ ನಾನು ಹಿಂದೆ ಎಸ್.ಸಿ.ಎಸ್.ಟಿ. ಸಮಿತಿಯ ಸದಸ್ಯನಾಗಿದ್ದೆ ಇದು ಕರ್ನಾಟಕ ವಿಧಾನ ಮಂಡಲದ ವ್ಯಾಪ್ತಿಗೆ ಬರುತ್ತದೆ. ಆಗ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ರಿಸರ್ವೇಷನ್ ಇರಲಿಲ್ಲ. ಇದಕ್ಕೆ ಏನು ಕಾರಣವೆಂದು ಅಧಿಕಾರಿಗಳನ್ನು ವಿಚಾರಿಸಿದಾಗ ಅವರು ಇದು ಅದಕ್ಕೆ ಅಪ್ಲೈ ಆಗುವುದಿಲ್ಲ ಎಂದು ಹೇಳಿದರು. ಇದಕ್ಕೆ ಹಾಕಿರ ತಕ್ಕಂತಹ ಹಣ ಸಾರ್ವಜನಿಕರದ್ದು. ಇದು ಡೈರೆಕ್ಟರ್ಸ್ ದುಡ್ಡು ಅಲ್ಲ. ಆದರೂ ಕೂಡ ಇದಕ್ಕೆ ಏಕೆ ಅಪ್ಲೈ ಆಗುವುದಿಲ್ಲವೆಂದು ಇದನ್ನು ಅಲ್ಲೂ ಕೂಡ ಜಾರಿಗೆ ತರಬೇಕೆಂದು ಸ್ಪೆಷಲ್ ಅಮೆಂಡ್‌ಮೆಂಟ್ ಮಾಡಿದೆವು. ಪ್ರತಿಯೊಂದು ಇಲಾಖೆಯಲ್ಲೂ ಕೂಡ ಈ ಅಭ್ಯರ್ಥಿಗಳಿಗೆ ಇದರಿಂದಾಗಿ ಅನುಕೂಲ ವಾಯಿತು. ಈ ಮೀಸಲಾತಿ ಬಗ್ಗೆ ಮೇಲ್ಮಟ್ಟದಲ್ಲಿ ಒಳಗಡೆ ಇರತಕ್ಕಂತಹ ವಿಷಯಗಳು ಹೊರಕ್ಕೆ

ಬರಬೇಕು. ಅದರ ಬಗ್ಗೆ ಚರ್ಚೆ ಮಾಡಬೇಕು. ಆಗ ನಮ್ಮಲ್ಲಿ ಜಾತಿ ಪದ್ಧತಿ ಹೋಗಿ ಎಲ್ಲಾ ಜನರಿಗೂ ಕೂಡ ಸುಖ ಶಾಂತಿ ಸಿಗುತ್ತದೆ. ಆಗ ಮಾತ್ರ ದೇಶದಲ್ಲಿ ಒಂದು ಯೂನಿಟ್ ಸಾಲಿಡಾರಿಟಿ ಬರುವುದಕ್ಕೆ ಸಾಧ್ಯವಾಗುತ್ತದೆ ತಾವು ಎರಡು ಸಾರಿ ನನಗೆ ತಮ್ಮ ಭಾಷಣವನ್ನು ಮುಗಿಸಬೇಕೆಂದು ವಾರ್ನ್ ಮಾಡಿದ್ದೀರಿ. ಆದ್ದರಿಂದ ಇನ್ನೂ ಮುಂದುವರಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಪಿ. ಜಿ. ಆರ್. ಸಿಂಧ್ಯ. (ಕನಕಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಷ್ಟ್ರಪತಿಯವರಿಂದ ಬಂದಿರತಕ್ಕಂತಹ ಸಂವಿದಾನ ತಿದ್ದುಪಡಿಯನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು ಈ ಸದನದ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ವಿಧಾನ ಸಭೆಗಳಲ್ಲಿ ಮತ್ತು ಲೋಕಸಭೆಯಲ್ಲಿ ಇನ್ನೂ ಹತ್ತು ವರ್ಷಗಳ ಕಾಲ ಮೀಸಲಾತಿಯನ್ನು ಮುಂದುವರಿಸುವುದರ ಬಗ್ಗೆ ಏನು ಪ್ರಸ್ತಾವನೆಯನ್ನು ಮಂಡನೆ ಮಾಡಿದ್ದಾರೆ ಮತ್ತು ಅದಕ್ಕೆ ಅನುಮೋದನೆಯನ್ನು ಹಾಗೂ ನನ್ನ ಬೆಂಬಲ ಸೂಚಿಸಿ ನಾನು ಒಂದೆರಡು ಮಾತುಗಳನ್ನು ಈ ಸದನದ ನಮ್ಮ ಸದಸ್ಯರ ಜೊತೆಯಲ್ಲಿ ಹಂಚಿಕೊಳ್ಳಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಮೀಸಲಾತಿಯನ್ನು ಇಡುವುದರ ಬಗ್ಗೆ ಹಾಗೂ ಹತ್ತು ವರ್ಷಗಳನಂತರ ಇದನ್ನು ಪುನರ್ ವಿಮರ್ಶೆ ಮಾಡತಕ್ಕಂಥಾದ್ದು ಬಹಳ ಅಗತ್ಯವೆಂದು ನಮ್ಮ ಸಂವಿಧಾನವನ್ನು ರಚನೆ ಮಾಡಿದಂತಹ ನಾಯಕರು ಹೇಳಿ ಹೋಗಿದ್ದಾರೆ. ಈ ದೇಶದಲ್ಲಿ ಶಾಶ್ವತವಾಗಿ ಮೀಸಲಾತಿಯು ಇರಬೇಕೆನ್ನುವುದರ ತೀರ್ಮಾನವನ್ನು ಅವರು ಮಾಡಿ ಹೋಗಲಿಲ್ಲ. ಎಷ್ಟೊಂದು ಬುದ್ಧಿವಂತಿಕೆಯನ್ನು ಇದರಲ್ಲಿ ಉಪಯೋಗಿಸಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕಂತಹ ಈ ವರ್ಗಗಳಿಗೆ ಮೀಸಲಾತಿಯನ್ನು ಲೋಕಸಭೆ ಅಥವಾ ವಿಧಾನ ಸಭೆಯಲ್ಲಿ ಇರಬೇಕೆಂದು ಒಂದು ತೀರ್ಮಾನವನ್ನು ಮಾಡಿದ್ದರೂ ಕೂಡ ಹತ್ತು ವರ್ಷಕ್ಕೊಮ್ಮೆ ಇದನ್ನು ಪುನರ್ ವಿಮರ್ಶೆ ಮಾಡಬೇಕೆಂಬ ವಿಚಾರವನ್ನು ಸಹ ಅವರು ಹೇಳಿ ಹೋಗಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರವಾಗಿದೆ. ಈ ಹತ್ತು ವರ್ಷಗಳ ಕಾಲ ಮೀಸಲಾತಿಯನ್ನು ಮುಂದುವರಿಸುವುದರ ಬಗ್ಗೆ ದೆಹಲಿಯಲ್ಲಿ ಏನು ರಾಜಕೀಯವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದರು ಎಂಬುದನ್ನು ವಿಶೇಷವಾಗಿ ಈ ವರ್ಗಕ್ಕೆ ಸೇರಿರತಕ್ಕಂತಹ ಜನ ವಿಚಾರ ಮಾಡಬೇಕಾಗುತ್ತದೆ, ಇದರ ಹಿಂದೆ ರಾಜಕೀಯ ಇದೆ ಅನ್ನುವಂಥಾದ್ದನ್ನು ತಿಳಿದುಕೊಳ್ಳಬೇಕಾಗುತ್ತದೆ. ವಿರೋಧ ಪಕ್ಷದ ಸರಕಾರಗಳು ಅಧಿಕಾರಕ್ಕೆ ಬಂದರೆ ಮೀಸಲಾತಿಯನ್ನು ವಿರೋಧ ಮಾಡುತ್ತಾರೆ, ಹತ್ತು ವರ್ಷ ಅಲ್ಲ ಒಂದು ವರ್ಷ ಕೂಡ ಮೀಸಲಾತಿಯನ್ನು ಇಡುವುದಿಲ್ಲ ಎನ್ನುವ ಘೋಷಣೆಯನ್ನು ಬಹಳ ದೊಡ್ಡದಾಗಿ ಕಳೆದ ಚುನಾವಣೆಗಳ ಸಮಯದಲ್ಲಿ ಮಾಡಿದರು. ಅದಕ್ಕೆ ಅವರಿಗೆ ಜನ ಸರಿಯಾದ ಉತ್ತರವನ್ನೇ ಕೊಟ್ಟರು ಅದು ಬೇರೆ ವಿಚಾರ.

ಆದರೆ ಈ ಮೀಸಲಾತಿಯ ಮೂಲಕ ನಾವು ಯಾವ ರೀತಿ ರಾಜಕೀಯವನ್ನು ಮಾಡುತ್ತೇವೆ ಎಂಬುದಕ್ಕೆ ಉದಾಹರಣೆ ಎಂದರೆ ಈ ವರ್ಗದ ಜನರ ಗುತ್ತಿಗೆಯನ್ನು ಪಡೆಯಲಿಕ್ಕೆ ಕೆಲವು ರಾಜಕೀಯ ಪಕ್ಷಗಳು ಕೆಲವು ರಾಜಕೀಯ ಮುಖಂಡರು ಪ್ರಯತ್ನ ಮಾಡುತ್ತಿದ್ದಾರೆ. ಇದನ್ನೇ ಅವರು ಬಂಡವಾಳವನ್ನಾಗಿ ಮಾಡಿಕೊಂಡಿದ್ದಾರೆ. ನಾವೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಉದ್ಧಾರ ಮಾಡುವ ಧಾತಕರು. ನಾವು ಬಿಟ್ಟು ಬಿಟ್ಟರೆ ಈ ವರ್ಗದ ಜನರನ್ನೆಲ್ಲಾ ಸಂಪೂರ್ಣವಾಗಿ ಸುಟ್ಟು ಬಿಡುತ್ತಾರೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಇದು ಮೊದಲನೇ ತಪ್ಪು ನಾವು ಮಾಡುತ್ತಿರುವುದು ಆ ವರ್ಗದ ಜನರು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈಗತಾನೆ ಅನೇಕ ಆಡಳಿತಪಕ್ಷದ ಸದಸ್ಯರು ಮಾತನಾಡಿ ಕಳೆದ ೪೦ ವರ್ಷಗಳಲ್ಲಿ ಈ ವರ್ಗದವರು ಅರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಎಷ್ಟು ಮುಂದುವರಿದಿದ್ದಾರೆ ಎಂಬ ಬಗ್ಗೆ ಹೇಳಿದ್ದಾರೆ. ಸುಮಾರು ೪೦ ವರ್ಷಗಳ ಕಾಲ ಆಡಳಿತ ಸೂತ್ರವನ್ನು ಹಿಡಿದಿದ್ದಂಥ ಪಕ್ಷಗಳ ಮುಖಂಡರು ಮಾತನಾಡಿ ಅವರಿಗೋಸ್ಕರ ಬರುತ್ತಿರುವ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಆ ವರ್ಗದ ಮುಖಂಡರೇ ಆ ಜನರನ್ನು ಶೋಷಣೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ನಾನು ಈ ಮಾತನ್ನು ಹೇಳುವುದಕ್ಕೆ ದು:ಖವಾಗುತ್ತದೆ. ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ಸಿಕ್ಕಬೇಕಾದ ಸೌಲಭ್ಯಗಳು ಕೇವಲ ಕೆಲವೇ ಕುಟುಂಬಗಳಿಗೆ ಗುತ್ತಿಗೆಯಾಗಿದೆ. ಇದು ವಾಸ್ತವಾಂಶ, ನಾನು ಈ ಮಾತನ್ನು ಹೇಳುವುದರಿಂದ ಆ ಕಡೆ ಕೂತಿರತಕ್ಕ ಸದಸ್ಯರ ಮನಸ್ಸಿಗೆ ನೋವಾಗುತ್ತದೆ, ಅವರ ಮನಸ್ಸಿಗೆ ನಾನು ಹೇಳುತ್ತಿರುವುದು ಚುಚ್ಚುತ್ತದೆ. ಆದರೆ ಅವರು ಮಾತನಾಡುವುದಕ್ಕಾಗುತ್ತಿಲ್ಲ. ಬಹುಶಃ ನಾನೂ ಕೂಡ ಆ ಕಡೆ ಕೂತಿದ್ದಿದ್ದರೆ ಈ ಮಾತನ್ನು ಆಡುವುದಕ್ಕೆ ಆಗುತ್ತಿರಲಿಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮಾನ್ಯ ಬಸವಲಿಂಗಪ್ಪನವರು ತ್ಯಾಗ ಮಾಡಬೇಕೆಂದರೆ ಹೇಳಿದ್ದರ ಅರ್ಥ ಇದೇ. ಬಸವಲಿಂಗಪ್ಪನವರು ತ್ಯಾಗ ಮಾಡಬೇಕೆಂದರೆ ವಿಧಾನ ಸಭೆಯಿಂದ ಹೊರಗೆ ಇರಬೇಕೆಂದು ನಾವು ಯಾರೂ ಹೇಳುವುದಿಲ್ಲ. ಅಥವಾ ಮಂತ್ರಿ ಮಂಡಲದಿಂದ ಹೊರಗೆ ಇರಬೇಕೆಂದು ನಾವು ಹೇಳುವುದಿಲ್ಲ. ಅದು ಅವರ ಮತ್ತು ಅವರ ಪಕ್ಷದ ತೀರ್ಮಾನ ಅವರ ಪಕ್ಷದವರು ಮಾನ್ಯ ಬಸವಲಿಂಗಪ್ಪನವರನ್ನೋ ಮುಖ್ಯ ಮಂತ್ರಿಗಳನ್ನಾಗಿ ಮಾಡಲಿ ಅಥವಾ ಶಿವಣ್ಣನವರನ್ನೇ ಮುಖ್ಯ ಮಂತ್ರಿಗಳನ್ನಾಗಿ ಮಾಡಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಅವರು ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಷ್ಟೆ. ಆ ವರ್ಗದವರಿಗೆ ಇರತಕ್ಕ ಮೀಸಲಾತಿಯನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆಂಬುದನ್ನು ಮೊದಲು ನೋಡಲಿ. ಇಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆ ವರ್ಗದ ಜನರನ್ನು ಸಾಮಾಜಿಕವಾಗಿ ಒಟ್ಟಿಗೇ ತರುವುದಕ್ಕೆ ನಾವು ಅಂದರೆ ಮುಖಂಡರಾದವರು ಏನು ಮಾಡುತ್ತಿದ್ದೇವೆಂಬುದು ತಮಗೂ ಗೊತ್ತಿದೆ. ಈಗ ಪರಿಶಿಷ್ಟ ಜಾತಿಯವರನ್ನೇ ತೆಗೆದುಕೊಂಡರೆ ಅವರಲ್ಲಿ ಎಡಗೈನವರು, ಬಲಗೈನವರು ಎಂದು ಭಿನ್ನಾಭಿಪ್ರಾಯವಿದೆ. ಎಡಗೈನವರ ಮನೆಯಲ್ಲಿ ಬಲಗೈಯವರು ಊಟ ಮಾಡಲಿಕ್ಕೆ ತಯಾರಿಲ್ಲ, ಅದೇರೀತಿ ಬಲಗೈನವರು ಎಡಗೈನವರ ಮನೆಯಲ್ಲಿ ಊಟ ಮಾಡಲಿಕ್ಕೆ ತಯಾರಿಲ್ಲ.

ಶ್ರೀ ಕರಿಯಣ್ಣ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು...

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಿಮ್ಮ ಸೀಟಿಗೆ ಹೋಗಿ ಕೂತುಕೊಂಡು ಮಾತನಾಡ್ರಿ. ಮಾನ್ಯ ಅಧ್ಯಕ್ಷರೆ, ಅವರು ಯಾವಾಗ ಮಂತ್ರಿಗಳಾದರೋ ಗೊತ್ತಿಲ್ಲ. ಅವರ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ...

ಶ್ರೀ ಕರಿಯಣ್ಣ.— ನಾನು ಈ ಕಡೆಯೇ ಇರುವುದರಿಂದ ಮಂತ್ರಿ ಆಗುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ.— ಆಗುತ್ತೀರಿ, ಬಹಳ ಬೇಗ ನೀವು ಮಂತ್ರಿಯಾಗುತ್ತೀರಿ. ಮಾನ್ಯ ಅಧ್ಯಕ್ಷರೇ, ಬಲಗೈನವರ ಮನೆಯಲ್ಲಿ ಎಡಗೈನವರು, ಎಡಗೈನವರ ಮನೆಯಲ್ಲಿ ಬಲಗೈನವರು ಊಟ ಮಾಡಲಿಕ್ಕೆ ತಯಾರಿಲ್ಲ. ಅವರವರಲ್ಲೇ ಭಿನ್ನಾಭಿಪ್ರಾಯವಿದೆ. ಇದು ವಾಸ್ತವಾಂಶ ಇದು ಮೊದಲು ಹೋಗಬೇಕು.

ಶ್ರೀ ಕರಿಯಣ್ಣ.— ಮಾನ್ಯ ಅಧ್ಯಕ್ಷರೆ, ಎಲ್ಲ, ಜಾತಿಯವರಲ್ಲೂ, ಎಲ್ಲ ಜನಾಂಗದವರಲ್ಲೂ ಸಹ ಉಪ ಜಾತಿಗಳಿವೆ. ಒಬ್ಬರು ಇನ್ನೊಬ್ಬರ ಮನೆಯಲ್ಲಿ ಊಟ ಮಾಡುವುದಿಲ್ಲ. ಕೇವಲ ಹರಿಜನರಲ್ಲಿ ಮಾತ್ರ ಭಿನ್ನಾಭಿಪ್ರಾಯವಿದೆಯೆಂದು ಮಾನ್ಯ ಸದಸ್ಯರು ನಮ್ಮನ್ನು ದೂಷಣೆ ಮಾಡಿ ನಮಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ವಂಚಿಸುವುದು ಸರಿಯಲ್ಲ. ಇದನ್ನು ಅವರು ಕೈಬಿಡಬೇಕೆಂದು ನನ್ನ ಪ್ರಾರ್ಥನೆ. ಬಸವಲಿಂಗಪ್ಪನವರಂಥ ಸಮರ್ಥ ನಾಯಕರು ಹರಿಜನರ ಮುಖಂಡರಾಗಿರುವಾಗ ಅವರನ್ನು ಈ ಮೀಸಲಾತಿ ಪದ್ಧತಿಯಿಂದ ದೂರವಿಡುವುದು ಸರಿಯಲ್ಲ. ನಾವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಅನೇಕ ಅಪಪ್ರಚಾರಗಳನ್ನು ಬೇರೆಯವರು ಮಾಡುತ್ತಾರೆ. ಇವನು ಚುನಾವಣೆಯಲ್ಲಿ ಗೆದ್ದು ಬಂದರೆ ನಾಳೆ ದೇವಸ್ಥಾನದೊಳಕ್ಕೆ ಬರುತ್ತಾನೆ, ನಾವು ಅವನನ್ನು ಮನೆಗೆ ಕರೆದು ಕಾಫಿ, ತಿಂಡಿ, ಊಟ ಕೊಡಬೇಕಾಗುತ್ತದೆ ಎಂಬ ಭಾವನೆ ಅನೇಕ ಜನರ ಮನಸ್ಸಿನಲ್ಲಿದೆ. ಇಂಥ ಒಂದು ಸಾಮಾಜಿಕ ವ್ಯವಸ್ಥೆ ನಮ್ಮಲ್ಲಿದೆ. ಇದು ಬದಲಾವಣೆಯಾಗಬೇಕು. ಮಾನ್ಯ ಬಸವಲಿಂಗಪ್ಪನವರಾಗಲಿ, ನಾವಾಗಲಿ, ಜನರಲ್ ಸೀಟ್‌ನಲ್ಲಿ ನಿಂತರೆ ಗೆದ್ದು ಬರುವುದು ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ ನಾನು ಎಲ್ಲೂ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಆದರೆ ನಾನು ಹೇಳಿದ್ದನ್ನೇ ಮಾನ್ಯ ಸದಸ್ಯರೂ ಕೂಡ ಪ್ರತಿಪಾದಿಸುತ್ತಿದ್ದಾರೆ. ಅವರಲ್ಲೂ ಕೂಡ ಎಡಗೈನವರು, ಬಲಗೈನವರು ಎಂಬ ಭಿನ್ನಾಭಿಪ್ರಾಯವಿದೆ ಎಂಬುದನ್ನು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಅವರು ಹೇಳಿದಂತೆ ಬೇರೆ ಜಾತಿಗಳಲ್ಲೂ ಉಪ ಜಾತಿಗಳು ಬಹಳ ಇವೆ. ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ನಾವು ಈ ಮೀಸಲಾತಿಯನ್ನು ಇಟ್ಟಿದ್ದೇವೆ. ಅವರ ಅರ್ಥದಲ್ಲಿ ಈ ಮೀಸಲಾತಿ ಚಳುವಳಿ ಉದ್ಭವವಾಗಿರುವುದು ಕೇವಲ ಹರಿಜನರು ಎನ್ನತಕ್ಕಂಥ ಎಡಗೈ ಬಲಗೈನವರಿಗೆ ಮಾತ್ರ ಮೀಸಲಾತಿ ಕೊಡುತ್ತೇವೆ ಎನ್ನುವ ಅರ್ಥದಲ್ಲಿ ಈ ಚಳುವಳಿ ಶುರುವಾಯಿತು. ಆದರೆ ಎಡಗೈ ಮತ್ತು ಬಲಗೈನವರಿಗೆ ಮಾತ್ರ ಈ ಮೀಸಲಾತಿಯನ್ನು ಕೊಡುತ್ತಿಲ್ಲ. ಈ ಮೀಸಲಾತಿ ಎಲ್ಲರಿಗೂ ಶುರುವಾಗಿದೆ ಎಂದು ಅವರು ತಿಳಿದುಕೊಳ್ಳಬೇಕು.

ಚೇರ್‌ಮನ್.— ನಿಮ್ಮ ಅಭಿಪ್ರಾಯಕ್ಕೆ ಯಾರೂ ಆಕ್ಷೇಪ ವ್ಯಕ್ತಮಾಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಎಡಗೈ ಇದೆ, ಬಲಗೈ ಇದೆ. ಲಂಬಾಣಿ ಜನಾಂಗದವರು ಇದ್ದಾರೆ. ಕೊರಚರು ಇದ್ದಾರೆ, ಕೊರಮರು ಇದ್ದಾರೆ. ಹೀಗೆ ಅನೇಕ ಜಾತಿಯವರು ಇದ್ದಾರೆ. ಇದರಲ್ಲಿ

ಬಹಳ ಮುಖ್ಯವಾಗಿ ನಾವು ಯಾವರೀತಿ ವಿವರಣೆ ಮಾಡಬಹುದೆಂದರೆ ಒಂದು ಸ್ಪೃಶ್ಯರು ಮತ್ತೊಬ್ಬರು ಅಸ್ಪೃಶ್ಯರು ಎಂದು. ಇವತ್ತು ಎಷ್ಟು ಜನ ಸ್ಪೃಶ್ಯರು ಹಾಗೂ ಅಸ್ಪೃಶ್ಯ ವರ್ಗಕ್ಕೆ ಸೇರಿದಂಥ ಮುಖಂಡರು ಇದ್ದಾರೆ. ನಾನು ಬೇರೆ ಜಾತಿಯ ಮುಖಂಡರ ಬಗ್ಗೆ ಹೇಳುವುದಿಲ್ಲ. ನೀವು ಈ ಜಾತಿಯಲ್ಲಿಯೇ ಹುಟ್ಟಬೇಕೆಂದು ದೇವರ ಹತ್ತಿರ ಹೋಗಿ ಅಪ್ಲಿಕೇಷನ್ ಹಾಕಿಲ್ಲ. ನಾವೂ ಸಹ ಹಾಕಿಲ್ಲ. ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿರುವ ಹಾಗೆ...

ಚೇರ್‌ಮನ್:— ಯಾರೂ ಹಾಕಿಲ್ಲ.

ಶ್ರೀ ಪಿ ಜಿ. ಆರ್. ಸಿಂಧ್ಯ.— ಅಂದರೆ ಈ ಜಾತಿಯಲ್ಲಿ ಹುಟ್ಟಿರಲಿಲ್ಲ ಎನ್ನುವ ಒಂದು ಕಾರಣಕ್ಕಾಗಿ ನಮಗೆ ಇಲಾಖೆಯ ಬಗ್ಗೆ ಮಾತನಾಡಲಿಕ್ಕೆ ಹಕ್ಕು ಇಲ್ಲವೆ? ಈ ವರ್ಗದ ಜನರ ಗುತ್ತಿಗೆಯನ್ನು ನೀವೇ ತೆಗೆದುಕೊಂಡಿರುತ್ತೀವೆಂದರೆ ಹೇಗೆ ಆಗುತ್ತದೆ. ಬಹುಶಃ ಅವರಿಗೆ ಗೊತ್ತಿರಲಿಕ್ಕೆ ಇಲ್ಲ. ನಾವು ಮಾನ್ಯ ದೇವರಾಜ ಅರಸ್‌ರವರ ವಿರುದ್ಧ ರಾಜಕೀಯ ಮಾಡಿದ್ದೇವೆ. ಆದರೆ ಮಾನ್ಯ ದೇವರಾಜ ಅರಸ್‌ರವರು ರಾಷ್ಟ್ರದ ರಾಜಕಾರಣಕ್ಕೆ ಒಂದು ಹೊಸ ತಿರುವನ್ನು ಕೊಟ್ಟಂಥ ಮುಖಂಡರು. ಮಾನ್ಯ ದೇವರಾಜ ಅರಸ್‌ರವರು ಅಧಿಕಾರದಿಂದ ಹೋಗಬೇಕಾದರೆ ಅದಕ್ಕೆ ಬೇರೆ ಕಾರಣ ಇತ್ತು. ಆಗ ನಮ್ಮದೇ ಸರ್ಕಾರ ಇತ್ತು. ೧೯೭೭ನೇ ಇಸವಿಯಲ್ಲಿ ಕರ್ಪೂರಿ ಠಾಕೂರ್‌ರವರ ಸರ್ಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಮೀಸಲಾತಿಯಲ್ಲಿ ಒಂದು ಸಣ್ಣ ನಾಯಿಂಡ ಜನಾಂಗಕ್ಕೆ ಸೇರಿದಂಥ ಕರ್ಪೂರಿಠಾಕೂರ್‌ರವರು ಮೀಸಲಾತಿಯನ್ನು ಮಾಡಿಲಿಕ್ಕೆ ಹೋಗಲಿಲ್ಲ. ಅದರ ಬಗ್ಗೆ ಮಾತನಾಡಲಿಕ್ಕೆ ಹೋದಾಗ ಅವರು ಅಧಿಕಾರವನ್ನು ಕಳೆದುಕೊಂಡರು. ಗುಜರಾತಿನಲ್ಲಿ ನಡೆದುದು ಏನು? ಅದನ್ನೆಲ್ಲ ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಿಮಗೆ ಮಾತನಾಡಲಿಕ್ಕೆ ನೈತಿಕವಾದ ಹಕ್ಕು ಇದೆ ನೀವು ಆ ವರ್ಗದಲ್ಲಿ ಹುಟ್ಟಿರುವುದರಿಂದ ನಿಮಗೆ ಎಲ್ಲ ಹೊಣೆ ಇದೆ, ಜವಾಬ್ದಾರಿ ಇದೆ ನೀವು ಅದನ್ನು ಅನುಭವಿಸುತ್ತಿದ್ದೀರಿ. ಆದರೆ ದಯವಿಟ್ಟು ತಾವು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏನೆಂದರೆ ನಮಗಿಂತ ಹೆಚ್ಚು ಜವಾಬ್ದಾರಿ ತಮಗೆ ಇದೆ. ಎಡಗೈ ಬಲಗೈ ಎನ್ನತಕ್ಕಂಥ ನಿಮ್ಮಲ್ಲಿರುವ ಭಿನಾಭಿಪ್ರಾಯವನ್ನು ನೀವು ಬದಲಾವಣೆ ಮಾಡಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಅವರದೇ ಆದ ಒಂದು ಹೊಸ ವಿಚಾರಧಾರೆಯನ್ನು ವ್ಯಕ್ತಪಡಿಸಿ ಬುದ್ಧಿಸಮ್‌ನ್ನು ಒಪ್ಪಿಕೊಳ್ಳುವುದಾಗಿ ಕೊನೆಗಾಲದಲ್ಲಿ ಹೇಳಿದ್ದರು. ಆದರೆ ಬಾಬಾಸಾಹೇಬರ ಜಯಂತಿಯನ್ನು ಆಚರಣೆ ಮಾಡತಕ್ಕಂಥ ಜನರು ಯಾರು ? ಪ್ರಾಮಾಣಿಕವಾಗಿ ಈ ಪ್ರಶ್ನೆಯನ್ನು ನಿಮ್ಮ ಆತ್ಮಕ್ಕೆ ಹಾಕಿಕೊಳ್ಳಿ ಬಾಬಾಸಾಹೇಬ್ ಅಂಬೇಡ್ಕರ್ ಎಂದು ಹೇಳಿದರೆ ಒಂದು ವರ್ಗದ ಜನರಿಗೆ ಮಾತ್ರ ಹಿಡಿಸುತ್ತದೆಯೇ ಹೊರತು ಬೇರೆ ಜನರಿಗೆ ಹಿಡಿಸುವುದಿಲ್ಲ. ಇದು ಈ ದೇಶದ ದುರಂತ. ಇದು ನಿಮ್ಮ ಪಕ್ಷದಲ್ಲಿಯೂ ಇದೆ. ನಮ್ಮ ಪಕ್ಷದಲ್ಲಿಯೂ ಇದೆ. ಇದು ಪಕ್ಷಾತೀತವಾದ ಒಂದು ವಿಚಾರ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಮೀಸಲಾತಿಯನ್ನು ಮುಂದುವರಿಸುವುದರಿಂದ ರಾಜಕೀಯ ಲಾಭವನ್ನು ಪಡೆಯಬಹುದು. ಎನ್ನುವ ಮಾತನ್ನು ನಾವು ಎಲ್ಲರೂ ನಿಲ್ಲಿಸಬೇಕು. ಎಲ್ಲ ಪಕ್ಷದವರೂ ನಿಲ್ಲಿಸಬೇಕು. ಅದರ ಜೊತೆಗೆ ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ೪೦ ವರ್ಷಗಳ ಕಾಲದಲ್ಲಿ ಆಗಿರತಕ್ಕಂಥ ಕಾರ್ಯಕ್ರಮ ಏನು ಇದೆ ಆ ಕಾರ್ಯಕ್ರಮಗಳನ್ನು ಮತ್ತೆ ಇನ್ನು ಮುಂದೆ ಬರತಕ್ಕಂಥ ಹತ್ತು ವರ್ಷಗಳಲ್ಲಿ ಅಂದರೆ ಇವತ್ತು ೧೯೯೦ರಿಂದ ೨೦೦೦ನೇ ಇಸವಿಯವರೆಗೆ ಇಂಥ ಪ್ರಶ್ನೆ ಮತ್ತೆಮ್ಮೆ ಬರುತ್ತದೆ, ಇದೇ ವಿಧಾನ ಸಭೆಯಲ್ಲಿ ಬರುತ್ತದೆ, ಆಗ ಮತ್ತೊಮ್ಮೆ ಮುಂದುವರೆಸಬೇಕೆನ್ನುವ ಪ್ರಶ್ನೆ ಬರುತ್ತದೆ. ಈ ಹತ್ತು ವರ್ಷಗಳಲ್ಲಿ ಈ ವರ್ಗದ ಜನರನ್ನು ಮೇಲಕ್ಕೆ ತರಲಿಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆನ್ನುವ ಬಗ್ಗೆ ಯೋಜನೆ ಮಾಡಬೇಕು. ಎಲ್ಲ ಕಡೆ ವೈಫಲ್ಯತೆಯ ಬಗ್ಗೆ ಮಾತನಾಡತಕ್ಕಂಥ ಜನರು ಈ ವರ್ಗದ ಜನರನ್ನು ಮುಂದೆ ತರಲಿಕ್ಕೆ ಏನು ಕಾರ್ಯಕ್ರಮವನ್ನು ಹಾಕಕೊಂಡಿದ್ದೇವೆ ಎನ್ನುವುದರ ಬಗ್ಗೆ ಯೋಜನೆ ಮಾಡಬೇಕು. ಇದು ಕೇವಲ ಕಾಂಗ್ರೆಸ್ ಪಾರ್ಟಿ ಅಥವಾ ಜನತಾ ದಳದವರಿಗೆ ಮಾಡಲು ಸಾಧ್ಯವಾಗುವುದಿಲ್ಲ.

ನಮ್ಮ ರಾಷ್ಟ್ರದ ಐಕ್ಯತೆಯನ್ನು ಪ್ರಶ್ನೆ ಮಾಡದಿರತಕ್ಕ ದೃಷ್ಟಿಕೋನವನ್ನು ಇಟ್ಟುಕೊಂಡು ನಾವು ಮುಂದೆ ಹೋಗಬೇಕಾಗುತ್ತದೆ. ಇದು ಅಷ್ಟೇ ಅಲ್ಲ ಇತ್ತೀಚಿನ ದಿನಗಳಲ್ಲಿ ಮೀಸಲಾತಿ ಚಳುವಳಿ ಬಗ್ಗೆ ನಾವೆಲ್ಲ ಕೇಳುತ್ತಿದ್ದೇವೆ. ಬಡತನದ ಬೆಂಕಿಯಲ್ಲಿ ಬೇಯುತ್ತಿರತಕ್ಕ ಅನೇಕ ವರ್ಗಗಳ ಜನರಿದ್ದಾರೆ. ಯಾವ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಲ್ಲಿ ಸ್ಪೃಶ್ಯರು ಮತ್ತು ಅಸ್ಪೃಶ್ಯರಿದ್ದಾರೋ ಅದೇ ರೀತಿಯಲ್ಲಿ ಬೇರೆ ಹಿಂದುಳಿದ ಸಮಾಜದಲ್ಲೂ ಇದ್ದಾರೆ, ನಮ್ಮ ರಾಜ್ಯದಲ್ಲಿ ಬೇಕಾ

ದಷ್ಟು ಹಿಂದುಳಿದ ಸಮಾಜಗಳು ಇವೆ. ಹಿಂದುಳಿದ ಸಮಾಜದ ಕೆಲವು ಜಾತಿಯವರು ಮುಂದೆ ಬರಬೇಕು. ಬಹುತೇಕ ಜನಾಂಗಗಳಿಗೆ ಶಾಸನಸಭೆಯಲ್ಲಿ, ಲೋಕಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ, ಇವತ್ತು ಇಲ್ಲಿ ಆಂಗ್ಲೋ ಇಂಡಿಯನ್ ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸಿದರು, ಆಗ ನಾವೆಲ್ಲ ಚಪ್ಪಾಳೆ ತಟ್ಟಿ ಸ್ವಾಗತಿಸಿದೆವು ಇದು ಮುಂದುವರಿಯಬೇಕು. ಅದೇ ರೀತಿ ಎಷ್ಟೋ ಹಿಂದುಳಿದ ವರ್ಗದ ಕುಟುಂಬಗಳಿವೆ. ಇದನ್ನೆಲ್ಲ ಮಂಡಲ ಆಯೋಗದವರು ಗುರುತಿಸಿದ್ದಾರೆ. ನಮಗೆ ಬಹಳ ಸಂತೋಷವಾಗುವುದು ಎಂದರೆ. ಮಂಡಲ ಆಯೋಗದ ವರದಿಯನ್ನು ಕಾರ್ಯಾಚರಣೆಗೆ ತರಬೇಕೆಂದು ಕೇಂದ್ರ ಸರ್ಕಾರ ವಿಚಾರ ಮಾಡುತ್ತಿದೆ. ಅದನ್ನು ಕಾರ್ಯಗತ ಮಾಡುವುದರಲ್ಲಿ ಎಷ್ಟರ ಮಟ್ಟಿಗೆ ಕೇಂದ್ರ ಸರ್ಕಾರ ಸಫಲವಾಗುತ್ತದೆಂಬುದನ್ನು ಕಾದು ನೋಡಬೇಕಾಗುತ್ತದೆ. ನಮ್ಮ ಪಕ್ಷದವರು ಎಲ್ಲವನ್ನೂ ಮಾಡಿಬಿಡುತ್ತಾರೆಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ೧೯೭೮ರಲ್ಲಿ ನಮ್ಮ ಪಕ್ಷದವರೇನು ಮಾಡಿದರು ಅದನ್ನು ಪುನಃ ಕಾರ್ಯಾಚರಣೆಗೆ ತರುವುದಕ್ಕೆ ನಿಮಗೆ ಆಗಲಿಲ್ಲ. ಏಕೆಂದರೆ ಈ ಒಂದು ಕೆಲಸವನ್ನು ಮಾಡಲಿಕ್ಕೆ ಬಹಳಷ್ಟು ಶಕ್ತಿಗಳು ವಿರೋಧ ಮಾಡುತ್ತವೆ. ನಮ್ಮಲ್ಲಿ ಏನೂ ತಪ್ಪು ಇಲ್ಲದೆ ಇದ್ದರೂ ಅವನು ದುರಹಂಕಾರಿ, ದಪ್ಪಗಿದ್ದಾನೆ, ಕರ್‍ರಗಿದ್ದಾನೆ ಎನ್ನುತ್ತಾರೆ. ನಿಮ್ಮಲ್ಲಿರುವ ಎಲ್ಲ ಪಟ್ಟಿಯನ್ನು ಕೊಡಿ, ಪತ್ರಿಕೆಗಳಿಗೆ ಪ್ರಚಾರ ಮಾಧ್ಯಮಗಳಿವೆ, ಅವುಗಳನ್ನೆಲ್ಲ ಚೆನ್ನಾಗಿ ಬಳಸಿಕೊಳ್ಳುತ್ತೇವೆಂದರೂ ಹಿಂದುಳಿದ ವರ್ಗದವರು ಮುಂದೆ ಬರುವುದು ಕಷ್ಟ ಸಮಾಜದ ವಿವಿಧ ರಂಗಗಳಲ್ಲಿ ರಿಸರ್ವೇಷನ್ ಸಿಗುತ್ತದೆಂದರೆ ಸಾಧ್ಯವಿಲ್ಲ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮೀಸಲಾತಿ ಮಾಡದೆ ಹೋದರೆ ಗಲಾಟೆ ಆಗಬಹುದು, ದೊಂಬಿ ಆಗಬಹುದು, ರಕ್ತಪಾತವಾಗಬಹುದೆಂಬ ಭಯದಿಂದ ಅನೇಕ ಮುಖಂಡರು ಬಾಯಿ ಮುಚ್ಚಿಕೊಂಡು ಸಮ್ಮತಿ ಕೊಟ್ಟಿದ್ದಾರೆ. ಹಿಂದುಳಿದವರಿಗೆ ಮೀಸಲಾತಿ ಕೊಡುವುದು ದೂರದ ಮಾತು. ನಾವು ನೀವು ಎಲ್ಲ ಪಕ್ಷದವರು ಹೋರಾಟ ಮಾಡಬೇಕಾಗುತ್ತದೆ. ನಾವಿಲ್ಲಿ ಭಾಷಣ ಮಾಡದೆ ಹೋದರೂ ಈ ನಿರ್ಣಯ ಪಾಸ್ ಆಗುತ್ತದೆ. ೨೪ರೊಳಗೆ ಪಾರ್ಲಿಮೆಂಟಿನಲ್ಲಿ ಸಮ್ಮತಿ ಕೊಟ್ಟು ಉತ್ತರ ಭಾರತದಲ್ಲಿ ಚುನಾವಣೆಯನ್ನು ಘೋಷಣೆ ಮಾಡಬೇಕು. ಮಾಡುತ್ತಾರೆ. ಆದರೆ ಇದು ಸದನದ ಕಡತದಲ್ಲಿ ಹೋಗಬೇಕೆಂದು ಹೇಳುತ್ತಿದ್ದೇನೆ. ಹಿಂದುಳಿದ ವರ್ಗದವರಿಗೆ ಕೂಡ ಎಲ್ಲ ವಿಧಾನ ಸಭೆಗಳಲ್ಲಿ ಮತ್ತು ಲೋಕಸಭೆಯಲ್ಲಿ ವಿಶಿಷ್ಟ ಸ್ಥಾನವನ್ನು ಹಾಗೂ ಮೀಸಲಾತಿಯನ್ನು ಇಡಬೇಕಾಗುತ್ತದೆ. ಇದು ಬಹಳ ಜನರಿಗೆ ರುಚಿ ಆಗುವುದಿಲ್ಲ. ಕಹಿಯಾದರೂ ಸತ್ಯ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೆಲವರು ಲೇಬಲ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕೆಲವು ಜಾತಿಯವರಿಗೆ ಏನಾದರೂ ಒಂದು ಆಸೆ. ಅಂಥವರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಬೋರ್ಡ್ ಹಾಕಿಕೊಳ್ಳಬೇಕು ಅನ್ನುತ್ತಾರೆ. ಹಿಂದುಳಿದ ವರ್ಗದ ನಾಯಕರಾಗಿದ್ದ ದೇವರಾಜ ಅರಸುರವರು ಅವರ ಮುಖಂಡತ್ವವನ್ನು ವಹಿಸಿಕೊಳ್ಳದೆ ಹೋಗಿದ್ದರೆ ಅವರು ಮುಂದೆ ಬರುತ್ತಿರಲಿಲ್ಲ. ಶ್ರೀ ದೇವರಾಜ ಅರಸು ಅವರು ಮುಂದುವರಿದ ಜನಾಂಗಕ್ಕೆ ಸೇರಿದವರು. ಅರಸು ನಮ್ಮ ದೇಶದ ರಾಜಮನೆತನದವರು. ಅವರು ಹೇಗೆ ತಮ್ಮದೇ ಆದ ಕಾರ್ಯಕ್ರಮಗಳ ಮೂಲಕ ಹಿಂದುಳಿದ ವರ್ಗದವರ ವಿಚಾರಧಾರೆಗೆ ಸ್ಪಂದನ ಮಾಡಿದ್ದಾರೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಕೆಲವರು ಅವರ ಮೇಲೆ, ಅವರು ಹಿಂದುಳಿದ ವರ್ಗದ ನಾಯಕರು ಎಂದು ಪೈಪೋಟಿ ನಡೆಸಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅನೇಕ ವರ್ಗದ ಜನರಲ್ಲಿ ಈ ಪಟ್ಟಿಯನ್ನು ಹಾಕಿಕೊಳ್ಳಬೇಕಾಗಿದೆ ಎಂದು. ಇದನ್ನು ನಾವೆಲ್ಲರೂ ಸೇರಿ ವಿರೋಧಿಸಬೇಕಾಗುತ್ತದೆ ಯಾರು ನಿಜವಾಗಿ ಅಸ್ಪೃಶ್ಯರು ಇದ್ದಾರೆ ಅವರನ್ನು ಸ್ಪೃಶ್ಯರನ್ನಾಗಿ ಮಾಡುವುದಕ್ಕೆ, ಅವರನ್ನು ಆರ್ಥಿಕವಾಗಿ ಮುಂದೆ ತರಲಿಕ್ಕೆ ನಾವೆಲ್ಲ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾಗುತ್ತದೆ.

೩–೩೦ ಪಿ. ಎಂ.

ಇದು ಅಷ್ಟೊಂದು ಸುಲಭದ ಕೆಲಸವಲ್ಲ ಎಂಬುದನ್ನು ನಮಗೆಲ್ಲಾ ಗೊತ್ತಿದೆ. ಆ ದಿಸೆಯಲ್ಲಿ ಇವತ್ತು ಕೇಂದ್ರಸರ್ಕಾರ ಇದನ್ನು ಮಾಡಲೇಬೇಕಾಗಿತ್ತು. ಈ ಕೆಲಸವನ್ನು ಅವರು ಮಾಡಿದ್ದಾರೆ. ನಮ್ಮ ವಿಧಾನ ಸಭೆಗೂ ಇದು ಬಂದಿದೆ. ಇದು ಒಂದು ಐತಿಹಾಸಿಕವಾದ ನಿರ್ಣಯ. ಈ ನಿರ್ಣಯದ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಒದಗಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ತಂದಿರತಕ್ಕ ತಿದ್ದುಪಡಿಗೆ ಬೆಂಬಲವನ್ನು ಸೂಚಿಸುತ್ತಾ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಇಲ್ಲಿಯವರೆಗೆ ಮಾನ್ಯ ಸದಸ್ಯರು ರಿಸರ್ವೇಷನ್ ಬಗ್ಗೆ ಬಹಳಷ್ಟು ಮಾತನಾಡಿದರು. ನಾನು ಹೇಳತಕ್ಕದ್ದು ಏನೆಂದರೆ ಭಾರತದೇಶ ಸ್ವತಂತ್ರವಾದಮೇಲೆ ಭಾರತದ ನಾಯಕರೆಲ್ಲಾ ವಿಚಾರ ಮಾಡಿ ಈ ರಾಷ್ಟ್ರದಲ್ಲಿ ಯಾವ

ಯಾವ ಜನ ಯಾವ ಪರಿಸ್ಥಿತಿಯಲ್ಲಿದ್ದಾರೆ, ಅವರಿಗೆ ಯಾವ ರೀತಿ ಅನುಕೂಲತೆ ಕೊಟ್ಟರೆ ಬೇರೆಯವರ ಜೊತೆ ಅವರು ಸರಿಸಮಾನರಾಗಿ ಬರುತ್ತಾರೆ ಎಂಬುದನ್ನು ವಿಚಾರ ಮಾಡಿ ಈ ರಿಸರ್ವೇಷನ್ ಇಟ್ಟರು. ಮೊದಲು ರಿಸರ್ವೇಷನನ್ನು ಇಟ್ಟಂಥ ಸಂದರ್ಭದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಯನ್ನು ನೋಡಿದ್ದೇ ಆದರೆ ಅದು ಬಹಳ ಸಣ್ಣದಿತ್ತು ಮತ್ತು ಅದು ಕೆಲವೇ ಜಾತಿಗಳಿಗೆ ಮಾತ್ರ ಸೀಮಿತವಾಗಿತ್ತು. ಆ ಸೀಮಿತವಾದ ಪಟ್ಟಿ ನೋಡಿದಾಗ ನಿಜವಾಗಿ ಅವರಿಗೆ ರಿಸರ್ವೇಷನ್ ಸಿಗುತ್ತದೆ ಎಂಬ ಮಾತು ಕೇಳಿಬರುತ್ತಿತ್ತು. ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ರಿಸರ್ವೇಷನ್ ಇಡಬೇಕೆಂದು ಸಲಹೆ ಮಾಡಿದ್ದಾಗ ಮುಂದೆ ಬರತಕ್ಕ ದಿನಗಳಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್ ಏನು ಇಟ್ಟಿದ್ದಾರೆ ಅದರಲ್ಲಿ ಈ ದೇಶದಲ್ಲಿರತಕ್ಕ ಎಲ್ಲಾ ಜಾತಿ ಜನ ನುಗ್ಗಬಹುದು ಎಂಬುದನ್ನು ತಿಳಿದಿದ್ದರೆ ಅನ್‌ಟಚಬಲಿಟಿ ಇರುವವರಿಗೆ ಮಾತ್ರ ಈ ಸೌಲಭ್ಯ ಎಂದು ಹೇಳುತ್ತಿದ್ದರು. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಇಟ್ಟಿದ್ದಾರೆ. ಅನೇಕ ಮಾನ್ಯ ಸದಸ್ಯರು ಬಹಳಷ್ಟು ಜಾತಿಗಳಿವೆ, ಆ ಎಲ್ಲ ಜನರನ್ನೂ ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಯಲ್ಲಿ ಸೇರಿಸಬೇಕು ಎಂದು ಕೇಳುತ್ತಿದ್ದಾರೆ. ಆದರೆ ಪರಿಸ್ಥಿತಿ ಏನಾಗುತ್ತಿದೆ ಎಂದರೆ ರಿಸರ್ವೇಷನ್ ಯಾರಿಗೆ ಏನು ಮಾಡಲ್ಪಟ್ಟಿತ್ತು ಅದನ್ನು ಮಾಡುವುದಕ್ಕೆ ಕಾರಣ ಏನು ಎಂಬುದನ್ನು ಮರೆಯುತ್ತಿದ್ದೇವೆ. ಈ ದೇಶದಲ್ಲಿ ಅನ್‌ಟಚಬಲಿಟಿ ಜನರೇನಿದ್ದಾರೆ, ಯಾರಿಗೆ ಸರಿಸಮಾನವಾಗಿ ಮಾತನಾಡುವುದಕ್ಕೆ ನಿಲ್ಲುವುದಕ್ಕೆ ಸಾಧ್ಯವಿಲ್ಲ ಆ ಜನರಿಗೆ ರಿಸರ್ವೇಷನ್ ಇರಬೇಕೆಂದು ಆಯಿತು. ಆದರೆ ಈಗ ಇದಕ್ಕೆ ಎಲ್ಲರೂ ನುಗ್ಗುತ್ತಿದ್ದಾರೆ. ಈ ದೇಶದಲ್ಲಿರತಕ್ಕ ಜನ ಏನು ವಿಚಾರ ಮಾಡುತ್ತಿದ್ದಾರೆ ಎಂದರೆ, ಈ ರಿಸರ್ವೇಷನ್ ಬಗ್ಗೆ ಬೇರೆ ಬೇರೆ ರೀತಿಯ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದಾರೆ. ಯಾರಿಗೆ ಅನ್ಯಾಯವಾಗಿದೆ, ಯಾರು ಅಸ್ಪೃಶ್ಯರು, ಯಾರನ್ನು ಮನುಷ್ಯರೆಂದು ತಿಳಿಯುತ್ತಿಲ್ಲ ಅಂಥವರಿಗೆ ಅನುಕೂಲವಾಗಲಿ ಎಂಬ ಭಾವನೆಯಿಂದ ಈ ರಿಸರ್ವೇಷನ್ ಇಟ್ಟಿದ್ದಾರೆಯೋ ಹೊರತು ಬೇರೆಯವರಿಗಲ್ಲ. ಪ್ರತಿ ಸಲ ಜನ ರಿಸರ್ವೇಷನ್ ಬಗ್ಗೆ ಮಾತನಾಡುವುದನ್ನು ನೋಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಈ ರಿಸರ್ವೇಷನ್ ಬಗ್ಗೆ ಬೇರೆ ರೀತಿಯ ಮೂವ್‌ಮೆಂಟ್ ಇದೆ. ರಿಸರ್ವೇಷನ್ ಇರಬಾರದು. ಆ ಜನಾಂಗದವರು ಬಹಳಷ್ಟು ಮುಂದೆ ಬಂದಿದ್ದಾರೆ ಎಂದು ಹೇಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವು ಇಲ್ಲಿ ರಿಸರ್ವೇಷನ್ ಸಿಗಬೇಕು. ಅದು ಮುಂದುವರೆಯಬೇಕು ಎಂದು ಹೇಳುತ್ತಿದ್ದೇವೆ. ಆದರೆ ದೇಶದಲ್ಲಿರತಕ್ಕ ಜನ ಇವರಿಗೆ ಸಿಗತಕ್ಕ ಸವಲತ್ತುಗಳನ್ನು ವಂಚಿತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ನಾವು ಪ್ರತಿಯೊಂದು ಹಂತದಲ್ಲೂ ನೋಡುತ್ತಿದ್ದೇವೆ. ಕ್ಲಾಸ್-೧ ಮತ್ತು ಕ್ಲಾಸ್-೨ ಈ ವರ್ಗಗಳಲ್ಲಿ ರಿಸರ್ವೇಷನ್ ನೋಡಿದರೆ, ನಿಲ್ ಇದೆ. ಇವರಿಗೆ ಕೆಳಮಟ್ಟದಲ್ಲಿ ಮಾತ್ರ ಅಪಾಯಿಂಟ್ ಮಾಡುತ್ತಿದ್ದಾರೆ, ಯಾರು ಕಸ ಗುಡಿಸುತ್ತಾರೆ, ಯಾರು ಚಪ್ರಾಸಿಗಳಿದ್ದಾರೆ ಅಂಥ ಕಡೆ ೧೫ ಪರ್ಸೆಂಟ್ ರಿಸರ್ವೇಷನ್ ಕೊಡುವುದನ್ನು ನಾವು ನೋಡುತ್ತಿದ್ದೇವೆ. ಉಚ್ಚ ಸ್ಥಾನದಲ್ಲಿ ರಿಸರ್ವೇಷನ್ ಕೊಟ್ಟರೆ ಅವರು ಮುಂದೆ ಬಂದು ಬಿಡುತ್ತಾರೆ ಎಂದು ಹೀಗೆ ಮಾಡುತ್ತಿದ್ದಾರೆ. ನಾವು ಮಾತನಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೮ ಪರ್ಸೆಂಟ್ ಮೀಸಲಾತಿ ಇಡಬೇಕು ಅವರೂ ಎಲ್ಲರಂತೆ ಸರಿಸಮಾನರಾಗಬೇಕು ಎಂಬ ಮಾತನ್ನು ಹೇಳುತ್ತೇವೆ. ಆದರೆ ಪ್ರಾಕ್ಟಿಕಲ್ಲಾಗಿ ನೋಡಿದರೆ ಈ ದೇಶದಲ್ಲಿ ಅವರನ್ನು ತುಳಿಯುತಕ್ಕ ಭಾವನೆಯಿಂದ ಕೆಲಸ ಮಾಡುತ್ತಿದ್ದೇವೆ. ಬಹಳಷ್ಟು ಜನ ಮುಂದೆ ಬಂದಿದ್ದಾರೆ ಎಂದು ಕೆಲವರು ಹೇಳಿದರು. ಈ ಹೌಸ್‌ನಲ್ಲಿರತಕ್ಕ ನಮ್ಮ ಕೆಲವು ಮುಖಂಡರುಗಳ ಬಗ್ಗೆ ಕೆಲವರು ಮಾತನಾಡಿದರು.

ಬಸವಲಿಂಗಪ್ಪನವರು, ಹರಿಜನರಲ್ಲ. ಅವರು ಬಹಳ ಮುಂದೆ ಹೋಗಿದ್ದಾರೆ, ಮಲ್ಲಿಕಾರ್ಜುನ ಖರ್ಗೆಯವರು ಹರಿಜನರಲ್ಲ, ಅವರು ಬಹಳ ಶ್ರೀಮಂತರಾಗಿದ್ದಾರೆ, ಅವರು ಬಹಳ ಮುಂದೆ ಹೋಗಿದ್ದಾರೆ ಎಂದು ಹೇಳುತ್ತಿದ್ದಾರೆ. ಕೋಟ್ಯಾಂತರ ಜನರಲ್ಲಿ ಬಸವಲಿಂಗಪ್ಪನವರಂತಹ ಕೆಲವೇ ಮಂದಿ ಬಗ್ಗೆ ತಾವು ಗಮನ ಇಟ್ಟುಕೊಂಡಮೇಲೆ, ಕೋಟ್ಯಾಂತರ ಮಂದಿಯಲ್ಲಿ ಇವರಿಬ್ಬರನ್ನೇ ಎಸ್. ಸಿ. ಪಟ್ಟಿಯಿಂದ ಹೊರಗಡೆ ತೆಗೆದುಹಾಕಿ ಎಂದು ಹೇಳಿದರೆ ಆಯಿತೇ ? ಏಕೆ ಚುಚ್ಚಿ ಮಾತನಾಡುತ್ತೀರಿ ? ಇವತ್ತು ಈ ವರ್ಗದ ಜನರಿಗೆ ಯಾವ ಸೌಲಭ್ಯವೂ ಸಿಗುತ್ತಾ ಇಲ್ಲ. ಇವತ್ತು ಐಆರ್‌ಡಿಪಿಯಲ್ಲಿ ಎಮ್ಮೆ ಆಕಳು ಕೊಟ್ಟು ಸಹಾಯ ಮಾಡಿ ಆತ ಡೆವಲಪ್ ಆಗಿದ್ದಾನೆಂದು ಹೇಳಿ ಆತನಿಗೆ ಮೀಸಲಾತಿ ಮುಂದುವರಿಸುವುದು ಬೇಡ ಎಂದರೆ ಆಯಿತೇ ? ಇವತ್ತು ಆ ಮನುಷ್ಯ ಹಾಲು ಹಿಂಡಿ ಅದನ್ನು ಊರಿನಲ್ಲಿ ಮಾರಲು ಹೊರಟರೆ ಯಾರೂ ಆ ಹಾಲನ್ನು ಕೊಂಡುಕೊಳ್ಳುವುದಿಲ್ಲ, ಹೋಟೆಲ್‌ನವರೂ ಸಹ ಕೊಂಡುಕೊಳ್ಳುವುದಿಲ್ಲ. ಇಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಯಾವ ಮಂದಿ ಈ ಮೀಸಲಾತಿ ಪಟ್ಟಿಯನ್ನು ರದ್ದು ಮಾಡಬೇಕೆಂದು ಹೊರಟಿದ್ದಾರೆ ಅವರನ್ನು ಇವತ್ತು ದೇಶದ್ರೋಹಿಗಳು ಎಂದರೆ ತಪ್ಪಾಗಲಾರದು, ಇದನ್ನು ಯಾರೇ ಇರಲಿ, ಯಾವ ಜಾತಿಯವರೇ ಇರಲಿ ವಿರೋಧ ಮಾಡಬೇಕಾಗುತ್ತದೆ. ಇವತ್ತು ಯಾವುದೇ ಕಛೇರಿಯಲ್ಲಿ

ಎಸ್ ಸಿ ಅಧಿಕಾರಿ ಇದ್ದರೆ ಆತನಿಗೆ ಕೆಪಾಸಿಟಿ ಇಲ್ಲ ಎಂದು ಸರಳವಾಗಿ ಹೇಳುತ್ತಾರೆ. ಬೇರೆ ಜಾತಿಯವರು ಪರ್ವಾಯಿಲ್ಲ ಎನ್ನುವುದು ನಡೆದು ಬಂದಿದೆ. ಸಣ್ಣ ಸಣ್ಣ ಆಫೀಸುಗಳಲ್ಲಿ ಕೆಲಸ ಮಾಡತಕ್ಕ ಎಸ್‌ಸಿಯವರಿಗೆ ಸರಿಯಾಗಿ ಕೆಲಸ ಮಾಡತಕ್ಕದ್ದರ ಬಗ್ಗೆ ಆಸ್ಪದ ಕೊಡುವುದಿಲ್ಲ. ಇವತ್ತು ಕ್ಲಾಸ್–೧, ಕ್ಲಾಸ್–೨ ಪೋಸ್ಟ್‌ಗಳಿಗೆ ಪ್ರಮೋಷನ್ ಕೊಡುವ ಸಂದರ್ಭದಲ್ಲಿ ಎಸ್ ಸಿ ಜನರ ಸರದಿ ಬರುವವರೆಗೆ ಪ್ರಮೋಷನ್ ಕೊಟ್ಟು ಈ ಜನರಿಗೆ ಏನೋ ಕಾರಣ ಕೊಟ್ಟು ನಿಲ್ಲಿಸುತ್ತಾರೆ. ೧೦ ಜನರಲ್ಲಿ ೧೦ನೆಯವನು ಎಸ್ ಇದ್ದರೆ ೯ ಜನರಿಗೆ ಪ್ರಮೋಷನ್ ಕೊಟ್ಟು ೧೦ನೆಯವನಿಗೆ ಪ್ರಮೋಷನ್ ನಿಲ್ಲಿಸುತ್ತಾರೆ. ಈ ಜನ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದುವರೆಯುವರೆಗೆ ಈ ಮೀಸಲಾತಿ ಸೌಲಭ್ಯವನ್ನು ಮುಂದುವರಿಸಬೇಕು. ಇದಕ್ಕೆ ೧೦ ವರ್ಷ ಎಂದು ಅವಧಿಯನ್ನು ನಿಗಧಿ ಮಾಡುವುದರ ಬದಲು ಅವರು ಎಲ್ಲರ ಜೊತೆ ಸಮಾನರಾಗಿ ಬಾಳುವವರೆಗೆ ಇದನ್ನು ಮುಂದುವರಿಸಬೇಕು. ಇವತ್ತು ಈ ಜನ ಆರ್ಥಿಕವಾಗಿ ಮುಂದೆ ಬಂದರೂ ಕೂಡಾ ಸಮಾಜದಲ್ಲಿ ಸ್ಥಾನಮಾನ ಈ ಜನರಿಗೆ ಇಲ್ಲ. ಈ ಜನರು ಶ್ರೀಮಂತನಾದರೂ ಕೂಡಾ ಬೇರೆ ಜನರು ಈತನನ್ನು ಶ್ರೀಸಾಮಾನ್ಯನೆಂದು ಹೇಳುವುದಿಲ್ಲ. ಈ ಜನ ಶೈಕ್ಷಣಿಕವಾಗಿ ಮುಂದೆ ಬರಬಹುದು, ಆದರೆ ಸಾಮಾಜಿಕವಾಗಿ ಮುಂದೆ ಬರುವುದು ಬಹಳ ವಿರಳ. ಎಲ್ಲಿಯವರೆಗೆ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದುವರೆಯುತ್ತಾರೋ ಅಲ್ಲಿಯವರೆಗೆ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಆಸ್ಪದಕೊಟ್ಟ ಅಧ್ಯಕ್ಷರಿಗೆ ನಮಸ್ಕಾರ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಗ್ಗಪ್ಪ ದೇಶಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಹರಿಜನ ಗಿರಿಜನರ ಮೀಸಲಾತಿ ಸೌಲಭ್ಯವನ್ನು ೧೦ ವರ್ಷಗಳವರೆಗೆ ಮತ್ತೆ ಮುಂದುವರಿಸಬೇಕೆಂಬ ಒಂದು ನಿರ್ಣಯವನ್ನು ಏನು ಮಂಡಿಸಲಾಗಿದೆ ಅದನ್ನು ಬೆಂಬಲಿಸುತ್ತಾ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ನಿಜವಾಗಿ ಹೇಳಬೇಕೆಂದರೆ ನಮ್ಮ ಸಮಾಜದಲ್ಲಿ ಶೈಕ್ಷಣಿಕವಾಗಿಯಾಗಲೀ ಆರ್ಥಿಕವಾಗಿಯಾಗಲೀ ಹಾಗೂ ಸಾಮಾಜಿಕವಾಗಿಯಾಗಲೀ ಸ್ವಾತಂತ್ರ್ಯ ಸಿಕ್ಕ ನಂತರ ಈ ಜನರು ಎಲ್ಲಿ ಇದ್ದರೋ ಅಲ್ಲಿಂದ ಸಾಮಾನ್ಯವಾಗಿ ಸ್ವಲ್ಪ ಒಂದು ಹೆಜ್ಜೆ ಮುಂದೆ ಬಂದರೆ ಅದೇ ದೊಡ್ಡ ವಿಷಯ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ ಅವರು ಇನ್ನೂ ಅಲ್ಲೇ ಇದ್ದಾರೆಂದು ಹೇಳುವುದಕ್ಕೆ ಯಾವ ಅಭ್ಯಂತರವೂ ಇಲ್ಲ, ನಿಜವಾಗಿಯೂ ಇವರು ಮುಂದುವರಿದಿಲ್ಲ. ಆರ್ಥಿಕವಾಗಿ ಸರ್ಕಾರ ಎಷ್ಟೋ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಜನರಿಗೆ ಸೌಲತ್ತುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದರೂ ಕೂಡಾ ನಡುವಿನ ಜನ ಅವರ ಸೌಲತ್ತುಗಳನ್ನೆಲ್ಲಾ ಸಾಮಾನ್ಯವಾಗಿ ಕಸಿದುಕೊಂಡು ಬಿಡುತ್ತಾರೆ. ಹಳ್ಳಿಗಾಡಿನಲ್ಲಿ ಐಆರ್‌ಡಿಪಿ ಅಡಿಯಲ್ಲಾಗಲೀ, ವಿಶೇಷ ಘಟಕ ಯೋಜನೆ ಅಡಿಯಲ್ಲಾಗಲೀ ಅಥವಾ ಬೇರೆ ಬೇರೆ ಸ್ಕೀಮ್‌ಗಳಲ್ಲಿ ಅವರಿಗೆ ಯಾವುದೇ ಸೌಲಭ್ಯಗಳನ್ನು ಕೊಟ್ಟರೂ ಅವುಗಳು ಅವರಿಗೆ ಮುಟ್ಟುವುದಿಲ್ಲ.

(ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಇನ್ನು ಶೈಕ್ಷಣಿಕವಾಗಿ ಹೇಳಬೇಕೆಂದರೆ ನಮ್ಮಲ್ಲಿ ವಿಶ್ವವಿದ್ಯಾನಿಲಯಗಳಿವೆ, ಕಾಲೇಜುಗಳಿವೆ, ಹೈಸ್ಕೂಲ್‌ಗಳಿವೆ. ಈ ಎಲ್ಲ ವಿದ್ಯಾಸಂಸ್ಥೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಬೇಕು. ಮೀಸಲಾತಿಯನ್ನು ಅಲ್ಲೂ ಸಹ ಇಡಬೇಕೆಂದು ಕಾನೂನು ಇದೆ; ನಾನೂ ಈ ಸದನದ ಮುಖಾಂತರ ಕೇಳಬಯಸುವುದೇನೆಂದರೆ, ಯಾವ ವಿಶ್ವವಿದ್ಯಾನಿಲಯದಲ್ಲಿ, ಯಾವ ಕಾಲೇಜಿನಲ್ಲಿ ಅಥವಾ ಯಾವ ಹೈಸ್ಕೂಲ್‌ನಲ್ಲಿ ಈ ಮೀಸಲಾತಿಯನ್ನು ಶೇಕಡ ೧೮ರಷ್ಟು ಅನುಸರಿಸಿದ್ದೀರೆಂದು ಈ ಸದನದ ಮುಖಾಂತರ ಕೇಳಬಯಸುತ್ತೇನೆ. ಪ್ರತಿಯೊಂದು ವಿಶ್ವವಿದ್ಯಾನಿಲಯದ ಬಗ್ಗೆ ಕೇಳದೆ ಹೋದರೂ ವಿಶೇಷವಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲಿ ಅಂದರೆ ೧೯೮೪ರಲ್ಲಿ ಚರ್ಚೆಯನ್ನು ಪ್ರಾರಂಭಿಸಿದ್ದೆ. ಅಲ್ಲಿ ಎಷ್ಟು ಜನ ಪ್ರೊಫೆಸರ್ ಇದ್ದಾರೆ, ಎಷ್ಟು ಜನ ರೀಡರ್ಸ್ ಇದ್ದಾರೆ, ಎಷ್ಟು ಜನ ಲೆಕ್ಚರರ್ ಇದ್ದಾರೆ, ಅವರಲ್ಲಿ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮೀಸಲಾತಿ ಪ್ರಕಾರ ಎಷ್ಟು ಇರಬೇಕೋ ಅಷ್ಟು ಇಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದಲೂ ಒಂದೇ ಒಂದು ಪ್ರೊಫೆಸರ್ ಸ್ಥಾನವನ್ನು ಅಲ್ಲಿ ಈ ಜನರಿಗೆ ಕೊಟ್ಟಿಲ್ಲ. ರೋಸ್ಟರ್ ಪ್ರಕಾರ ಪ್ರೊಫೆಸರ್ ಹುದ್ದೆಯು ಎಸ್. ಸಿ. ಯವರಿಗೆ ಇತ್ತೆಂದರೆ, ಆ ಪೋಸ್ಟಿಗೆ ಸಂದರ್ಶನ ನಡೆಸುವುದಿಲ್ಲ. ನನಗೆ ಗೊತ್ತಿರುವ ಹಾಗೆ ಹಿಂದಿ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರೊಫೆಸರ್ ಒಬ್ಬರು ರಿಟೈರ್ಡ್ ಆದರು. ಅವರು ರಿಟೈರ್ಡ್ ಆದನಂತರ ಆ ಸ್ಥಾನವನ್ನು ರೋಸ್ಟರ್ ಪದ್ಧತಿ ಪ್ರಕಾರ ಎಸ್. ಸಿ. ಅವರಿಗೆ

ಕೊಡಬೇಕಾಗಿತ್ತು, ಆದರೆ ಸುಮಾರು ೬–೭ ವರ್ಷಗಳಾದರೂ ಸಹಿತ ಇದುವರೆಗೆ ಆ ಪೋಸ್ಟಿಗೆ ಸಂದರ್ಶನ ಮಾಡಲಿಲ್ಲ. ಏಕೆಂದರೆ ಒಬ್ಬ ಪ್ರೊಫೆಸರ್ ಸ್ಥಾನಕ್ಕೆ ಎಸ್. ಸಿ. ಜನಾಂಗದವರು ಬರುತ್ತಿದ್ದಾರೆಂದು. ರೀಡರ್ ಸಹಿತ ಇಬ್ಬರು ಬಿಟ್ಟು ಬೇರೆಯವರು ಎಸ್. ಸಿ, ಜನ ಯಾರೂ ಇಲ್ಲ. ಲೆಕ್ಚರರ್ಸ್ ಯಾರೂ ಇಲ್ಲ ಇನ್ನು ಹೈಸ್ಕೂಲ್‌ಗಳಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಹೈಸ್ಕೂಲ್‌ನಲ್ಲೂ ಸಹ ರೋಸ್ಟರ್ ಪ್ರಕಾರ ಎಸ್. ಸಿ. ಜನರಿಗೆ ಅಪಾಯಿಂಟ್‌ಮೆಂಟ್ ಕೊಡ ಬೇಕಾಗುತ್ತದೆ; ಆದರೆ ಅನೇಕಾನೇಕ ಕಾರಣಗಳನ್ನು ಕೊಟ್ಟು ಹೇಗೋ ಮಾಡಿ ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಹೋಗಿ ಆ ಪೋಸ್ಟಿಗೆ ಅರ್ಹರಾದ ಎಸ್. ಸಿ, ಜನರು ಯಾರೂ ಇಲ್ಲವೆಂದು ಹೇಳಿ ಆ ಪೋಸ್ಟನ್ನು ಬೇರೆಯವರಿಗೆಂದು ಬರೆಸಿಕೊಂಡು ಬರುತ್ತಾರೆ. ಆಗ ಆ ಸ್ಥಾನವನ್ನು ಬೇರೆಯವರಿಗೆ ಕೊಡುತ್ತಾರೆ. ಏಕೆ ಈಗಾಗುತ್ತದೆ. ಆ ಸ್ಥಾನಕ್ಕೆ ಯಾರು ಎಸ್. ಸಿ.ಯವರು ಯೋಗ್ಯರಲ್ಲವಾ ? ಆ ಪೋಸ್ಟನ್ನು ಎಸ್; ಸಿ. ಜನರಿಗೆ ಕೊಟ್ಟರೆ ಅವರು ಮುಂದೆ ಬರುತ್ತಾರೆ, ಅವರಿಗೆ ಅನುಕೂಲವಾಗುತ್ತದೆ. ಅಥವಾ ಅವರಿಂದ ಹೆಚ್ಚು ದುಡ್ಡು ನಮಗೆ ಸಿಗುವುದಿಲ್ಲವೆಂದು ಹೇಳಿ ಬೇರೆ ಜನರಿಗೆ ಕೊಟ್ಟು ಅವರಿಂದ ೧೫–೨೦ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಒಂದು ದೃಷ್ಟಿಯಿಂದ ಈ ಶಿಕ್ಷಣ ಸಂಸ್ಥೆ ವ್ಯಾಪಾರಿ ಸಂಸ್ಥೆಯಾಗಿವೆ. ಖಾಸಗಿ ಹೈಸ್ಕೂಲ್ ಆಗಲಿ, ಖಾಸಗಿ ಕಾಲೇಜುಗಳಾಗಲಿ, ಅವು ವ್ಯಾಪಾರ ಸಂಸ್ಥೆಗಳಾಗಿ ಬಿಟ್ಟಿವೆ. ಎಸ್. ಸಿ. ಜನರಿಗೆ ಅಲ್ಲಿ ಅವರ ಅಧಿಕಾರವನ್ನು ಅವರ ಹಕ್ಕನ್ನು ಸಂಪೂರ್ಣ ಮೊಟಕು ಮಾಡಿದ್ದಾರೆ, ಈ ದೃಷ್ಟಿಯಿಂದ ಎಸ್. ಸಿ. ಜನರಿಗೆ ಯಾವ ವಿಶ್ವವಿದ್ಯಾನಿಲಯದಲ್ಲೂ ಸೌಲಭ್ಯ ಸಿಕ್ಕುತ್ತಿಲ್ಲ. ತಾವು ಈ ದೃಷ್ಟಿಯಿಂದ ಒಂದು ಸದನದ ಸಮಿತಿಯನ್ನು ನೇಮಿಸಿ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಕಳುಹಿಸಿ, ಎಷ್ಟು ಜನ ಎಸ್. ಸಿ. ಯವರಿಗೆ ಕೊಡಬೇಕಾಗಿತ್ತೋ, ಅಷ್ಟನ್ನು ಕೊಟ್ಟಿದ್ದಾರೋ ಹೇಗೆ, ಎಷ್ಟು ಪ್ರೊಫೆಸರ್‌ಗೆ ಕೊಡ ಬೇಕಾಗಿತ್ತೋ ಅಷ್ಟನ್ನು ಕೊಟ್ಟಿದ್ದಾರೋ ಹೇಗೆ. ಎಷ್ಟು ರೀಡರ್ ಪೋಸ್ಟ್ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿದ್ದಾರೋ ಹೇಗೆ ಎಂಬುದನ್ನು ತನಿಖೆ ಮಾಡಿಸಬೇಕು. ಇದು ಬಹಳ ಗಂಭೀರವಾದ ಪರಿಸ್ಥಿತಿ. ನಮ್ಮ ಕಣ್ಣು ಎದುರಿಗೆ ಇದೆಲ್ಲಾ ಕಾಣುತ್ತಿದೆ. ಇನ್ನು ನಮ್ಮ ರಾಜ್ಯದಲ್ಲಿ ಎಸ್. ಸಿ. ಯವರು ಒಂದು ಸಂಘವನ್ನು ಮಾಡಿಕೊಂಡು ಹೈಸ್ಕೂಲ್ ಅನ್ನು ತೆರೆದರೆ ಅವರಿಗೆ ಮೊದಲನೆಯ ವರ್ಷದಲ್ಲಿ ಗ್ರ್ಯಾಂಟ್ ಕೊಡಬೇಕೆನ್ನುವ ಒಂದು ಪದ್ಧತಿ ಇದೆ. ಆದರೆ ಈ ಸಂಸ್ಥೆಗಳು ಕೇವಲ ನಾಮಕಾವಸ್ಥೆಯ ಸಂಸ್ಥೆಗಳಾಗಿವೆ. ಎಸ್. ಸಿ. ಯವರ ಕೈಯಲ್ಲಿ ಇಟ್ಟುಕೊಂಡು, ಅಲ್ಲೂ ಸಹ ಮುಂದುವರೆದವರನ್ನು ಇಟ್ಟುಕೊಂಡು ಇದೇ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಎಸ್. ಸಿ ಜನರೇ ಅವರಿಗಾಗಿಯೇ ಇಂತಹ ಒಂದು ಪದ್ಧತಿಯನ್ನು ಅನುಸರಿಸುತ್ತಿದ್ದಾರೆಂದರೆ ಇದು ಬಹಳ ದುಃಖಕರವಾದಂತಹ ಮಾತು. ಈ ದೃಷ್ಟಿಯಿಂದ ಇನ್ನೂ ಕೆಲವೊಮ್ಮೆ ಸುಳ್ಳು ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದು ನೌಕರಿ ಪಡೆದುಕೊಳ್ಳುವ ಬಗ್ಗೆ ನಾನು ಅಸೆಂಬ್ಲಿಯಲ್ಲಿ ೧೯೮೮ರಲ್ಲಿ ಒಂದು ಪ್ರಶ್ನೆಯನ್ನು ಹಾಕಿದ್ದೆ.

ಎಷ್ಟು ಜನ ಸರ್ಕಾರಿ ನೌಕರರು ಖಾಸಗಿ ಕಾಲೇಜುಗಳಲ್ಲಿ, ಹೈಸ್ಕೂಲ್‌ಗಳಲ್ಲಿ, ವಿಶ್ವವಿದ್ಯಾ ನಿಲಯಗಳಲ್ಲಿ ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ನೌಕರಿ ಪಡೆದಿದ್ದಾರೆಂದು ಪ್ರಶ್ನೆ ಹಾಕಿದಾಗ, ಆಗಿನ ಮಂತ್ರಿಗಳಾದ ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಉತ್ತರ ಕೊಟ್ಟರು. ಅವರ ಉತ್ತರದಲ್ಲಿ ಸುಮಾರು ಏಳುನೂರು ಜನರಿಗಿಂತ ಹೆಚ್ಚಾಗಿ ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ನೌಕರಿ ಪಡೆದುಕೊಂಡಿದ್ದಾ ರೆಂದು ಹೇಳಿದ್ದಾರೆ. ಇಂತಹವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದಾಗ, ಮಾನ ವೀಯತೆಯ ಆಧಾರದ ಮೇಲೆ ಅವರನ್ನು ಅಲ್ಲೇ ಮುಂದುವರಿಸುವುದಕ್ಕೆ ಅವಕಾಶ ಕೊಡ್ತು ತ್ತಿದ್ದೇವೆಂದು ಹೇಳಿದ್ದಾರೆ. ಅಂದರೆ ಮಾನವೀಯತೆಯ ಆಧಾರದ ಮೇಲೆ ಫಾಲ್ಸ್ ಸರ್ಟಿಫಿಕೇಟ ಕೊಟ್ಟು ನೌಕರಿ ಪಡೆದವರನ್ನು ಕಾಯಂ ಮಾಡುತ್ತೇವೆ ಹಾಗೆಯೇ ಅವರನ್ನು ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿದ ಹಾಗೆ ಆಯಿತು. ವಿಧಾನಸಭೆಗೆ ಬ್ಯಾಡಗಿ ಕ್ಷೇತ್ರದಿಂದ ನನ್ನ ವಿರುದ್ಧ ಒಬ್ಬ ಸ್ವಾಮಿಗಳು ಕಂಟೆಸ್ಟ್ ಮಾಡಿದರು. ಅವರು ನಕಲಿ ಸರ್ಟಿಫಿಕೇಟ್ ಕೊಟ್ಟಿದ್ದರು.

ಅಧ್ಯಕ್ಷರು.— ಅದಕ್ಕೂ ಇದಕ್ಕೂ ಸಂಬಂಧ ಏನು ?

ಡಾ. ಹೆಚ್. ಡಿ. ಲಮಾಣಿ — ಷೆಡ್ಯೂಲ್ಡ್ ಕಾಸ್ಟ್ ಜನರ ಹಕ್ಕನ್ನು ಯಾವ ರೀತಿಯಾಗಿ ಡಿನೈ ಮಾಡುತ್ತಿದ್ದಾರೆ ಅವರು ಏತಕ್ಕೆ ಮುಂದೆ ಬರಲಿಲ್ಲ ಅಂದರೆ ಅವರು ಮುಂದೆ ಬರಲಿಕ್ಕೆ ಅವಕಾಶ ಕೊಡುತ್ತಿಲ್ಲ. ಯಾವುದಾದರೂ ಒಂದು ರೀತಿಯಾಗಿ ಸರ್‌ಪ್ರೈಸ್ ಮಾಡಿ ಅವರನ್ನು ಅಲ್ಲೇ ಇಟ್ಟು, ಮುಂದೆ ಇದೇ ರೀತಿಯಾಗಿ ಮುಂದುವರಿಸಿಕೊಂಡು ಹೋದರೆ ಶತಮಾನಗಳಾದರೂ ಉಳಿಕೆ ಜನರಿಗಿಂತ ಈ ಜನ ಮುಂದೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ನಾವು ಯಾವುದೇ ಕಾರ್ಯಕ್ರಮಗಳನ್ನು ಹಾಕಲಿ ಯಾವುದೇ ಸವಲತ್ತುಗಳನ್ನು ಈ ಜನರಿಗೆ ಕೊಡುವುದಿದ್ದರೆ ಪ್ರಾಮಾಣಿಕವಾಗಿ ಕೊಡೋಣ. ಅಂತಹ

ಕಾನೂನುಗಳನ್ನು ಒಂದು ವೇಳೆ ರಚಿಸುವಂತಹ ಪ್ರಸಂಗ ಬಂದರೆ ಅಂತಹ ಕಾನೂನನ್ನು ರಚಿಸಿ ಈ ಜನರಿಗೆ ಆ ಒಂದು ಹಕ್ಕು ಸಿಕ್ಕುವ ಹಾಗೆ ಏನಾದರೂ ಒಂದು ಕಠೋರವಾದ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಈಗಿರುವ ವ್ಯವಸ್ಥೆಯಿಂದ ಏನೂ ಸಾಧಾರಣೆ ಆಗುವುದಿಲ್ಲ. ಜಿಲ್ಲಾಪರಿಷತ್ತುಗಳಲ್ಲಿ ನಾವು ನೋಡುತ್ತಿದ್ದೇವೆ, ಜಿಲ್ಲಾಪರಿಷತ್‌ಗಳಲ್ಲಿ ಷೆಡ್ಯೂಲ್ಡ್ ಕಾಸ್ಟ್ ಜನರಿಗೆ ಅಭಿವೃದ್ಧಿ ವಿಭಾಗದಲ್ಲಿ ಒಂದು ಕೆಲಸ ಏನು ಸಿಗಬೇಕಾಗಿತ್ತೋ ಅದು ಸಹಿತ ಸಿಗುತ್ತಿಲ್ಲ. ಹರಿಜನರಿಗೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಳನ್ನು ಮಾಡಿಸಿ ನೀರಾವರಿ ಸೌಲಭ್ಯ ಒದಗಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡುವಂತಹ ಒಂದು ವಿಶೇಷವಾಗ ವ್ಯವಸ್ಥೆಯಿಂದೆ. ಆದರೆ ಮೂರು ವರ್ಷಗಳಿಂದ ನಾವು ನೋಡುತ್ತಿದ್ದೇವೆ ಸುಮಾರು ೪೦೦ ಬಾವಿಗಳನ್ನು ತೋಡಿಸುವಂತಹ ವ್ಯವಸ್ಥೆ ಇದ್ದರೂ ಆ ಒಂದು ಗುರಿಯನ್ನು ಮುಟ್ಟಿಲ್ಲ ಇಲ್ಲಿಯವರೆಗೆ ೫೦–೬೦ ಬಾವಿಗಳನ್ನು ಸಹ ನಮ್ಮ ಧಾರವಾಡ ಜಿಲ್ಲೆ ಯೊಳಗೆ ಮಾಡಿಲ್ಲ. ಇದೇ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲೂ ಇರಬಹುದೆಂದು ನನ್ನ ವಾದ. ಈ ದೃಷ್ಟಿ ಯಿಂದ ಹರಿಜನ ಗಿರಿಜನರಿಗೆ ಯಾವ ಸವಲತ್ತುಗಳನ್ನು ನಾವು ಸರ್ಕಾರದಿಂದ ಕೊಡಬಯಸುತ್ತೇವೆ ಅವು ಸರಿಯಾಗಿ ಅವರಿಗೆ ಮುಟ್ಟುತ್ತಾ ಇಲ್ಲ. ಅವುಗಳನ್ನು ಮುಟ್ಟಿಸುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ ಅವರು ಉಳಿದವರ ಜೊತೆ ಮುಂದೆ ಬರಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಏನು ಈ ಒಂದು ಮಸೂದೆಯನ್ನು ತಂದಿದ್ದಾರೆ, ಇದನ್ನು ಬೆಂಬಲಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ವ್ಯವಸ್ಥೆ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ದಿವಸ ಸಂವಿಧಾನ ತಿದ್ದುಪಡಿಯ ಈವೊಂದು ನಿರ್ಣಯಕ್ಕೆ ಸದನದ ಎಲ್ಲ ಸದಸ್ಯರು ಕೂಡ ಒಂದೇ ಧ್ವನಿಯಿಂದ ಸರ್ವಾನುಮತದ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇದೊಂದು ಐತಿಹಾಸಿಕವಾದಂತಹ ನಿರ್ಣಯ. ನಾನು ಮೊದಲೇ ಪ್ರಸ್ತಾಪ ಮಾಡಿದಂತೆ ನಾಲ್ಕನೇ ಬಾರಿ ಈ ಮೀಸಲಾತಿಯ ಒಂದು ಸಂವಿಧಾನದ ತಿದ್ದುಪಡಿಯನ್ನು ಈ ದೇಶದಲ್ಲಿ ಮಾಡುತ್ತಿದ್ದೇವೆ. ನಮ್ಮ ಸಂವಿಧಾನ ತಯಾರಕರ ಒಂದು ಆಸೆ ಏನಿತ್ತು ಎಂದು ಹೇಳಿದರೆ ನಮ್ಮೆಲ್ಲ ಕಾರ್ಯಕ್ರಮಗಳಿಂದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಅನೇಕ ಶತಮಾನಗಳಿಂದ ತುಳಿಯಲ್ಪಟ್ಟ ಈ ಜನಾಂಗವನ್ನು ಈ ದೇಶದ ಮೂಲ ಪ್ರವಾಹದಲ್ಲಿ ಸೇರಿಸಿಕೊಳ್ಳು ವಂತಹ ಒಂದು ಪ್ರಯತ್ನದಲ್ಲಿ ಈವೊಂದು ಮೀಸಲಾತಿಯನ್ನು ಜಾರಿಗೆ ತರಬೇಕು ಎಂದು; ಆದರೆ ಅನೇಕ ಸಾಮಾಜಿಕ ಕಾರಣಗಳಿಂದ ಅಥವಾ ಆರ್ಥಿಕ ಕಾರಣಗಳಿಂದ ಈ ಸಮುದಾಯವನ್ನು ಮೂಲ ಪ್ರವಾಹಕ್ಕೆ ಸೇರಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಒಂದು ಪ್ರದೇಶ ಒಂದು ಜನಾಂಗ ಇದರ ತಾರತಮ್ಯದಿಂದ ನಾವು ಎಲ್ಲರೂ ಕೂಡ ಸಮಾನರು ಎಂದು ಹೇಳಿದರೂ ಕೂಡ ರಾಜಕೀಯ ಸಮಾನತೆ ಯನ್ನು ನಾವು ನಮ್ಮ ಸಂವಿಧಾನದ ಮೂಲಕ ನಮ್ಮ ಜನತೆಗೆ ಕೊಟ್ಟರೂ ಕೂಡ ಆ ರಾಜಕೀಯ ಸಮಾನತೆ ಅರ್ಥಪೂರ್ಣವಾಗಿರಬೇಕು. ಆ ಹಕ್ಕನ್ನು ರಾಜಕೀಯ ಸಮಾನತೆ ಬರೀ ಮತದಾನ ಮಾಡತಕ್ಕ ಒಂದು ರಾಜಕೀಯ ಸಮಾನತೆ ಸಿಕ್ಕಿದ ಕೂಡಲೇ ಎಲ್ಲರಿಗೂ ಒಂದು ಸಮಾನತೆ ಕಲ್ಪನೆ ಯಾಯಿತು ಎಂದು ತಿಳಿದುಕೊಳ್ಳತಕ್ಕ ಭಾವನೆ ಇರಬಾರದು. ಎಲ್ಲಿಯವರೆಗೆ ರಾಜಕೀಯ ಪ್ರಾತಿನಿಧ್ಯದ ಒಂದು ಸಕ್ರಿಯವಾದ ಒಂದು ಪಾಲು ದುರ್ಬಲವರ್ಗದವರಿಗೆ ಬರಲಿಕ್ಕೆ ಸಾಧ್ಯವಾಗಿಲ್ಲವೋ ಅಲ್ಲಿಯವರೆಗೆ ಪರಿಣಾಮಕಾರಿ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ ಬಹುಶಃ ದುರ್ಬಲವರ್ಗದವರಿಗೆ ಸಾಧ್ಯವಾಗುವುದಿಲ್ಲವೆಂಬ ಒಂದು ವಿಚಾರ ಇವತ್ತು ನಮಗೆಲ್ಲ ಅನುಭವಕ್ಕೆ ಬಂದಂತಹ ವಿಚಾರ. ಇವತ್ತು ನಮ್ಮ ಸಮಾಜದಲ್ಲಿ ಮೂಲಭೂತವಾಗಿರತಕ್ಕ ಜಾತೀಯ ಪದ್ಧತಿಗಳು ಹಾಗೂ ಅದರಿಂದ ಉದ್ಭವವಾದಂತಹ ಮತ್ತು ಅದಕ್ಕನುಗುಣವಾಗಿ ಆರ್ಥಿಕವಾಗಿ ರಾಜಕೀಯವಾಗಿ ಉದ್ಭವವಾದಂತಹ ಅಧಿಕಾರಗಳು ಪ್ರಭಾವಗಳು ಮತ್ತು ಸಿವಿಲ್ ಮತ್ತು ರಾಜಕೀಯ ಹಕ್ಕುಗಳು ಅಧಿಕಾರದಲ್ಲಿರತಕ್ಕ ಸರ್ಕಾರದ ಮೇಲೂ ಮತ್ತು ಯಾವ ಸಮಾನ ಹಕ್ಕನ್ನು ಸಾಮಾಜಿಕವಾಗಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಈ ಜನತೆಗೆ ದುರ್ಬಲ ವರ್ಗದವರಿಗೆ ಕೊಡಬೇಕೋ ಅದನ್ನು ತಪ್ಪಿಸತಕ್ಕ ಎಲ್ಲ ಅಡ್ಡ ಗೋಡೆಗಳು ನಿರ್ಮಾಣವಾಗುತ್ತವೆ. ಈವೊಂದು ಶಕ್ತಿಗಳಿಂದ ಪ್ರಭಾವಗಳಿಂದ ನಿಜವಾದ ಒಂದು ಪಾಲು ಈ ದುರ್ಬಲ ವರ್ಗದವರಿಗೆ ಸಿಕ್ಕಲಿಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ಡಾ॥ಬಾಬಾಸಾಹೇಬಾ ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಭೆಯಲ್ಲಿ ದಿನಾಂಕ ೨೫–೧೧–೧೯೪೯ ರಂದು ಒಂದು ಮಾತನ್ನು ಹೇಳಿದ್ದಾರೆ. ಆ ಮಾತು ಅಂದಿಗೆ ಮಾತ್ರ ಸತ್ಯವಲ್ಲ. ಬಹುಶಃ ಈಗ ನಮ್ಮ ದೇಶದ ಅನೇಕ ಪ್ರದೇಶಗಳಲ್ಲಿ, ಅನೇಕ ಕಡೆಗಳಲ್ಲಿ ನಡೆಯುತಕ್ಕ ಕೆಲವು ವಿದ್ಯಮಾನಗಳಿಂದ ನಾವು ಆ ಮಾತುಗಳಿಂದ ಎಚ್ಚರಿಕೆ ವಹಿಸುವುದು ಮಾತ್ರವಲ್ಲ ಜಾಗೃತರಾಗಿ ನಾವು ನಮ್ಮ ಆತ್ಮ ಶೋಧನೆಯನ್ನು ಮಾಡಿ ಕೊಂಡು ಆ ದಿಶೆಯಲ್ಲಿ ಹೆಜ್ಜೆಯನ್ನು ಇಡಬೇಕಾದ ಅವಶ್ಯಕತೆಯಿಂದೆ. ಡಾ॥ಅಂಬೇಡ್ಕರ್‌ರವರು ಆ ದಿವಸ ಏನು ಹೇಳಿದರು ಅಂದರೆ ಅದು ಈ ರೀತಿ ಇದೆ;

"We will have equality in politics and inequality in social and economic life. We must remove this contradiction at the earliest moment or else those who suffer from inequality will blow up the structure of political democracy''

ಡಾ; ಅಂಬೇಡ್ಕರ್‌ರವರು ಹೇಳಿದಂತಹ ಈ ಮಾತನ್ನು ಇವತ್ತು ಕೂಡ ನಾವು ಅರ್ಥೈಸ ಬೇಕಾಗಿದೆ. ಇತ್ತೀಚಿಗೆ ಈವೊಂದು ಸಮಾಜದಲ್ಲಿ ಸಮುದಾಯದ ಹೆಚ್ಚಿನ ಪ್ರಮಾಣ ಈಗಲೂ ಕೂಡ ಒಂದು ಅಸಮಾನತೆಯು ಒಂದು ಸಂಖ್ಯೆಯಲ್ಲಿ ಸಿಲುಕಿ ಬವಣೆ ಪಡತಕ್ಕ ಸಂದರ್ಭದಲ್ಲಿ ಅವರು ಅಂದು ಹೇಳಿದ ಮಾತು ಅವರು ಹೇಳಿ ೦ ವರ್ಷಗಳಾದರೂ ಇವತ್ತಿಗೂ ಕೂಡ ಸಹನೆಯಿಂದ, ತಾಳ್ಮೆಯಿಂದ ಈ ದೇಶದ ಪ್ರಜಾಪ್ರಭುತ್ವದ ಒಂದು ಪದ್ಧತಿಯಲ್ಲಿ ಆವೊಂದು ವ್ಯವಸ್ಥೆಯಲ್ಲಿ ಅವರಿಗಿರತಕ್ಕ ಒಂದು ನಂಬಿಕೆ ಅವರ ಪವಾಡದಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿದಿದೆ. ಅಂಬೇಡ್ಕರ್‌ರವರ ಮಾತಿನ ಹಿನ್ನೆಲೆಯಿಂದ ಇವತ್ತು ನಾವು ತಿಳಿದುಕೊಳ್ಳುವ ವಿಚಾರಗಳು ಅಪಾರ. ಈವೊಂದು ಹೆಜ್ಜೆ ಇಡುವಾಗ ದಕ್ಷಿಣ ಭಾರತದಲ್ಲಿ ಮೊದಲಿನಿಂದಲೂ ಮೀಸಲಾತಿ ವಿರುದ್ಧ ಚಳುವಳಿ ಅಥವಾ ಸಂಘರ್ಷಣೆ ಕಂಡು ಬಂದಿಲ್ಲ. ಇಲ್ಲಿ ಒಂದು ರೀತಿಯ ಹಿಂದುಳಿದವರ ದಲಿತವರ್ಗದವರ ಪರವಾಗಿ ಆಗಿರತಕ್ಕ ರಾಷ್ಟ್ರೀಯ ಪ್ರಜ್ಞೆ ಏನಿದೆ ಅದು ಹೆಚ್ಚು ಜನಸಾಮಾನ್ಯನ ಮತ್ತು ಬಹುತೇಕ ಸಮಗ್ರ ಸಮಾಜದ ಒಪ್ಪಿಗೆ ಪಡೆದು ನಿಂತ ಕಾರಣದಿಂದಲೇ ಅದಕ್ಕೆ ಹೆಚ್ಚಿನ ವಿರೋಧ ಹೆಚ್ಚಿನ ಸಂಘರ್ಷಣೆಯು ದಾರಿಯನ್ನು ಇವತ್ತು ಪಡೆದುಕೊಳ್ಳಲಿಲ್ಲ. ಇನ್ನು ಮುಂದೆಯೂ ಪಡೆದುಕೊಳ್ಳುವುದಿಲ್ಲವೆನ್ನುವ ಭಾವನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಹೆರಾಲ್ಡ್ ಲಾಸ್ಕಿಯವರು ಒಂದು ಮಾತನ್ನು ಹೇಳಿದ್ದಾರೆ ಅದು ಈ ರೀತಿ ಇದೆ;

"Inequal society always live in fear and with a sense of impending disaster in its heart''

ಅಂತಹ ಒಂದು ಸಮಾಜದ ಕಲ್ಪನೆ ನಮ್ಮ ದೇಶದಲ್ಲಿ ಬರಲಿಕ್ಕೆ ಸಾಧ್ಯವಿರದೆ ಇದ್ದಿದ್ದರೆ, ಅಸಮಾನತೆ ಹೋಗಬೇಕಾದರೆ ಆ ಜಾತಿಯನ್ನು ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾದ ಒಂದು ಪರಿಸ್ಥಿತಿ ಬಹುಶಃ ಈ ದೇಶದ ಒಂದು ಪ್ರಗತಿಯ ಮೂಲ ಪ್ರವಾಹದಲ್ಲಿ ಈ ಜನರನ್ನು ಕೊಂಡೊಯ್ಯುವುದು ಹೆಚ್ಚು ಅವಶ್ಯಕವಿದೆ. ಇಂತಹ ಸಿದ್ಧಾಂತವನ್ನು ಕೈಗೊಳ್ಳದಿದ್ದರೆ ಸಮಾನತೆಯ ಸಿದ್ಧಾಂತವನ್ನು ಪರಿಣಾಮಕಾರಿಯಾಗಿ ಅರ್ಥವತ್ತಾಗಿ ಮಾಡದಿದ್ದರೆ ಇಡೀ ಸಮಾಜವೇ ಬದುಕಲಿಕ್ಕೆ ಸಾಧ್ಯವಿಲ್ಲದೆ ಇರತಕ್ಕ ಒಂದು ಪರಿಸ್ಥಿತಿಯನ್ನು ಇವತ್ತು ಆಗುವಂತಹದ್ದನ್ನು ತಪ್ಪಿಸತಕ್ಕದ್ದು ಸಮಾಜದ ಎಲ್ಲರ ಕರ್ತವ್ಯ ಎಲ್ಲರ ಜವಾಬ್ದಾರಿ ಖಂಡಿತವಾಗಿಯೂ ಇದೆ. ಇವತ್ತು ಈವೊಂದು ಮೀಸಲಾತಿಯ ನೀತಿಯ ಬಗ್ಗೆ ನಮ್ಮ ಕರ್ನಾಟಕ ರಾಜ್ಯ ಸರ್ಕಾರವು ಅದರ ಚಿತ್ರವನ್ನು ತನ್ನ ಮುಂದೆ ಇಟ್ಟುಕೊಳ್ಳುವುದು ಒಳ್ಳೆಯದು. ನಮ್ಮಲ್ಲಿ ಯಶಸ್ವಿಯಾಗಿದೆ ಅಥವಾ ಪರಿಣಾಮಕಾರಿಯಾಗಿ ಮುಂದುವರಿದಿದೆ ಬೇರೆ ಬೇರೆ ಸೇವೆಯಲ್ಲಿ ಅಂದರೆ ಸರ್ಕಾರದ ಸೇವೆಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಪೂರ್ತಿಯಾಗಿದೆ ಎಂದು ಹೇಳಿದರೆ ನಾವು ಸಾಧನೆ ಮಾಡಲಿಕ್ಕೆ ಏನೂ ಇಲ್ಲವೆಂದು ಈ ಅಂಕಿ ಸಂಖ್ಯೆ ಗಳನ್ನು ಹೇಳಲಿಲ್ಲ. ದೇಶದ ಅನೇಕ ರಾಜ್ಯಗಳ ಮೀಸಲಾತಿ ನೀತಿಯ ಅನುಷ್ಠಾನ ಪರಿಸ್ಥಿತಿಯನ್ನು ಆವೊಂದು ಪ್ರಮಾಣವನ್ನು ಹೋಲಿಸಿ ನೋಡಿದಾಗ ಅದಕ್ಕೆ ನಾವೆಲ್ಲರೂ ಕಾರಣ ವಿರಬಹುದು. ನಮ್ಮ ರಾಜ್ಯದ ಎಚ್ಚೆತ್ತ ಜನಾಂಗ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಅತ್ಯಂತ ಹೆಚ್ಚಿನ ಪ್ರಮಾಣದ ರಾಜಕೀಯ ಪ್ರಜ್ಞೆ ಆರ್ಥಿಕ ಅಸಮಾನತೆ ಅಥವಾ ಸಮಾಜದ ಅಸಮತೋಲನವನ್ನು ತಡೆದು ನಿಲ್ಲಿಸತಕ್ಕ ಒಂದು ಪ್ರಜ್ಞೆ ನಮ್ಮ ರಾಜ್ಯದ ಜನತೆಯಲ್ಲಿದೆ ಎಂಬುದಕ್ಕೆ ಬಹುಶಃ ನಾನು ಕೊಡತಕ್ಕ ಅಂಕಿಸಂಖ್ಯೆ ಆಧಾರವಾಗುತ್ತದೆನ್ನುವ ವಿಶ್ವಾಸವನ್ನು ಇಟ್ಟು ಕೊಂಡಿದ್ದೇನೆ. 'ಎ' ಕ್ಯಾಟಗರಿಯಲ್ಲಿ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ೧೫ ಪರ್ಸೆಂಟ್ ಕೊಡುವಲ್ಲಿ ನಾವು ೧೩.೯೫ ಪರ್ಸೆಂಟ್ ಉದ್ಯೋಗವನ್ನು ನಾವು ಕೊಟ್ಟಿದ್ದೇವೆ. ಇದರಲ್ಲಿ ೧.೦೫ ಪರ್ಸೆಂಟ್ ಕಡಿಮೆ ಯಾಗಿದೆ. ಬಹುಶಃ ಇನ್ನು ಮುಂದೆ ನಮ್ಮ ಸರ್ಕಾರ ಅದನ್ನು ಸರಿಪಡಿಸತಕ್ಕ ಕೆಲಸ ಮಾಡುತ್ತದೆ. ೧.೦೫ ಪರ್ಸೆಂಟ್ ಅದನ್ನು ತುಂಬಲಿಕ್ಕೆ ಅಷ್ಟು ಕಷ್ಟವಾಗಲಿಕ್ಕಿಲ್ಲ. ಇನ್ನು 'ಬಿ' ಕ್ಯಾಟಗರಿಯಲ್ಲಿ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ೧೫ ಪರ್ಸೆಂಟ್ ಕೊಡಬೇಕಾಗಿತ್ತು ಅದರಲ್ಲಿ ೮.೦೭ ಪರ್ಸೆಂಟ್ ಕೊಡಲಾಗಿದೆ ಇದರಲ್ಲಿ ಸ್ವಲ್ಪ ಕಡಿಮೆಯಾಗಿದೆ. ಇದರ ಬಗ್ಗೆ ಹೆಚ್ಚು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇನ್ನು 'ಸಿ' ಕ್ಯಾಟಗರಿಯಲ್ಲಿ ೧೫ ಪರ್ಸೆಂಟ್ ಕೊಡುವಲ್ಲಿ ೧೨.೧೬ ಪರ್ಸೆಂಟ್ ಕೊಡಲಾಗಿದೆ. 'ಡಿ' ಕ್ಯಾಟಗರಿಯಲ್ಲಿ ೧೫ ಪರ್ಸೆಂಟ್ ಕೊಡುವ ಕಡೆ ೨೧.೫೪ ಪರ್ಸೆಂಟ್ ಕೊಡಲಾಗಿದೆ. ಅದರಲ್ಲಿ ೬.೫೪ ಪರ್ಸೆಂಟ್ ಜಾಸ್ತಿ ಕೊಡಲಾಗಿದೆ. ಒಟ್ಟು ಸರಾಸರಿ ಪರ್ಸೆಂಟೇಜ್ ೧೪.೨೭ ಆದ ಹಾಗಾಯಿತು.

ನಮ್ಮ ಕರ್ನಾಟಕ ರಾಜ್ಯದಲ್ಲಿ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ನೇಮಕಾತಿ ಮಾಡುವಾಗ ಬೇರೆ ಬೇರೆ ಸೇವೆಯಲ್ಲಿ ಈ ರೀತಿ ನೇಮಕ ಮಾಡಲಾಗಿದೆ. 'ಡಿ' ಕ್ಯಾಟಗರಿಯಲ್ಲಿ ೨೧.೫೪ ಪರ್ಸೆಂಟ್ ಕೊಟ್ಟಿದ್ದೇವೆಂದು ಅಷ್ಟಕ್ಕೆ ನಾವು ತೃಪ್ತಿಪಟ್ಟುಕೊಳ್ಳುವ ವಿಚಾರ ಅಲ್ಲ. ನಾವು ಇನ್ನೂ ಹೆಚ್ಚು ಸಾಧನೆ ಮಾಡಬೇಕಾಗಿದೆ.

೪-೦೦ ಪಿ.ಎಂ.

ಒಟ್ಟು ೧೪.೨೭ ಪರ್ಸೆಂಟ್ ಅಂದರೆ, ಅಷ್ಟಾಗಿ ತೃಪ್ತಿಪಟ್ಟುಕೊಳ್ಳುವಂಥ ವಿಚಾರವೇನೂ ಅಲ್ಲ. ಇನ್ನೂ ಸಾಧನೆ ಮಾಡಬೇಕಾಗಿದೆ. ಇನ್ನು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ, ಇದರಲ್ಲಿ ಮಾತ್ರ ೩ ಪರ್ಸೆಂಟ್‌ನಲ್ಲಿ ೨.೪೦ ಪರ್ಸೆಂಟ್ ಆಗಿದೆ. ಅಂದರೆ ಇನ್ನು ೬೦ ಪರ್ಸೆಂಟ್ ಮಾತ್ರ ಕಡಿಮೆಯಾಗಿದೆ. ನಾನು ತಿಳಿದುಕೊಂಡ ಮಟ್ಟಿಗೆ ಇಡೀ ರಾಷ್ಟ್ರದಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯಲ್ಲಿ ಹೆಚ್ಚಿನ ಒಂದು ಪ್ರಮಾಣದ ಸೇವಾವಕಾಶವನ್ನು ಕರ್ನಾಟಕ ರಾಜ್ಯ ಕೊಟ್ಟಷ್ಟು ಬೇರೆ ಯಾವ ರಾಜ್ಯವೂ ಕೊಟ್ಟಿಲ್ಲವೆಂದು ಹೇಳಿದರೆ ಅದರ ಒಂದು ಕೀರ್ತಿ ಕರ್ನಾಟಕದ ಜನತೆಗೆ ಹೋಗುತ್ತದೆ. ದುರ್ಬಲ ವರ್ಗದವರ ಕಷ್ಟ ಸುಖಗಳಿಗೆ ಸ್ಪಂದಿಸತಕ್ಕ ಜನತೆ ಕರ್ನಾಟಕ ರಾಜ್ಯದಲ್ಲಿ ಇದ್ದಾರೆ. ಈ ಸಮಾಧಾನಕರವಾದ ನೆಮ್ಮದಿಯ ಒಂದು ಜೀವನವನ್ನು ಮುಂದೆ ಕೂಡ ಎಲ್ಲಾ ಜನಾಂಗದವರು ನಡೆಸಿಕೊಂಡು ಹೋಗತಕ್ಕ ಒಂದು ಪರಿಸರ ಮುಂದುವರಿಯಲಿ ಎಂದು ಈ ಸಂದರ್ಭದಲ್ಲಿ ನಾನು ಹಾರೈಸುತ್ತೇನೆ. ಇನ್ನು ಬ್ಯಾಕ್‌ಲಾಗ್ ಬಗ್ಗೆ ನಮ್ಮ ಮಾಜಿ ಪ್ರಧಾನಿಗಳಾದ ಶ್ರೀ ರಾಜೀವ್ ಗಾಂಧಿಯವರು ಒಂದು ಯುದ್ಧೋಪಾದಿಯಲ್ಲಿ ತುಂಬಿಸಬೇಕಾಗಿದೆ ಎಂದು ಕೊಟ್ಟಂಥ ಆದೇಶವನ್ನು ನಮ್ಮ ರಾಜ್ಯ ಪಾಲಿಸಿದೆ. ಇದನ್ನು ಪಾಲಿಸಿದ ಕಾರಣದಿಂದ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಜಾತಿಗಳಿಗೆ ಸೇವೆಯಲ್ಲಿ ಸೇರಿಸಿಕೊಳ್ಳುವುದಕ್ಕೆ, ಒಳ್ಳೆಯ ಸಶಕ್ತ ಸರ್ಕಾರ ಆಗಲಿಕ್ಕೆ ಕಾರಣ ಆಯಿತು. ಈ ಬ್ಯಾಕ್‌ಲಾಗ್ ಅನ್ನು ಮಾಜಿ ಪ್ರಧಾನಿಯವರ ಆದೇಶದ ಪ್ರಕಾರ, ೧ನೇ ಜುಲೈ ೧೯೮೯ರಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಕೂಡ ಕೊಟ್ಟು ರಾಜ್ಯ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಈ ಬ್ಯಾಕ್‌ಲಾಗ್ ಏನಿದೆ, ಈ ಇಲಾಖೆಗಳು ಮಾತ್ರವಲ್ಲ ಕಂಪನಿಗಳು, ಕಾರ್ಪೊರೇಷನ್‌ಗಳು ಮತ್ತು ಸರ್ಕಾರದ ಸಹಾಯ ಪಡೆಯತಕ್ಕಂಥ ಎಲ್ಲಾ ಸಂಸ್ಥೆಗಳು ಕೂಡ, ಇದನ್ನು ತುಂಬಿಸಬೇಕೆಂಬ ಆದೇಶವನ್ನು ನಮ್ಮ ಕರ್ನಾಟಕ ಸರ್ಕಾರ ಹೊರಡಿಸಿದೆ. ಇವನ್ನು ನಮ್ಮ ಸರ್ಕಾರ ಪುನರ್ವಿಮರ್ಶೆ ಮಾಡುತ್ತದೆ. ಎಲ್ಲೆಲ್ಲಿ ಲೋಪವಾಗಿದೆ, ಎಲ್ಲೆಲ್ಲಿ ಕೊರತೆಯಿದೆ, ಅದು ಬೋರ್ಡ್‌ಗಳು ಇರಬಹುದು, ಅನುದಾನ ಪಡೆಯುವ ಸಂಸ್ಥೆಗಳು ಇರಬಹುದು ಅಥವಾ ಕರ್ನಾಟಕ ಸರ್ಕಾರದ ನೇರವಾದ ಆಡಳಿತ ಇರತಕ್ಕಂಥ ಸಂಸ್ಥೆಗಳು ಇರಬಹುದು, ಅವುಗಳಲ್ಲಿ ಯಾವುದೇ ರೀತಿಯಲ್ಲಿ ಕೊರತೆ ಆಗದ ರೀತಿಯಲ್ಲಿ, ನಮ್ಮ ರಾಜ್ಯದಲ್ಲಿ ಈ ಮೀಸಲಾತಿ ನೀತಿಯನ್ನು ಪರಿಣಾಮಕಾರಿಯಾಗಿ, ಅರ್ಥಯುತವಾಗಿ ಜಾರಿಮಾಡುವುದಕ್ಕೆ ನಮ್ಮ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಏನೆಂದರೆ ಕೆಲವು ಜನಾಂಗಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಸೇರಿಸಲಿಕ್ಕೆ ಈ ಹಿಂದಿನ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿತ್ತು, ಅದರ ಪರಿಸ್ಥಿತಿ ಯಾವರೀತಿ ಇದೆಯೆಂದು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರ ೫-೧-೧೯೯೦ ರಲ್ಲಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ. ಮತ್ತು ಸನ್ಮಾನ್ಯ ಬಸವಲಿಂಗಪ್ಪನವರು, ಸನ್ಮಾನ್ಯ ನರಸಿಂಹಮೂರ್ತಿಯವರು ಮತ್ತು ಸನ್ಮಾನ್ಯ ರಂಗನಾಥ್ ಅವರು, ಶ್ರೀ ಡಿ. ಕೆ. ನಾಯಕ್ ಅವರು, ಲೋಕಸಭಾ ಸದಸ್ಯರು ಮೊದಲುಗೊಂಡು ಸುಮಾರು ೨೧ ಜನ ಸದಸ್ಯರನ್ನು ಒಳಗೊಂಡಂಥ ಒಂದು ಸಮಿತಿಯನ್ನು ನಾವು ರಚನೆ ಮಾಡಿದ್ದೇವೆ. ಎಲ್ಲಿ ಅದು ಬಿಟ್ಟು ಹೋಗಿದೆ ಅಥವಾ ಯಾವ ಜನಾಂಗ ಅಥವಾ ಜಾತಿ ಬಿಟ್ಟು ಹೋಗಿದೆ ಎಂಬುದನ್ನು ಪರಿಶೀಲನೆ ಮಾಡಿ ವರದಿಯನ್ನು ಕೊಡಬೇಕೆಂದು ಕೂಡ...

ಶ್ರೀ ಆರ್. ವಿ. ದೇಶಪಾಂಡೆ.— ಈ ಸಮಿತಿ ಸರ್ಕಾರದ್ದು. ಇದರಲ್ಲಿ ವಿರೋಧ ಪಕ್ಷದವರು ಯಾರೂ ಇಲ್ಲವೇನು ?

ಶ್ರೀ ಎಂ. ವೀರಪ್ಪಮೊಯಿಲಿ.— ಇದ್ದಾರೆ ಶ್ರೀಮತಿ ಬಿ. ಟಿ. ಲಲಿತಾ ನಾಯಕ್ ಅವರು ಇದ್ದಾರೆ; ಹಾಗೂ ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀಮಾನ್ ಪಿ. ಜಿ. ಆರ್. ಸಿಂಧ್ಯ ಅವರೂ ಇದ್ದಾರೆ. ನಾವು ಸಮಿತಿ ರಚನೆ ಮಾಡುವಾಗ ಜಾಗ್ರತೆ ವಹಿಸಿದ್ದೇವೆ ವಿರೋಧ ಪಕ್ಷದವರನ್ನು ಕೇಳದೆ ಸೇರಿಸಿಕೊಳ್ಳತಕ್ಕ ಸೌಜನ್ಯವನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ; ಪುನರ್ ಸಂಘಟನೆ ಮಾಡೋಣ. ಮೇಲ್ಮನೆ ಸದಸ್ಯರನ್ನೂ ಇದರಲ್ಲಿ ಸೇರಿಸಿದೆ

ಒಳ್ಳೆಯ ಅವಕಾಶ ಇದೆ. ಪ್ರಾಮುಖ್ಯವಾಗಿ, ಏನಂ ದುರ್ಬಲವರ್ಗಕ್ಕೆ ಸೇರಿದಂಥ ಜನರನ್ನು, ಈ ದೇಶದ ಪ್ರಗತಿಯ ಮೂಲ ಪ್ರವಾಹಕ್ಕೆ, ರಾಜಕೀಯವಾಗಿ ಪರಿಣಾಮಕಾರಿಯಾದ ಪ್ರಾತಿನಿಧ್ಯವನ್ನು ಕೊಟ್ಟು, ಅವರ ಹಕ್ಕನ್ನು ಕಾಪಾಡತಕ್ಕ ಈ ತಿದ್ದುಪಡಿಯನ್ನು ಎಲ್ಲರೂ ಒಪ್ಪಿದ್ದಾರೆ; ಮನ್ನಣೆ ಮಾಡಿದ್ದಾರೆ ಈ ಬಗ್ಗೆ ಸಕ್ರಿಯವಾದ ಒಂದು ಚರ್ಚೆ ಈ ಸದನದಲ್ಲಿ ಆಗಿದೆ. ಆದ್ದರಿಂದ ನಾನು ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸಿ, ಈ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರ್ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಹೀಗಿದೆ, 'ಸಂಸತ್ತಿನ ಉಭಯ ಸದನಗಳಿಂದಲ್ಲೂ ಅಂಗೀಕೃತವಾದ ರೂಪದಲ್ಲಿರುವ ಸಂವಿಧಾನ ೩೬೮(೨)ನೇ (ಡಿ) ಅನುಚ್ಛೇದದ ಪರಿಚ್ಛೇದಕ್ಕೆ ಮಾಡಲು ಉದ್ದೇಶಿಸಿರುವ ೧೯೮೯ನೇ ಇಸವಿಯ ಸಂವಿಧಾನದ (೬೨ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ.''

(ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

ಈ ಸಭೆಯು ಅಂಗೀಕರಿಸಿದ ನಿರ್ಣಯವನ್ನು ಸಂಸತ್ತಿಗೆ ಕಳುಹಿಸಿಕೊಡಲಾಗುವುದು.

ಈಗ ಉಳಿದಿರತಕ್ಕಂಥ ಒಂದು ಗಂಟೆ ಕಾಲದಲ್ಲಿ ರೈತರ ಸಾಲವನ್ನು ವಸೂಲ್ಮಾಡುವ ಬಗ್ಗೆ ೬೮ನೇ ನಿಯಮದ ಮೇರೆಗೆ ಚರ್ಚೆಗೆ ತೆಗೆದುಕೊಳ್ಳೋಣ. ಅನಂತರ ನಾಳೆ ಬೆಳಿಗ್ಗೆ ೧೦ ಗಂಟೆಯಿಂದ ಮಾನ್ಯ ಮುಖ್ಯ ಮಂತ್ರಿಯವರು ಈ ಚರ್ಚೆಗೆ ಉತ್ತರ ಕೊಡುತ್ತಾರೆ. ಅನಂತರ, ಗಮನ ಸೆಳೆಯುವ ಸೂಚನೆಗಳು ಕೆಲವು ಇವೆ, ಮೈಸೂರು ದೇವರಾಜ ಮಾರ್ಕೆಟ್‌ನಲ್ಲಿ ಬೆಂಕಿ ದುರಂತ, ಬೆಂಗಳೂರು ರಾಜಾ ಮಿಲ್ಲಿನಲ್ಲಿ ನಡೆದ ಅಗ್ನಿ ದುರಂತ, ಚಾಮರಾಜನಗರ ಮತ್ತು ರಾಮಸಮುದ್ರದ ಕುಡಿಯುವ ನೀರಿನ ಅಭಾವದ ವಿಷಯ ಮತ್ತೆ ೬೮ನೇ ನಿಯಮದ ಪ್ರಕಾರ ಗುಲ್ಬರ್ಗಾ, ಶಹಾಬಾದ್, ಬಳ್ಳಾರಿ ಮುಂತಾದ ಕಡೆಗಳಲ್ಲಿ ಪೋಲೀಸ್ ಲಾಕಪ್ಪಿನಲ್ಲಿ ಆದ ಸಾವಿನ ಪ್ರಕರಣದ ಚರ್ಚೆಯನ್ನು ನಾಳೆ ತೆಗೆದುಕೊಳ್ಳೋಣ. ಈಗ ರೈತರ ಸಮಸ್ಯೆ ಬಗ್ಗೆ ಚರ್ಚೆ,

ಶ್ರೀ ಎಸ್. ಹೆಚ್. ಕೌಜಲಗಿ.— ನಾನು ಕರ್ನಾಟಕ ಗಡಿ ವಿಷಯದಲ್ಲಿ ಗಮನ ಸೆಳೆಯುವ ಸೂಚನೆ ಕಳುಹಿಸಿಕೊಟ್ಟಿದ್ದೇನೆ.

ನಿಯಮ ೬೮ರ ಮೇರೆಗೆ

ರೈತರ ಸಾಲವನ್ನು ಮನ್ನಾಮಾಡುವ ಬಗ್ಗೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ ಬೆಳಿಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ, ಇಂದಿನ ರಾಜ್ಯದ ರೈತರ ಸಮಸ್ಯೆ ಬಗ್ಗೆ ಎದಿರತಕ್ಕಂಥ ಸಾಲ ಮನ್ನಾ ಮತ್ತು ಹೊಸ ಸಾಲದ ವ್ಯವಸ್ಥೆ ಮಾಡುವುದಕ್ಕೆ ಇರತಕ್ಕಂಥ ಮುಖ್ಯವಾದ ಸಂಸ್ಥೆಗಳಾದ ಸಹಕಾರ ಸಂಘಗಳ ಸ್ಥಗಿತ, ಈ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೆ. ತಾವು ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮ್ಮನ್ನು ವಂದಿಸುತ್ತೇನೆ. ನಾನು ಪ್ರಸ್ತಾಪ ಮಾಡಿದ್ದು, ಸಾಲ ಮಜಾ ಮಾಡತಕ್ಕಂಥ ಜವಾಬ್ದಾರಿ ರಾಜ್ಯಕ್ಕಂಗ ಬದ್ಧವಾಗಿ ಕೇಂದ್ರಕ್ಕೆ ಇಲ್ಲ, ಹಣಕಾಸಿನ ಆಯೋಗದ ಪರಿಮಿತಿಯ ಚೌಕಟ್ಟಿನಲ್ಲಿ ಕೂಡಾ ಇದಕ್ಕೆ ಅವಕಾಶ ಇಲ್ಲ. ತಮ್ಮ ಪಕ್ಷದ ರಾಜಕೀಯ ಪ್ರಣಾಳಿಕೆ ಮುಂದಿಟ್ಟು, ರಾಜ್ಯದ ಮುಖ್ಯಮಂತ್ರಿಗಳು ಇದು ಕೇಂದ್ರದ ಸರ್ಕಾರದ ಜವಾಬ್ದಾರಿ ಎಂದು ಹೇಳಿ ತಮ್ಮ ಹೆಗಲಮೇಲಿನ ಜವಾಬ್ದಾರಿಯನ್ನು ಕೇಂದ್ರ ಮೇಲೆ ಹಾಕತಕ್ಕಂಥ ಪ್ರಯತ್ನ ಮಾಡಿದ್ದಾರೆ. ಇದರ ಪರಿಣಾಮವಾಗಿ ಸಾಲದ ವಸೂಲಾತಿ ನಿಲುಗಡೆ ಆಗಿ ಈಗ ಪುನಃ ವಸೂಲಾತಿ ಕಾರ್ಯಕ್ರಮ ನಡೆದಿದೆ. ಸಾಲ ವಸೂಲಾತಿ ಆಗುತ್ತಿಲ್ಲವೆಂದರೆ, ಮತ್ತೆ ಸಾಲ ಕೊಡುವಂಥ ಸ್ಥಿತಿಯೂ ಇಲ್ಲವಾಗುತ್ತದೆ. ಹೀಗೆ ಒಟ್ಟು ಸಹಕಾರಿ ವ್ಯವಸ್ಥೆ ಸ್ಥಗಿತವಾಗಿದೆ. ಇಂದು ರೈತರ ಸಾಲ ಮಜಾ ಮಾಡಬಾರದು ಎಂದು ಯಾರೂ ಹೇಳುವದಿಲ್ಲ. ಎಲ್ಲರೂ ಮಜಾ ಮಾಡಬೇಕೆಂದೇ ಹೇಳುತ್ತಾರೆ, ನಾವು ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಸಹಕಾರ ಅಸ್ತಿತ್ವಕ್ಕೆ ಬಂದರೆ loans up to Rs. 10 000 given to the land les, labourers, artisans etc. as on October 2nd 1989 will be written off